Now, something about the defalcations and mis-appropriation. Mr. Deve Gowda is very cryptic about the co-operatives. I do not know why. Probably the institutions which he has come across in his place I do not know whether they are behaving in that fashion. But by and large, Co-operatives have come to stay.

SRI B B. SAYANAK.—In my area, there are instances where some persons have taken loans in the name of other persons. What is the solution for this?

SRI M.C. NANAIAH.—Sir, these misappropriations and defalcations have taken place in various institutions. I have already said that the total turnover is Rs. 1300 Crores. Out of this amount, the defalcations and misappropriations do not exceed Rs. 1 Crore. Think of the magnitude of the amount. Work out in terms of percentage the misappropriations and defalcations. Also work out the defalcations and misappropriations in public sector undertakings. Then make a comparative statement. It is because this co-operative movement is an unofficial movement, it comes into picture all of a sudden. People are there to look into it. People have an eye on these

ocieties and so it comes to light. The then Minister Sri Mallappa who was coming from my District made a statement on the floor of the House 'ಸಹಕಾರ ಸಂಸ್ಥೆಗಳು ಗೋಣಿಚಾಕ ಸಂಸ್ಥೆಗಳಾದಂತಾಗಿವೆ' ಎಂದು.

ಶ್ರೀ ಡಿ. ಟಿ. ಮಾಯಣ್ಣ,—ರಾಜಕೀಯ ಗೂಳಿಗಳಿಗೆ ಗೋಮಾಳವಿದ್ದಂತೆ ಎಂದು.

SRI M. C. NANAIAH.—But unfortunately that good man is not here There is a criticism about these co-operatives that there is misappropriation and defalcation. Who are these persons who give protection to those persons? I say, majority of them are politicians. I will give one example. Rs. 18/- Lakhs in a society...I am really very proud about my District *i e*, Kodagu. If at all Co-operative movement has taken deep and finest roots, it is in my District. I do not deny the misappropriations and defalcation there also.

SRI B. B. SAYANAK.—What the Leader of Opposition said is about Coorg and not other plalces.

SRI M. C. NANAIAH.—I am thankful to the Hon'ble Member. The misappropriations in our district are less, and That is the reason why we have got our Chief Minister from Coorg. In our district there is mine to repay back the money which we have taken. But such a mine is not there in other districts. I do not want to generalise the issue. I could only confine my remarks pertaining to my district.

Madam, in South Canara District, there is a society by name Sirtadi Society In this society one politician I do not want to name him whoever he may be, was the chairman of that institution and while he was the Chairman he had made membership in that institution of those persons who are not alive at all, who are not born at all. Using his influence he did this and thereafter he built up loan application in collusion with the Secretary of that institution amounting to Rs. 18 lakhs spread over a period of two years. I will narrate the *modus operandi* of this man. Subsequently, this individual became the Director of the District Central Co-operative Bank, he became the Executive Director of the Loan Committee also. He used to collect the loan applications from the Society personally, used to go and present it before the Executive Committee, got all those amount sanctioned and then came beck to this institution. Fictitious bonds, benami applications were prepared, ficti ious signatures were taken and total amount of lost in this deal came to Rs. 18 lakhs.

SRI H. D. DEVEGOWDA.—It is a very small amount.

SRI M. C. NANAIAH —It may be a small amount as far as Karnataka is concerned, but it is a big amount as for as that Society s concerned. This individual after coming to know that such a huge

amount has been misappropriated-I remember even all the M.L.As of South Canara had not the Minister and told that these things have taken place in that Society. Then Sri V.M. Kushnoor has ordered for C.O.D. enquiry also. But, my information is that loan bonds, promisary notes and loan applications to the tune of Rs. 16 lakhs have been completely destroyed. They are not forthcoming. Against whom you are going to file the suits ? How are you going to recover this amount ? C. O D. case is pending. Criminal cases have been launched. But this man has become a big politician today. No action has been taken ? Why ? I very much request the Minister for Co-operation, however high he may be, when such a big amount has been mis-appropriated, when the very institution is under liquidation on account of these benami transactions, to be strong enough to pursue the C.O.D, and punish the culprit. Theso are all the persons who are bringing bad name to the co-oparative institution not all.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ನಾನಯ್ಯನವರು ಬಹಳ ಸೊಗಸಾಗಿ ಮಾತನಾಡುತ್ತಿದ್ದಾರೆ. ಹಿಂದೆ ಇದೇ ಸದನದಲ್ಲಿ ಒಂದು ಕೋಟಿ ರೂಪಾಯಿಗಳ ಅವ್ಯವಹಾರವಾದುದನ್ನು ನಾವು ಸರ್ಕಾರದ ಗಮನಕ್ಕೆ ತಂದಾಗ ಹಿಂದೆ ಇದೇನು ಮಹಾ ಎಂದರು. ಆದರೆ. ಆಗ ತಾವು ಹದಿನೆಂಟು ಲಕ್ಷ ರೂಪಾಯಿಗಳ ಅವ್ಯವಹಾರದ ವಿಷಯವಾಗಿ ಮಾನ್ಯ ಸಚಿವರನ್ನು ಜಿಗ್ಗುತ್ತಿದ್ದಾರೆ ರಾಜ್ಯದ ಹತ್ತೊಂಬತ್ತು ಜಿಲ್ಲಾ ಬ್ಯಾಂಕುಗಳ ಬಗ್ಗ ರಿಜರ್ವ್ ಬ್ಯಾಂಕಿನ Inspection Report ಮತ್ತು Audit Report ಕೊಡಿ ಎಂದು ನಾನು ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ. ಅದಕ್ಕೆ ಸರ್ಕಾರದಿಂದ ಉತ್ತರ ಬಂದಿದ್ದರೆ ಆಗ ಮಾನ್ಯ ನಾನಯ್ಯನವರಿಗೆ ಗೊತ್ತಾಗುತ್ತಿತ್ತು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಲ್ಲಿ ಕುಳಿತು ಕೆಲಸ ಮಾಡುವಾಗ ಇವೆಲ್ಲ ನಮ್ಮ ಗಮನಕ್ಕೆ ಬರುತ್ತಿದ್ದವು.

SRI M. C. NANAIAH.-The Reserve Bank of India is the inspecting authority for all the District Central Co-operative Banks. I think, it would be better if there is a super Reserve Bank to andit the accounts of the Reserve Bank. What all the loopholes are there in the Disirict Central Co-operative Banks are also there in the Reserve Bank. When the transaction is more than Rs. 5 crores certain administrative irregularities will be there. The more important is the defalcation and misappropriation of amounts. If these things are not there, though other irregularities are there, we should not give too much of importance.

ಶ್ರೀ ಹೆಚ್. ಡಿ. ದೇವೇಗೌಡ.—ಅದನ್ನು ಬಿಟ್ಟರೆ ಗೊತ್ತಾಗುತ್ತದೆ.

ಶ್ರೀ ಎಂ. ಸಿ. ನಾನಯ್ಯ.—ನಾನು ಅಪೆಕ್ಸ್ ಬ್ಯಾಂಕಿನ ಉಪಾಧ್ಯಕ್ಷನಾಗಿದ್ದಾಗ ರಾಜ್ಯದ ಹತ್ತೊಂಭತ್ತು ಜಿಲ್ಲೆಗಳ ಕೇಂದ್ರ ಬ್ಯಾಂಕ್‌ಗಳಿಗೆ ಸಂಬಂಧಿಸಿದಂತೆ ರಿಜರ್ವ್ ಬ್ಯಾಂಕ್ ವರದಿಯನು ಪರಿಶೀಲನೆ ಮಾಡುವ ಅವಕಾಶ ಸಿಕ್ಕಿತ್ತು.

ಶ್ರೀ ಹೆಚ್. ಡಿ. ದೇವೇಗೌಡ.—ಅಷ್ಟೇ ತಾನೆ !

ಶ್ರೀ ಎಂ. ಸಿ. ನಾನಯ್ಯ. ತಮಗೆ ಯಾವ ಬ್ಯಾಂಕಿಗೆ ಸಂಬಂಧಿಸಿದ ಮಾಹಿತಿ ಬೇಕು ಹೇಳಿ, ನಾನು ಕಳುಹಿಸಿಕೊಡುತ್ತೇನೆ,

ಶ್ರೀ ಹೆಚ್. ಡಿ. ದೇವೇಗೌಡ.— ರಾಜ್ಯದ ಎಲ್ಲ ಹತ್ತೊಂಭತ್ತು ಜಿಲ್ಲಾ ಬ್ಯಾಂಕುಗಳ ಮಾಹಿತಿಯನ್ನು ಸಭೆಯ ಮುಂದಿಡಲಿ. ಆಗ ಅವುಗಳ ಬಂಡವಾಳವೇನೆಂದು ಗೊತ್ತಾಗುತ್ತದೆ. ರಿಜರ್ವ್ ಬ್ಯಾಂಕಿನಲ್ಲಿ ತಪ್ಪುಗಳಾಗಿದ್ದರೆ ಅದರ ಬಗ್ಗೆ ಲೋಕಸಭಾ ಸದಸ್ಯರು ಕೇಳುತ್ತಾರೆ. ಅವರ ಬಗೆ ಕೇಳಲು ನಮಗೆ ಅಧಿಕಾರವಿಲ್ಲ. ನಮಗೆ ಅಧಿಕಾರವಿರುವುದು ನಮ್ಮ ರಾಜ್ಯದ ಜಿಲ್ಲಾ ಕೇಂದ್ರ ಬ್ಯಾಂಕ್‌ಗಳ ಮಾಹಿತಿ ಕೇಳುವುದಷ್ಟೆ. ರಾಜ್ಯ ಅಪೆಕ್ಸ್ ಬ್ಯಾಂಕಿನ ವರದಿಯನ್ನು ಕೇಳುವುದಕ್ಕೂ ನಮಗೆ ಅಧಿಕಾರವಿದೆ. ನಾನು ಪ್ರಶ್ನೆ ಕಳುಹಿಸಿ ಒಂದೂವರೆ ತಿಂಗಳಾಯಿತು. ಇನ್ನೂ ಅದಕ್ಕೆ ಉತ್ತರ ಬಂದಿಲ್ಲ.

ಶ್ರೀ ಎಂ. ಸಿ. ನಾನಯ್ಯ.— ಮಾನ್ಯ ಮಂತ್ರಿಗಳು ಅದನ್ನು ಖಂಡಿತವಾಗಿ ಒದಗಿಸ ಬಹುದು. It is a public document. It may be confidential as for as the Reserve Bank is concerned. When once it is discussed and compliance report is sent, automatically it becomes a public document. To remove the cloud which is there on the co-operative movement and to remove the cloud which is there in the mind of Sri H. D. Deve Gowda about certain institutions, I very much request the Hon'ble Minister for Co-operation to place those records on the table of the House, because things should be known to all. What is happening anywhere and everywhere should be made known. Nothing will be lost by placing it on the table of the House.

Sri B. B. SAYANAK.—Sir, they have stated in the booklet that there are so many defunct societies and why the Government has not given the correct amount of misappropriation of some of the societies in the State? In my district there are so many societies where misappropriated amount is there. Why the Government has not mentioned how much amount is misappropriated?

SRI M. C. NANAIAE.—This is the answer which the Hon'ble Minister can give. In South Canara, as far as one Institution is concerned, lastime itself I made a statement on the floor of the House about co-operative breweries. I do not say that breweries should go. We should have breweries in co-operative movement so that liquor is made available at cheaper rates. If it is available at the cheaper rate, I will be the first man to buy it. It should be done because it has become very costly. What has happened to the affairs of the institution which was there, the management of which was in the hands of a few people completely swindled the amount from that institution amounting to nearly Rs, 21 lakhs and nearly about 5 to 6 acres of land was purchased for the use of the breweries. Half of the portion of this plot has been demarcated and registered in the name of the President. who has managed that institution. This was brought to the noties of the Government last year. Wheh half of the portion of the plot has gone in the name af the President should not the Government look into it and take it back? If the Government decided to hand over this on lease basis to one of the entrpreneurs, who had invested lakhs of rupees and who was made the Managing

Director of that institution the Government did not come forward to give it to him ? At the in tance of the Government they wanted to revive that institution and enter epreneurs came forward, paid the money. Ultimately the Government did not take any decision. Why ?

4-30 P.M.

Now what is the fate of that institution? Who are the persons involved there? I raised this issue in my last budget speech. So far nothing has been done.

SRI A.B. JAKANUR.—May I know the name of the institution?

SRI M.C. NANAIAH.—It is Karnataka Co-operative Breweries. An amount of Rs. 21 lakhs is in involved in this scandal. And there what has happened was green grapes be ame blue grapes. It is about 4 miles from Bangalore. I would very much request the Hon' ble Minister for Co-operation to look into this matter. The Government should take serious note of these things and cleanse the co-operative institutions. I do not say all of them are bad. But there are some bad people. After all in every movement, in every sector there are some persons who indulge in anti-social activities.

“ಕೇರಿ ಇದ್ದ ಕಡೆ ಹೊಲಸು ಇದ್ದೇ ಇರುತ್ತೆ ಸಹಕಾರಿ ಸಂಸ್ಥೆಗಳ ಮೇಲೆ ಕೆಲವು ಜನರಿಗೆ ಇರ ತಕ್ಕ ಮನೋಭಿಪ್ರಾಯ ಬದಲಾವಣೆಯಾಗಲೇ ಬೇಕು. There is no substitute for co operatives in our country. So, it is for the co-operators to make it more viable institutions. At the same time where ever ill it should be brought to the notice of the Government. It should be brought to the notice of the authorities concerned and it should be rectified. If this is done, well the Co-operative movement in Karnataka will certainly be the best in the country. and within a period of 5years it will stand first in our country. To conclude Madam some years back for this Co-operative Department there was a Board know as Co-operative Development Board. It has ceased to function since about 3 years. Some leading cooperators all over the State were Members of that Board and that Board use to meet once in a month. I do not see for what reason that Board has not been functioning. For that Board the Minister himself was the Chairman. I would very much request the Hon' ble Minister to review that Board and appoint best co-operators and the legislotors coming from the co-operative movement. Let that Board meet periodically once or twice in a month and let the Board take certain far reaching decisions to improve the image of the rural areas of our State. Now, the Hon'ble Chief Minister is before us. Therefore, I would request the Hon ble Chief Minister to review the

Consultative Committees for the departments. This Committee is really very useful. The concerned departments could as well bring the bills before the Committee and discuss various aspects and take opinion of the members before it is brought before this House. I would request the Chief Minister to review the Consultative Committees for all the departments so that the wellfare measures taken up by the Government could be implemented in a progressive way.

SRI R. GUNDU RAO.—We have taken a decision in this regard. The Consultative Committee for each department will be constituted.

SRI M.C. NANAIAH.—I am very grateful to the Chief Minister for having conceded this point, Madam. I have one more submission to make. It is about nominations to Co-operative Societies. kindly do away with the nominations. I would request the Hon ble Chief Minister to do away with the nominations. I request the Chief Minister not to yield to any sort of pressures either from M.L.As or Non-officials.

ಶ್ರೀ ಸಿ. ಎ. ಚಂದ್ರೇಗೌಡ.- ಸ್ವಾಮಿ ಮೈನಾರಿಟೀಸ್‌ಗೆ ಮತ್ತು ಅಲ್ಪಸಂಖ್ಯಾತರಿಗೆ ನಾಮಿನಿ ಮಾಡತಕ್ಕಂಥಾದ್ದು ಇದೆ ಇಂಥಾದ್ದನ್ನು ಬೇಡ ಅಂದರೆ ಅದಕ್ಕೆ ಅರ್ಥ ಏನು ಸ್ವಾಮಿ?

SRI M. C. NANAIAH.—We are in democratic set up. ಮೈನಾರಿಟಿಸ್‌ಗೆ ಕೊಡತಕ್ಕಂಥಾದ್ದನ್ನು ಕೊಟ್ಟಿದೆ. The object of the Government is to protect the funds of the Government given there. It is not give representations to minorities or the backward classes. It has been done wherever the share capital of the Government exceeded more than 5 lakhs or 50%. Don't try to deviate things. So, I request the Hon. ble Chief Minister to do away with the nominations and to delete Section 53A.

Last point is, if one individual become defaulter he is to be disqualified, I have no objection. But he shall not be continued as Director. In fact we have taken a decision in the previous Committee to bring an ordinance to Section 29. I would very much request the Hon' ble Minister to bring an Ordinance after the session and amend Section 29. I also appeal to the Government to dispose of the applications pending before the Government. With these words I conclude and hope that the Government would intensify the Co-operative movement in Karnataka thus establishing viable institutions in the Co-operative field, With these remarks, I thank the Chair for having given me this much of time to speak on this demand.

† ಶ್ರೀ ಜಿ. ಕೆ. ತಕ್ಕೇಡ್ (ಪರಸಗಡ).—ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ನಾನಯ್ಯನವರು ಬಹಳ ಸಮರ್ಪಕವಾಗಿ ಸಹಕಾರ ಚಳುವಳಿಯ ಬಗ್ಗೆ ಮಾತನಾಡಿದ್ದಾರೆ. ನಾನು ಮಾನ್ಯ ಸಹಕಾರ

ಮಂತ್ರಿಗಳು ತಂದಿರತಕ್ಕ ಬೇಡಿಕೆಯನ್ನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ. ಶ್ರೀಮಾನ್ ನಾನಯ್ಯನವರು ಹೋದ ಸಲ ಟ್ರೆಸರಿ ಬೆಂಚಿನಲ್ಲಿದ್ದರೂ. ಸಹಕಾರ ಬೇಡಿಕೆ ಮೇಲೆ ಬಹಳ ಚೆನ್ನಾಗಿ ಮಾತನಾಡಿದ್ದರು. ಅವರು ಏನು ಒಂದು ಮಾತನ್ನು ಹೇಳಿದ್ದಾರೆಂದರೆ,

"There can be no substitute for co-operation however much we think of it that these institutions arebad"...ಎಂದು.

ಇವತ್ತು ನಾವು ಒಬ್ಬ ವ್ಯಕ್ತಿಯಲ್ಲಿಯೇ ದೋಷವನ್ನು ಕಾಣುತ್ತೇವೆ. ಸಹಕಾರ ಪದ್ಧತಿಯಲ್ಲಿ ದೋಷ ಕಂಡರೆ ರಾಷ್ಟ್ರೀಕರಣ ಮಾಡಬಹುದು ಎನ್ನತಕ್ಕ ಮಟ್ಟಕ್ಕೆ ಬರುತ್ತೇವೆ. ಭಾರತದಂತಹ ಪ್ರಜಾ ಪ್ರಭುತ್ವ ದೇಶದಲ್ಲಿ ಸಹಕಾರ ಪದ್ಧತಿಯಿಂದ ನಾವು ಜನತೆಯ ಆಶೋತ್ತರಗಳನ್ನು ಈಡೇರಿಸಬೇಕಾಗಿದೆ. ನಮ್ಮ ದೇಶದಲ್ಲಿ ೬೬ ಕೋಟಿ ಜನಸಂಖ್ಯೆ ಇದೆ. ಅದರಲ್ಲಿ ೧೦೦ಕ್ಕೆ ೬೬ ಭಾಗ ಬಡತನದ ರೇಖೆಯ ಕೆಳಗಿದ್ದಾರೆ. ಹೋದ ಸಲ ಮಾನ್ಯ ಕಂಸನೂರು ಅವರು ಸಹಕಾರ ಮಂತ್ರಿಗಳಾಗಿದ್ದಾಗ ರಿಸರ್ವ್ ಬ್ಯಾಂಕ್‌ನ ಒಕ್ಕಣಿಕೆಯನ್ನು ಹೇಳಿದ್ದಾರೆ. ರಿಸರ್ವ್ ಬ್ಯಾಂಕ್ ಹೇಳಿದಂತಹ ಅಭಿಪ್ರಾಯದಲ್ಲಿ ಬಡತನ ಇರತಕ್ಕ ಭಾರತ ದೇಶದಲ್ಲಿ ಬಡ ಜನತೆಗೆ ಆರ್ಥಿಕ ಸವಲತ್ತುಗಳನ್ನು ಒದಗಿಸಿಕೊಡಬೇಕಾದರೆ ಸಹಕಾರ ಪದ್ಧತಿಯಿಂದಲೇ ಹೋಗಬೇಕಾಗಿದೆ.

ಅಧ್ಯಕ್ಷರೆ, ಈ ದೇಶದಲ್ಲಿ ಒಂದು ಕಡೆ ಬಂಡವಾಳ ಶಾಹಿ ಜನ, ಮತ್ತೊಂದು ಕಡೆ ಬಡಜನ. ಇವೊತ್ತು ಬಂಡವಾಳ ಶಾಹಿ ಜನ ಅನೇಕ ರೀತಿಯಿಂದ ಬಡ ಜನರನ್ನು ಶೋಷಣೆಮಾಡಿ ಅವರ ಆರ್ಥಿಕ ಪರಿಸ್ಥಿತಿಯನ್ನು ಹದಗೆಡಿಸುವ ಪರಿಸ್ಥಿತಿ ಇದ್ದಾಗ ಇವೊತ್ತು ಸಹಕಾರಿ ಪದ್ಧತಿ ಆಗಲಿ, ಜನತೆಯ ಆರ್ಥಿಕ ಜೀವನದಲ್ಲಿ ಆಗಲಿ ಒಂದು ಹೊಸ ಕ್ರಾಂತಿ ಮಾಡಬೇಕಾಗುತ್ತದೆ. ಶ್ರೀಮಾನ್ ನಾನಯ್ಯನವರು ಇವೊತ್ತು ಭಾಷಣ ಮಾಡಿದ್ದನ್ನು ಕೇಳಿದಾಗ ಅವರು ಈ ಕರ್ನಾಟಕ ಸರ್ಕಾರದ ಸಹಕಾರಿ ಮಂತ್ರಿಗಳು ಮಂಡಿಸಿದಂಥ ಮುಂಗಡ ಪತ್ರವನ್ನು ಹೃದಯಪೂರ್ವಕ ಸ್ವಾಗತ ಮಾಡಿದರು ಅಂತ ಅನ್ನಿಸಿತು. ಏಕೆಂದರೆ ಅವರು ಸಹಕಾರಿ ಪದ್ಧತಿಯಲ್ಲಿ ಪಳಗಿದವರು, ಸಹಕಾರಿ ಕ್ಷೇತ್ರದಲ್ಲಿ ಅನೇಕ ರೀತಿಯಿಂದ ಅನುಭವ ಪಡೆದವರು. ಈ ಸಹಕಾರಿ ಕ್ಷೇತ್ರದಲ್ಲಿ ಎರಡು ಮಾತನ್ನು ಅವರು ಸ್ಪಷ್ಟವಾಗಿ ಹೇಳುತ್ತಿದ್ದರು. ಅದೇನೆಂದರೆ, ಇದರಲ್ಲಿ ರಾಜಕಾರಣ ಇರಬಾರದೆಂದೂ, ಇದು ಮುಕ್ತವಾಗಿರಬೇಕೆಂದೂ, ಮತ್ತೆ ಅಧಿಕಾರೇತರರು ಮುಕ್ತವಾಗಿರಬೇಕೆಂದು ಹೇಳಿದರು. ಇದು ಹೇಗೆ ಆಗುತ್ತದೆ ? ಇವೊತ್ತು ಮಾನ್ಯ ಸದಸ್ಯರು ರಾಜಕಾರಣದಿಂದ ಮುಕ್ತವಾಗಿರಬೇಕು, ಅಂದರೆ ಇವೊತ್ತು ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡಿ, ಅನಂತರ ಜಿಲ್ಲಾ ಬ್ಯಾಂಕುಗಳಲ್ಲಿ, ಅಪೆಕ್ಸ್ ಬ್ಯಾಂಕುಗಳಲ್ಲಿ, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳಲ್ಲಿ, ಅನಂತರ ಶಾಸನ ಸಭೆಗೆ, ಸಂಸತ್ತಿಗೂ ಸೇರುವಂತಾದ್ದು ಇದೆ. ಇದನ್ನು ಎಲ್ಲಿಯಾದರೂ ನೋಡಿ ಮೊದಲು ಸಹಕಾರಿ ಕ್ಷೇತ್ರದಲ್ಲಿ ಇರಬೇಕಾಗುತ್ತದೆ. ಈ ಕ್ಷೇತ್ರ ಮುಂದಿನ ರಾಜಕಾರಣಿಗಳಿಗೆ ಮಾರ್ಗದರ್ಶನ ಮಾಡುವ ಸಂಸ್ಥೆ. ಮುಂದಿನ ರಾಜಕಾರಣಿಗಳನ್ನು ತಯಾರು ಮಾಡುವ ಸಂಸ್ಥೆ. ೬ ವರ್ಷಗಳ ಕಾಲ ಒಂದು ಸಂಘ ಸಂಸ್ಥೆಯಲ್ಲಿ ಅಧ್ಯಕ್ಷರಾಗಿದ್ದವರು ಮುಂದೆ ಆಗಬಾರದು ಅಂತ ನಿಯಮ ಮಾಡಿದರು. ನಾವು ಪರಂಪರೆ ನೋಡಿದ್ದೇ ಆದರೆ ನಮ್ಮ ಜಿಲ್ಲೆಯಲ್ಲಿ ಒಬ್ಬರು ೩೦ ವರ್ಷದವರೆಗೆ ಒಂದು ಬ್ಯಾಂಕಿನ ಅಧ್ಯಕ್ಷರಾಗಿದ್ದರು. ಅವರು ಇವೊತ್ತು ಇಲ್ಲ, ತೀರಿಕೊಂಡು ಹೋಗಿದ್ದಾರೆ. ಒಂದು ಸೊಸೈಟಿಯಲ್ಲಿ ಸುಮಾರು ೩೦ ವರ್ಷಗಳಿಂದಲೂ ಇದ್ದವರೇ ಇದ್ದರು. ಪಟ್ಟಭದ್ರಹಿತಾಸಕ್ತಿಗಳ ಕೈಯಲ್ಲಿ ಸಹಕಾರಿ ಸಂಘಗಳು ಸಿಕ್ಕಿದ್ದವು ಪ್ರಾಥಮಿಕ ಬ್ಯಾಂಕ್ ಆಗಲಿ, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಆಗಲಿ, ಜಿಲ್ಲಾ ಮಧ್ಯವರ್ತಿ ಬ್ಯಾಂಕ್ ಆಗಲಿ, ಸಣ್ಣ ಸಣ್ಣ ಸೊಸೈಟಿಗಳನ್ನು ತೆಗೆದುಕೊಳ್ಳಿ, ನಮ್ಮಲ್ಲಿರತಕ್ಕ ೨೩ ಸಾವಿರ ಸೊಸೈಟಿಗಳು ಏನು ಇವೆ, ಅಲ್ಲಿ ಏನು ನಡೆಯುತ್ತದೆ ಎಂಬುದನ್ನು ನೋಡಿದರೆ ಗೊತ್ತಾಗುತ್ತದೆ. ನನ್ನ ಮಾನ್ಯ ಮಿತ್ರರಾದಂಥ ನಾನಯ್ಯನವರು ಈ ನಾಮಿನೇಷನ್ ಪದ್ಧತಿಯನ್ನು ತೆಗೆಯಬೇಕು ಅಂತ ಹೇಳಿದರು. ಆದರೆ ನಾಮಿನೇಷನ್ ಪದ್ಧತಿಯನ್ನು ತೆಗೆದರೆ ಏನಾಗುತ್ತದೆ ಎಂಬುದನ್ನು ತಿಳಿಯಬೇಕು ಅಂದರೆ ೬೦ ವರ್ಷದ ಇತಿಹಾಸವನ್ನು ತೆಗೆದು ನೋಡಿ, ಗೊತ್ತಾಗುತ್ತದೆ. ಇವೊತ್ತು ಅನುಭವದಿಂದ ಮಾಡಿದಂಥ ತಿದ್ದುಪಡಿಯನ್ನು ತೆಗೆದಿದ್ದೇ ಆದರೆ ಮತ್ತೆ ಕೆಲವು ಪಟ್ಟಭದ್ರ ಹಿತಾಸಕ್ತಿ ಜನ, ಬಂಡವಾಳ ಶಾಹಿ ಜನ, ಇವೊತ್ತು ರಾಜಕಾರಣ ನಮ್ಮ ಕಪಿಮುಷ್ಟಿಯಲ್ಲಿ ಇರಬೇಕು ಅನ್ನುವ ಜನ ಅವರೇ ಆ ಸಂಘಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುತ್ತಿದ್ದರು. ಬೆಳಗಾವಿ ಜಿಲ್ಲಾ ಮಧ್ಯವರ್ತಿ ಬ್ಯಾಂಕು, ೬೦ ವರ್ಷಗಳವರೆಗೆ ಒಂದೇ ವರ್ಗದ ಜನರ ಕೈಯಲ್ಲಿ, ನಾಲ್ಕೈದು ಮನೆತನದವರ ಕೈಯಲ್ಲಿ ಇತ್ತು. ಇವೊತ್ತು ನಾಮಿನೇಷನ್ ಆದಾಗ ಜನರ ಪ್ರತಿನಿಧಿಗಳ ಕ್ಷೇತ್ರದಿಂದ ಆರಿಸಿ ಬಂದಂಥ

ಕೆಲವು ಜನರು ಸೇರಿದ್ದಾರೆ. ಮೊದಲು ೫-೬ ಮನೆತನದವರು ಇದ್ದರು. ಬೆಳಗಾವಿ ಮಧ್ಯವರ್ತಿ ಬ್ಯಾಂಕು ಅಂದರೆ ೪೦-೫೦ ಕೋಟಿ ರೂಪಾಯಿ ವ್ಯವಹಾರ ಮಾಡುವಂತಾದ್ದು. ನಮ್ಮ ಜಿಲ್ಲೆಯಲ್ಲಿ ೬೦೦ ಸೊಸೈಟಿಗಳಿವೆ, ನಾಲ್ಕೈದು ಶುಗರ್ ಫ್ಯಾಕ್ಟರಿಗಳು, ೨೮-೩೦ ಅನೇಕ ಅರ್ಬನ್ ಕೋ-ಆಪರೇಟಿವ್ ಬ್ಯಾಂಕುಗಳು, ೭೨ ಬೇರೆ ಬೇರೆ ಬ್ಯಾಂಕುಗಳು ಇರುವಾಗ ೫-೬ ಮನೆತನದ ಜನರೇ ನೌಕರಿಯಲ್ಲಿ ಬರುತ್ತಿದ್ದರು. ಇಂತಹ ಒಂದು ವಿಚಿತ್ರ ಪರಿಸ್ಥಿತಿ ಇತ್ತು. ಎಲ್ಲವೂ ಆ ಜನರ ಕಪಿಮುಷ್ಟಿಯಲ್ಲಿತ್ತು. ಔದ್ಯೋಗಿಕ ಕ್ಷೇತ್ರದಲ್ಲಿ ಈ ದೇಶದಲ್ಲಿ ೨೯ ಮನೆತನದವರು ತಮ್ಮ ಕೈಯಲ್ಲಿ ಹೇಗೆ ಹಿಡಿತ ಇಟ್ಟುಕೊಂಡಿದ್ದರೋ ಅದೇ ರೀತಿ ಸಹಕಾರಿ ಪದ್ಧತಿಯಲ್ಲಿ ಸಹಕಾರಿ ಸಂಸ್ಥೆಗಳಲ್ಲಿ ಸುಮಾರು ನಾಲ್ಕೈದು ಮನೆತನದವರು ಇದ್ದು ಕಾರ್ಯ ಮಾಡುತ್ತಿದ್ದರು. ಸರ್ಕಾರ ಸ್ತುತ್ಯಾರ್ಹವಾದಂಥ ಕಾರ್ಯ ಮಾಡಿದೆ, ಯೋಗ್ಯವಾದಂಥ ಕಾರ್ಯವನ್ನು ಮಾಡಿದೆ. ಯಾರಿಗೆ ಪ್ರಾತಿನಿಧ್ಯ ಸಿಕ್ಕುತ್ತಿರಲಿಲ್ಲ ಅಂತಹ ಜನರಿಗೆ ಅಲ್ಲಿ ಪ್ರಾತಿನಿಧ್ಯ ಕಲ್ಪಿಸಿಕೊಟ್ಟಿದ್ದು ಯೋಗ್ಯ. ಅಧ್ಯಕ್ಷರೆ, ಮೊನ್ನೆ ನಮ್ಮ ಜಿಲ್ಲೆಯಲ್ಲಿ ಶುಗರ್ ಫ್ಯಾಕ್ಟರಿಯಲ್ಲಿ ಚುನಾವಣೆ ಆಯಿತು. ಆ ರೀತಿ, ಅಸೆಂಬ್ಲಿ ಚುನಾವಣೆಯೂ ಆಗುವುದಿಲ್ಲ, ಪಾರ್ಲಿಮೆಂಟ್ ಚುನಾವಣೆಯೂ ಆಗುವುದಿಲ್ಲ. ಒಂದು ವರ್ಷದ ಡೈರೆಕ್ಟರ್ ಚುನಾವಣೆಯಲ್ಲಿ, ಯಾರು ಛೇರ್‌ಮನ್ ಆಗಬೇಕು ಅಂತ ಇದ್ದರೋ ಅವರು ಮಾಡಿದ ಖರ್ಚನ್ನು ನೋಡುವುದಕ್ಕೆ ನಮಗಂತೂ ಅಸಾಧ್ಯ. ಸರ್ಕಾರ ನಾಮಿನೇಷನ್ ಮಾಡುವುದರಿಂದ ಯೋಗ್ಯ ರೀತಿಯಲ್ಲಿ ಆಡಳಿತವನ್ನು ಇಟ್ಟುಕೊಳ್ಳಲಿಕ್ಕೆ ಸಾಧ್ಯ ಇದೆ. ಸರ್ಕಾರಿ ಕ್ಷೇತ್ರದಲ್ಲಿ ಒಂದು ಪಾವಿತ್ರತೆಯನ್ನು ಕಾಯ್ದುಕೊಂಡು ಬರಬೇಕು. ಪಾವಿತ್ರತೆಯನ್ನು ಕೆಡಿಸುವಂತಹ ಕೆಲವು ಜನರ ಮೇಲೆ ಹಿಡಿತ ಇರಬೇಕು. ಸರ್ಕಾರದವರು ಕೊಟ್ಟಂತಹ ಷೇರು ಬಂಡವಾಳ ಹೆಚ್ಚು ಮಾಡುವ ಸಲುವಾಗಿ ಅಲ್ಲಿ ನಾಮಿನೇಷನ್ ಮಾಡುವುದು ಸ್ತುತ್ಯ ಇದೆ, ಯೋಗ್ಯ ಇದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಇನ್ನು ಐದು ನಿಮಿಷದಲ್ಲಿ ತಮ್ಮ ಮಾತುಗಳನ್ನು ಮುಗಿಸಬೇಕಾಗುತ್ತದೆ. ಅನಂತರ ಮುಂದೆ ಮಾತನಾಡತಕ್ಕ ಸದಸ್ಯರು ೧೦-೧೦ ನಿಮಿಷ ಮಾತನಾಡಿ ಕೊನೇಪಕ್ಷ ೫ ಗಂಟೆಯೊಳಗೆ ಮುಗಿಸಿದರೆ, ೫ ಗಂಟೆಯ ನಂತರ ಮಂತ್ರಿಗಳು ಉತ್ತರ ಕೊಡಲಿಕ್ಕೆ ಅನುಕೂಲವಾಗುತ್ತದೆ. ಒಟ್ಟಿನಲ್ಲಿ ಇವೊತ್ತು ಈ ಡಿಮ್ಯಾಂಡ್ ಮುಗಿಯಬೇಕು.

ಶ್ರೀ ಜಿ. ಕೆ. ತಕ್ಕೇಡ್.—ಅಧ್ಯಕ್ಷರೆ, ವಿರೋಧ ಪಕ್ಷದ ಸದಸ್ಯರಾದ ಶ್ರೀಮಾನ್ ನಾನಯ್ಯನವರು ಸುಮಾರು ಒಂದೂವರೆ ಗಂಟೆ ಮಾತನಾಡಿದ್ದಾರೆ. ನನಗೂ ಸ್ವಲ್ಪ ಅವಕಾಶ ಕೊಡಬೇಕು. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ನಾನಯ್ಯನವರಿಗೆ ಒಂದು ಮಾತು ಹೇಳಬೇಕು ಅಂದರೆ ಅರಸು ಅವರ ಕಾಲದಲ್ಲಿ ಸ್ಟೇಟ್ ಫೆಡರೇಷನ್ ಮಾಡಿದಾಗ ಅವರು ಅಧ್ಯಕ್ಷರಾದರು. ಶ್ರೀಮಾನ್ ನಾನಯ್ಯನವರನ್ನು ನಾಮಿನೇಷನ್ ಮಾಡದೇ ಇದ್ದರೆ ಅವರು ಎಂದೂ ಅಧ್ಯಕ್ಷರಾಗುತ್ತಿರಲಿಲ್ಲ. ಅಲ್ಲಿ ಪಟ್ಟಭದ್ರ ಹಿತಾಸಕ್ತಿ ಜನಗಳೇ ಇರುತ್ತಿದ್ದರು. ಆದರೆ ಇವೊತ್ತು ಈ ರೀತಿ ಅವರು ನಾಮಿನೇಷನ್ ಪದ್ಧತಿಯನ್ನು ಏತಕ್ಕೆ ವಿರೋಧ ಮಾಡುತ್ತಿದ್ದಾರೆ ಎಂಬುದು ಗೊತ್ತಾಗುತ್ತಿಲ್ಲ. ಈಗ ಅಫೆಕ್ಸ್ ಬ್ಯಾಂಕ್ ಮತ್ತು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನವರು ಈ ಪ್ರೈಮರಿ ಬ್ಯಾಂಕಿಗೆ ಕೊಡತಕ್ಕ ಸಾಲಕ್ಕೆ ಇವೊತ್ತು ಹೆಚ್ಚಿನ ಬಡ್ಡಿ ಕೊಡಬೇಕಾಗುತ್ತದೆ ; ಇದನ್ನು ನಾನು ಒಪ್ಪುತ್ತೇನೆ. ಆದರೆ ಈ ಹಣವನ್ನು ಯೋಗ್ಯ ರೀತಿಯಿಂದ ಕಂಟ್ರೋಲ್ ಮಾಡುವವರು ಯಾರು ? ಈ ಕಂಟ್ರೋಲ್ ಮಾಡುವಂತ ಪದ್ಧತಿ ಏನಿದೆ ಇದು ಒಂದು ಹಂತದಲ್ಲಿ ಬರದೇ ಇದ್ದರೆ ಸ್ವೇಚ್ಛಾ ರೀತಿಯಿಂದ ಖರ್ಚು ಮಾಡಲಿಕ್ಕೆ ಸಾಧ್ಯತೆ ಇದೆ. ಕೆಲವು ಜನರು ಅದನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇವೊತ್ತು ರೈತನಿಂದ ಸಾಲವನ್ನು ವಸೂಲು ಮಾಡುವ ಕ್ರಮವನ್ನು ಚುರುಕುಗೊಳಿಸಿದ್ದೀರಿ. ಆದರೂ ಎಷ್ಟೋ ಜನ ಕಂತು ಕಟ್ಟಿಲ್ಲ. ಎಷ್ಟೋ ಜನ ಹಣವನ್ನು ಕಟ್ಟುವಂತಹ ಸ್ಥಿತಿಯಲ್ಲಿಲ್ಲ. ಅಂತಹ ಜನರ ಸಲುವಾಗಿ ಇವತ್ತು ನಮ್ಮ ಭೂ ಅಭಿವೃದ್ಧಿ ಬ್ಯಾಂಕು ಮತ್ತು ರಾಜ್ಯದ ಅಫೆಕ್ಸ್ ಬ್ಯಾಂಕ್ ಇರಲೇಬೇಕು. ಅವುಗಳ ಕಂಟ್ರೋಲ್ ಇಲ್ಲದಿದ್ದರೆ ಜಿಲ್ಲಾ ಬ್ಯಾಂಕುಗಳು ದಿಕ್ಕು ಇಲ್ಲದಂತಹ ಬ್ಯಾಂಕುಗಳಾಗುತ್ತವೆ. ಸೊಸೈಟಿಗಳ ಮೇಲೆ ಸರಿಯಾದಂತಹ ಕಂಟ್ರೋಲ್ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು ಜಿಲ್ಲಾ ಕೇಂದ್ರ ಬ್ಯಾಂಕಿನಲ್ಲಿರತಕ್ಕಂತಹ ಹಣ, ಅಫೆಕ್ಸ್ ಬ್ಯಾಂಕಿನವರು ಕೊಟ್ಟಿದ್ದು ಮತ್ತು ನಮ್ಮಲ್ಲೂ ಷೇರು ಬಂಡವಾಳದ ಡಿಪಾಸಿಟ್ ಸಾಕಷ್ಟು ಇದೆ. ಅದನ್ನು ಸಾಲವನ್ನಾಗಿ ಜನರಿಗೆ ಕೊಡುವುದೇ ಬಹಳ ಕಠಿಣವಾಗಿದೆ. ಅಫೆಕ್ಸ್ ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಹೋಗಿ ಅಂತ ಹೇಳುತ್ತೀರಿ. ಅಂದಾಗ ಆ ಹಣವನ್ನು ಕೇವಲ ವ್ಯವಸಾಯಗಾರರಿಗಷ್ಟೇ ಕೊಡಬೇಕಾಗಿದೆ. ಇಂಡಸ್ಟ್ರೀಸ್ ಪುರೋಭಿವೃದ್ಧಿಗಾಗಿ

ಬೇರೆ ಬೇರೆ ಕಮರ್ಷಿಯಲ್ ಬ್ಯಾಂಕುಗಳಿಂದ ಸಾಲ ತೆಗೆದುಕೊಂಡರೆ ಆ ಹಣಕ್ಕೆ ಹೆಚ್ಚು ಬಡ್ಡಿ ಕೊಡಬೇಕಾಗುತ್ತದೆ. ಕೆಲವರು ನಮ್ಮ ಡಿಪಾಸಿಟ್ ಏಕೆ ತೆಗೆದುಕೊಳ್ಳುವುದಿಲ್ಲ ಎಂಬುದಾಗಿ ಕೇಳುತ್ತಿದ್ದಾರೆ. ಅವರ ಡಿಪಾಸಿಟ್‌ಗಳನ್ನು ತೆಗೆದುಕೊಂಡರೆ ಯಾರಿಗೆ ಸಾಲ ಕೊಡಬೇಕೆಂಬ ದೊಡ್ಡ ಸಮಸ್ಯೆ ಬರುತ್ತದೆ. ನಾನು ನಮ್ಮ ಜಿಲ್ಲೆಯ ಜಿಲ್ಲಾ ಮಧ್ಯವರ್ತಿ ಬ್ಯಾಂಕಿನಲ್ಲಿ ಉಪಾಧ್ಯಕ್ಷನಾಗಿ ೪ ವರ್ಷಗಳ ಕಾಲ ಸೇವೆ ಸಲ್ಲಿಸಿದ ಅನುಭವ ಇದೆ. ಡಿಪಾಜಿಟ್ ಯಾರಿಗೆ ಕೊಡಬೇಕು ? ಬಡ್ಡಿ ಎಲ್ಲಿಂದ ತರಬೇಕು ? ಅಫೆಕ್ಸ್ ಬ್ಯಾಂಕಿನಿಂದ ಕೊಡುತ್ತೇವೆಂದು ಹೇಳುತ್ತಾರೆ ; ಹಾಗೂ ಆ ರೀತಿ ಕೊಟ್ಟಂತಹ ಹಣವನ್ನು ಯಾವ ರೀತಿ ಉಪಯೋಗ ಮಾಡಬೇಕೆಂಬುದನ್ನೂ ಹೇಳಿರುತ್ತಾರೆ. ಅವರು ಹೇಳಿರುವ ಪ್ರಕಾರ ಕೇವಲ ವ್ಯವಸಾಯಗಾರರಿಗೆ ಕೊಡಬೇಕಾಗುತ್ತದೆ. ನಾಗೆ ಬೇರೆ ಬೇರೆ ಜನಗಳು ಮುಂದೆ ಬಂದು ನಮ್ಮ ಸಹಕಾರಿ ಬ್ಯಾಂಕಿನಲ್ಲಿ ಡಿಪಾಜಿಟ್ ಇಡುವುದಕ್ಕೆ ತಯಾರು ಇದ್ದಾರೆ. ಇದಕ್ಕೆ ರಿಸರ್ವ್ ಬ್ಯಾಂಕಿನವರು ಅಡ್ಡಿ ಬರುತ್ತಾರೆ. ಅವರು ಇಂತಿಷ್ಟೇ ಜನಗಳಿಗೆ ಸಾಲ ಕೊಡಬೇಕೆಂಬ ನಿಯಮ ಹಾಕಿಬಿಟ್ಟಿದ್ದಾರೆ. ಆದ್ದರಿಂದ ಅಷ್ಟೇ ಜನಗಳಿಗೆ ಮಾತ್ರ ಸಾಲ ಕೊಡಬೇಕು ; ಹೆಚ್ಚು ಜನರಿಗೆ ಸಾಲ ಕೊಡುವ ಹಾಗೆ ಇಲ್ಲ. ಅಂದಾಗ ಯಾವ ರೀತಿ ಈ ಹಣವನ್ನು ಉಪಯೋಗ ಮಾಡುವುದು ? ನಮ್ಮಲ್ಲಿ ಡಿಪಾಜಿಟ್ ಹಣ ಹೆಚ್ಚಾಗಿ ಬಂದಷ್ಟು ರೈತನಿಗೆ ಬೇರೆ ಉದ್ಯೋಗಗಳನ್ನು ಮಾಡುವುದಕ್ಕೆ, ಉದ್ಯೋಗಗಳನ್ನು ಮಾಡುವಂತಹ ರೈತನಿಗೆ ಹಣವನ್ನು ಕೊಡುವಂತಹ ಒಂದು ಹೊಸ ಯೋಜನೆಯನ್ನು ಈ ಸಹಕಾರಿ ಬ್ಯಾಂಕುಗಳಿಗೆ ಮತ್ತು ಸಹಕಾರಿ ಸಂಘಗಳಿಗೆ ತೋರಿಸಿಕೊಡದಿದ್ದರೆ ಈ ಹಣ ಏನು ಉಪಯೋಗವಾದೀತು ? ಆ ರೀತಿ ಮಾಡದಿದ್ದರೆ ಬ್ಯಾಂಕು ಎಲ್ಲಿಂದ ಬಡ್ಡಿ ಕೊಡಬೇಕು? ಆಗ ಡಿಪಾಜಿಟ್ ಹಾಗೇ ಬೀಳುತ್ತದೆ. ಆ ಹಣವನ್ನು ತೆಗೆದುಕೊಂಡು ಹೋಗುವುದಕ್ಕೆ ಯಾರೂ ತಯಾರಾಗುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಈ ವಿಷಯದಲ್ಲಿ ಸೂಕ್ತವಾದ ಮಾರ್ಗದರ್ಶನ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಎರಡನೆಯದಾಗಿ, ಈಗಾಗಲೇ ಎಲ್ಲಾ ಸೊಸೈಟಿಗಳನ್ನು ಅಮಾಲ್ಗಮೇಟ್ ಮಾಡಿದ್ದೀರಿ. ಇದು ಒಂದು ದೊಡ್ಡ ಹೊರೆಯಾಗಿದೆ. ಇನ್ನು ಮುಂದಾದರೂ ಇದನ್ನು ದಯಮಾಡಿ ಮಾಡಬೇಡಿ. ಈಗಾಗಲೇ ಅಮಾಲ್ಗಮೇಟ್ ಮಾಡಿರತಕ್ಕಂತಹ ಸೊಸೈಟಿಗಳನ್ನು ಬೇರ್ಪಡಿಸಿ ಮೊದಲು ಇದ್ದಂತೆ ಮಾಡಿ. ಈ ಪದ್ಧತಿಯನ್ನು ದಯಮಾಡಿ ಕಿತ್ತು ಹಾಕಿ. ಮಾನ್ಯ ನಾಸಯ್ಯನವರು ಹೇಳಿದ ಹಾಗೆ, ಒಳ್ಳೆಯ ಸೊಸೈಟಿಯ ಜೊತೆಗೆ ಕೆಟ್ಟ ಸೊಸೈಟಿಗಳನ್ನು ಕೂಡಿಸಿ ಬಿಟ್ಟಿದ್ದಾರೆ. ನಾನು ಇದರ ಬಗ್ಗೆ ಒಂದು ಉದಾಹರಣೆಯನ್ನು ಹೇಳುವುದಾದರೆ, ಒಂದು ಬುಟ್ಟಿ ಮಾವಿನ ಹಣ್ಣಿನೊಳಗೆ ಒಂದು ಕೊಳೆತ ಮಾವಿನ ಹಣ್ಣನ್ನು ಹಾಕಿಬಿಟ್ಟರೆ ಅದು ಇಡೀ ಬುಟ್ಟಿಯಲ್ಲಿರತಕ್ಕಂತಹ ಮಾವಿನ ಹಣ್ಣುಗಳನ್ನೆಲ್ಲಾ ಕೊಳೆಸಿ ಬಿಡುತ್ತದೆ. ಆ ರೀತಿ ಒಂದೊಂದು ಕೆಟ್ಟ ಸೊಸೈಟಿಯನ್ನು ಇನ್ನುಳಿದ ೪-೫ ಒಳ್ಳೆಯ ಸೊಸೈಟಿಗಳ ಜೊತೆಗೆ ಕೂಡಿಸಿ ಬಿಟ್ಟಿದ್ದೀರಿ. ಇದರಿಂದಾಗಿ ಯಾವ ಸೊಸೈಟಿಗಳಲ್ಲೂ ಒಳ್ಳೆಯ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈ ಒಂದು ಪದ್ಧತಿಯನ್ನು ದಯಮಾಡಿ ಬಿಟ್ಟು ಬಿಡಿ. ಎಲ್ಲಿಯಾದರೂ ಕೆಟ್ಟ ಸೊಸೈಟಿಗಳಿದ್ದರೆ ಅವುಗಳನ್ನು ಒಳ್ಳೆಯ ಸೊಸೈಟಿಗಳ ಜೊತೆಗೆ ಸೇರಿಸುವ ಬದಲು, ಅವುಗಳನ್ನು ಸರಿಯಾಗಿ ಕೆಲಸ ನಿರ್ವಹಿಸುವಂತೆ ಮಾಡಬೇಕು. ಇಲ್ಲದಿದ್ದರೆ, ಏನಾಗುತ್ತದೆ ಎಂದರೆ ಕೆಟ್ಟ ಸೊಸೈಟಿಯವರಿಗೆ ಮೊದಲೇ ಹಣ ದುರುಪಯೋಗ ಮಾಡುವುದರಲ್ಲಿ ಬಹಳ ಅನುಭವ ಇರುತ್ತದೆ. ಅವರನ್ನು ತಂದು ಈ ಒಳ್ಳೆಯ ಸೊಸೈಟಿಗಳ ಜೊತೆ ಸೇರಿಸಿಬಿಟ್ಟರೆ, ಒಳ್ಳೆಯವರೂ ಅವರ ಜೊತೆ ಸೇರಿಕೊಂಡು ಎಲ್ಲವನ್ನು ಲೂಟಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ದಯಮಾಡಿ ಈ ಪದ್ಧತಿಯನ್ನು ಕಿತ್ತುಹಾಕಬೇಕಾಗಿ ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ನಮ್ಮ ರಾಜ್ಯದಲ್ಲಿ ಈ ಸಹಕಾರಿ ಚಳುವಳಿ ಬಹಳ ಚೆನ್ನಾಗಿ ಬೆಳೆಯುತ್ತಿದೆ. ಅದಕ್ಕಾಗಿ ನಾನು ಮಾನ್ಯ ಸಹಕಾರ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಆದರೂ ಕೂಡ ಇನ್ನೂ ಹೆಚ್ಚಿನ ಕಾರ್ಯವನ್ನು ಈ ಮೂಲಕ ಮಾಡಿ ರಾಜ್ಯದ ಜನತೆಗೆ ಉಪಯೋಗ ಮಾಡುವ ರೀತಿಯಲ್ಲಿ ತಾವು ಆಶ್ವಾಸನೆ ಮಾಡಿದ್ದೀರಿ ; ಸಂತೋಷ. ಮಹಾರಾಷ್ಟ್ರದಲ್ಲಿ ಮತ್ತು ಮದ್ರಾಸ್‌ನಲ್ಲಿ ಯಾವ ರೀತಿ ಸುಮಾರು ೪.೫೦ ಕೋಟಿ ರೂಪಾಯಿ ಹಣವನ್ನು ಸಣ್ಣ ರೈತರಿಗಾಗಿ ಬಿಡುಗಡೆ ಮಾಡುವಂತಹ ಒಂದು ಮಹತ್ತರವಾದ ನಿರ್ಣಯವನ್ನು ಮಾಡಿದ್ದಾರೆ ಅಂತಹ ಒಂದು ಮಹತ್ತರವಾದ ಕಾರ್ಯಕ್ರಮವನ್ನು ಸರ್ಕಾರ ಕೈಗೊಳ್ಳಬೇಕೆಂದು ನಾನು ಎಲ್ಲ ರೈತರ ಪರವಾಗಿ ಕೇಳಿಕೊಳ್ಳುತ್ತಿದ್ದೇನೆ. ನಾನು ಲೆಕ್ಕ ಹಾಕಿದ ಪ್ರಕಾರ ೩೨ ಕೋಟಿ ರೂಪಾಯಿಗಳ ಸಾಲ ರೈತರಿಂದ ಬರಬೇಕಾದುದು ಇದೆ. ಆದರಿಂದ ಅವರನ್ನು ಮುಕ್ತರನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಾರ್ಕೆಟ್ ಕಮಿಟೀಸ್ ಬಗ್ಗೆ ಹೇಳುವುದಾದರೆ, ಎಲ್ಲ ಕಡೆ ಬಹಳ ಚೆನ್ನಾಗಿ ನಡೆಯುತ್ತಿವೆ. ನಮ್ಮ ರಾಜ್ಯದಲ್ಲಿ ೧೧೫ ಮಾರ್ಕೆಟ್ ಕಮಿಟಿಗಳು ಇವೆ ರೈತರು ಮಾಲನ್ನು ಮಾರ್ಕೆಟ್ಟಿಗೆ ತರಬೇಕಾದರೆ ಅವರಿಗೆ ಸರಿಯಾದ ಟ್ರಾನ್ಸ್‌ಪೋರ್ಟ್ ವ್ಯವಸ್ಥೆ ಆಗಬೇಕು. ಸರಿಯಾದ ರಸ್ತೆ ವ್ಯವಸ್ಥೆ ಇಲ್ಲದೆ ರೈತರು ತಮ್ಮ ಮಾಲುಗಳನ್ನು ಮಾರುಕಟ್ಟೆಗೆ ತರಬೇಕಾದರೆ ಬಹಳ ಕಷ್ಟಪಡುತ್ತಿದ್ದಾರೆ ಈ ದೃಷ್ಟಿಯಿಂದ ಕೆಲಸವನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈಗಾಗಲೇ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ದೇವರಾಜ ಅರಸುರವರು ಹೇಳಿದ್ದಾರೆ. ಕೆಳಗಿನ ಕೇಡರ್‌ನಲ್ಲಿರತಕ್ಕಂತಹ ಮಾರ್ಕೆಟ್ ಸಮಿತಿಯಲ್ಲಿ ಕೆಲಸ ಮಾಡುತ್ತಿರತಕ್ಕಂತಹವರಿಗೆ ಒಂದು ಕೇಡರ್. ಅವರಿಗಿಂತ ಮೇಲ್ಪಟ್ಟಂತಹವರಿಗೆ ಬೇರೊಂದು ಕೇಡರ್ ಮಾಡಬಾರದು. ಈಗಾಗಲೇ ಪಾಲಿಸಿ ಡಿಸಿಷನ್ ಆಗಿದ್ದರೆ ಅದನ್ನು ಕೂಡ ವಿಮರ್ಶೆ ಮಾಡಬೇಕು. ಇದರಿಂದಾಗಿ, ಕೆಲವೇ ಜನರನ್ನು ಸರ್ಕಾರಿ ಅಧಿಕಾರಿಗಳನ್ನಾಗಿ ಮಾಡಿ ಕೆಳಗಿನ ವರ್ಗದ ನೌಕರರು ಸರ್ಕಾರಿ ನೌಕರರು ಅಲ್ಲ ಎಂಬುದಾಗಿ ಮಾಡುವುದು ಸರಿಯಲ್ಲ. ಇವತ್ತು ಏನಾಗಿದೆ ಎಂದರೆ ಮಾರ್ಕೆಟ್ ಕಮಿಟಿಯಲ್ಲಿ ಅಧಿಕಾರಿಗಳನ್ನು ಏನು ಇಟ್ಟಿದ್ದೀರಿ, ಅವರೆಲ್ಲರೂ ಸಾಹುಕಾರರಾಗಿದ್ದಾರೆ. ಅಲ್ಲಿಯ ವ್ಯಾಪಾರಸ್ಥರೂ ಹಾಗೂ ಅಲ್ಲಿರತಕ್ಕಂತಹ ರೈತರು ಮಾರುಕಟ್ಟೆ ಸಮಿತಿಗೆ ಬಂದು ಹೋಗುತ್ತಿರುವಾಗ ಸ್ಥಳೀಯ ಅಭ್ಯರ್ಥಿಗಳನ್ನೇ ಅಲ್ಲಿ ನೇಮಕ ಮಾಡಿರುವುದರಿಂದ ಅಲ್ಲಿಯ ವ್ಯಾಪಾರಸ್ಥರ ಜೊತೆ ಸೇರಿಕೊಂಡು ದುರುಪಯೋಗ ಮಾಡುತ್ತಾರೆ. ಆದ್ದರಿಂದ ಒಂದು ಮಾರ್ಕೆಟ್ಟಿನಲ್ಲಿರತಕ್ಕಂತಹ ನೌಕರರನ್ನು ಇನ್ನೊಂದು ಕಡೆಗೆ ವರ್ಗ ಮಾಡುವಂತಹ ವ್ಯವಸ್ಥೆಯನ್ನು ಕೂಡಲೇ ಜಾರಿಗೆ ತರಬೇಕು. ಅವರನ್ನೆಲ್ಲಾ ಸರ್ಕಾರಿ ಅಧಿಕಾರಿಗಳನ್ನಾಗಿ ಮಾಡಬೇಕೆಂದು ನಾನು ಇವತ್ತು ಮಾರುಕಟ್ಟೆ ಇಲಾಖೆಯ ಮಾನ್ಯ ಮಂತ್ರಿಗಳಿಗೆ ತಮ್ಮ ಮೂಲಕ ಸಲಹೆ ಮಾಡುತ್ತೇನೆ. ಇವತ್ತಿನ ದಿವಸ, ವಿಶ್ವ ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಮಾರುಕಟ್ಟೆಗಳನ್ನು ಮಾಡುತ್ತಿರುವಾಗ ಅದು ಸರಿಯಾದ ರೀತಿಯಲ್ಲಿ ವಿನಿಯೋಗವಾಗುವ ರೀತಿಯಲ್ಲಿ ಕೆಲಸ ಮಾಡಬೇಕು. ಮತ್ತೆ ಕೆಲವು ತಾಲ್ಲೂಕುಗಳಲ್ಲಿ ಮಾರುಕಟ್ಟೆ ಸಮಿತಿಗಳು ಇಲ್ಲ ; ಅಲ್ಲೂ ಕೂಡ, ಅಂದರೆ ಪ್ರತಿಯೊಂದು ತಾಲ್ಲೂಕಿನಲ್ಲೂ ಮಾರುಕಟ್ಟೆ ಸಮಿತಿಗಳು ರಚನೆಯಾಗಬೇಕು. ಜೊತೆಗೆ ರೈತರಿಗೆ ಬೇಕಾದಂತಹ ಅನೇಕ ಕೆಲಸಕಾರ್ಯಗಳನ್ನು ಮಾಡಿ ಕೊಡಬೇಕು. ರೈತರ ಹಿತದೃಷ್ಟಿಯಿಂದ ಮಾರ್ಕೆಟ್ ಯಾರ್ಡ್‌ಗಳು ಆಗಬೇಕು. ಈ ಎಲ್ಲ ವ್ಯವಸ್ಥೆಗಳನ್ನು ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳಿಕೊಂಡು, ಇವತ್ತಿನ ದಿವಸ ಸಹಕಾರಿ ಮಂತ್ರಿಗಳಾದ ಶ್ರೀಮಾನ್ ಜಕ್ಕೂರ್‌ರವರು ಮತ್ತು ಮಾರುಕಟ್ಟೆ ಇಲಾಖೆಯ ರಾಜ್ಯ ಸಚಿವರಾದ ಶ್ರೀಮಾನ್ ಸುಧೀಂದ್ರರಾವ್ ಕಸಬೆಯವರು ಮಂಡಿಸಿರತಕ್ಕಂತಹ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ಮತ್ತೊಮ್ಮೆ ಸ್ವಾಗತ ಮಾಡಿ ಮಾನ್ಯ ಅಧ್ಯಕ್ಷರು ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೫-೦೦ ಪಿ. ಎಂ.

† ಶ್ರೀ ಜಿ. ಎಸ್. ಶಿವನಂಜಪ್ಪ (ಬೆಳ್ಳಾವಿ).—ಮಾನ್ಯ ಅಧ್ಯಕ್ಷರೆ, ಚುನಾವಣೆ ಆದ ಮೇಲೆ ನಾನು ಒಂದು ದಿನ ಬಸ್‌ನಲ್ಲಿ ಬರುತ್ತಾ ಇದ್ದಾಗ ಒಬ್ಬರು ನೀವು ಎಂ. ಎಲ್. ಎ. ಏನು ಸ್ವಾಮಿ ಎಂದು ಕೇಳಿದರು. ಅದಕ್ಕೆ ನಾನು ಹೌದು ಎಂದು ಹೇಳಿದೆ. ಅದಕ್ಕೆ ಅವರು ತಾವು ಎಂ. ಎಲ್ ಎ. ಆಗುವುದಕ್ಕೂ ಮುಂಚೆ ತಾವು ಯಾವ ಸೊಸೈಟಿಯಲ್ಲಿ ಸದಸ್ಯರು ಅಥವಾ ಪ್ರೆಸಿಡೆಂಟ್ ಆಗಿದ್ದಿರಾ ಎಂದು ಅವರು ಕೇಳಿದರು. ಅದಕ್ಕೆ ನಾನು ಹೀಗೆ ಏಕೆ ಹೇಳುತ್ತಿದ್ದೀರಿ ಎಂದು ಕೇಳಿದೆ. ಅದಕ್ಕೆ ಅವರು, ಸೊಸೈಟಿಗಳಲ್ಲಿ ಹಣವನ್ನು ಯಾರು ಹೊಡೆಯುತ್ತಾರೋ ಅಂಥಹವರೇ ಬಹಳ ಮಂದಿ ಎಂ. ಎಲ್. ಎ. ಆಗಿ ಬರುತ್ತಾರೆಂದು ಹೇಳಿದರು. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಇವತ್ತು ಜನಗಳ ಮನಸ್ಸಿನಲ್ಲಿ ಈ ರೀತಿಯ ಮನೋಭಾವನೆ ಬಂದಿದೆ. ರಾಜಕಾರಣಿ ಸೊಸೈಟಿಗಳಲ್ಲಿ ಇರಲಿ ಅಥವಾ ಇಲ್ಲದಿರಲಿ ಈ ಒಂದು ಮನೋಭಾವ ಬಂದಿದೆ.

(ಮಾನ್ಯ ಶ್ರೀ ಎಚ್. ಟಿ. ಕೃಷ್ಣಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಡಿ.ಪಿ.ಎ.ಪಿ. ಮತ್ತು ಐ.ಆರ್ ಡಿ.ಪಿ. ಮುಖಾಂತರ ಏನು ಸಬ್ಸಿಡಿಯನ್ನು ರೈತರಿಗೆ ಕೊಡಲಾಗುತ್ತಿದೆ, ಅದು ನೇರವಾಗಿ ರೈತನ ಕೈ ಸೇರುತ್ತಾ ಇಲ್ಲ. ಹರಿಜನ ಗಿರಿಜನರಿಗಾಗಿ ಸುಮಾರು ೩೦ ವರ್ಷಗಳಿಂದಲೂ ಸ್ಕೀಮ್‌ಗಳನ್ನು ಹಾಕಿಕೊಳ್ಳಲಾಗುತ್ತಿದೆ. ಇದುವರೆಗೆ ಸುಮಾರು ೭೫ ಸ್ಕೀಮ್‌ಗಳನ್ನು ಈ

ಬಗ್ಗೆ ತರಲಾಗಿದೆ. ಇಲ್ಲಿ ಕೊಟ್ಟ ಸಬ್ಸಿಡಿಯನ್ನು ಯಾವ ರೀತಿ ಹೊಡೆಯಬೇಕು ಎಂಬ ಬಗ್ಗೆ ಯೋಚನೆಗಳು ನಡೆಯುತ್ತಿರುತ್ತವೆ. ಉದಾಹರಣೆಗೆ, ಒಬ್ಬನಿಗೆ ಹಸುವನ್ನು ಕೊಳ್ಳಲು ೧,೦೦೦ ರೂಪಾಯಿಗಳನ್ನು ಕೊಡಬೇಕಾಗಿದ್ದರೆ ಅದರಲ್ಲಿ ಸೆಕ್ರೆಟರಿ ಎಷ್ಟು ಹಣವನ್ನು ಹೊಡೆಯಬೇಕು ಮತ್ತೊಬ್ಬರು ಎಷ್ಟು ಹಣವನ್ನು ಹೊಡೆಯಬೇಕು ಎನ್ನುವ ಯೋಚನೆಗಳು ಈ ಸೊಸೈಟಿಗಳಲ್ಲಿ ನಡೆಯುತ್ತಿರುತ್ತವೆ. ಲಾಸ್ ಇಲ್ಲದ ಹಾಗೂ ಸೊಸೈಟಿ ಆಕ್ಟ್‌ಗೆ ಅನುಗುಣವಾಗಿ ಮಿಸ್ ಅಪ್ರೋಪ್ರಿಯೇಷನ್ ಆಗದ ಒಂದು ಸೊಸೈಟಿಯನ್ನು ತುಮಕೂರು ಜಿಲ್ಲೆಯಲ್ಲಿ ತೋರಿಸಿಕೊಡಿ ಸ್ವಾಮಿ. ಇಡೀ ದೇಶದಲ್ಲಿ ಈ ಬಗ್ಗೆ ಪರಿಸ್ಥಿತಿ ಏನಾಗಿದೆ ಗೊತ್ತೆ ? ಈ ಬಗ್ಗೆ ಎಷ್ಟೋ ಕೋಟಿ ರೂಪಾಯಿಗಳು ಲಾಸ್ ಆಗಿದೆ. ಸೊಸೈಟಿಗಳಲ್ಲಿ ಎಷ್ಟು ನೌಕರರು ಇದ್ದಾರೆ, ಇಷ್ಟು ಹಣವನ್ನು ಕೊಡಲಾಗಿದೆಯೆಂದು ಹೇಳುತ್ತೀರಿ. ಆದರೆ ಇವತ್ತಿನ ದಿವಸ ಅಲ್ಲಿ ಯಾವ ಪರಿಸ್ಥಿತಿ ಇದೆ ಎಂಬುದು ಗೊತ್ತೆ ? ನೀವು ಏನೋ ಅಮಾಲ್ಗಮೇಷನ್ ಅನ್ನು ಒಳ್ಳೆಯ ಉದ್ದೇಶದಿಂದ ಮಾಡಿದ್ದೀರಿ. ಆದರೆ ಅಮಾಲ್ಗಮೇಷನ್ ಮಾಡಿರುವುದು ನಿಜವಾಗಿಯೂ ಕೂಡ ಬಹಳ ತಪ್ಪು ಎಂದು ನನಗೆ ಕಾಣುತ್ತಿದೆ. ಅದರಲ್ಲೂ ಹಳ್ಳಿಯಲ್ಲಿರತಕ್ಕ ಜನತೆಗೆ ತುಂಬಾ ತೊಂದರೆಯಾಗಿದೆಯೆಂದು ಹೇಳುತ್ತೇನೆ. ಯಾವುದೋ ನಾಲ್ಕು ಸೊಸೈಟಿಗಳನ್ನು ಒಂದು ಒಳ್ಳೆಯ ಸೊಸೈಟಿಗೆ ಸೇರಿಸಿ ಅನಾಹುತವನ್ನು ಮಾಡಿದ್ದೀರಿ. ಕೊರಟಗೆರೆಯಲ್ಲಿ ತಾಲ್ಲೂಕು ಅಫಿಷಿಯಲ್ಸ್ ಕೋ ಆಪರೇಟಿವ್ ಸೊಸೈಟಿ ಇತ್ತು. ಅದಕ್ಕೆ ಡೆಪ್ಯೂಟಿ ರಿಜಿಸ್ಟ್ರಾರ್ ಆಫ್ ಕೋ ಆಪರೇಟಿವ್ ಸೊಸೈಟಿಯವರು ವಿಸಿಟ್ ಮಾಡಿದ್ದರು. ಅವರು ಯಾವುದೇ ಸರ್ಕಾರಿ ಹಣದ ಸಹಾಯವಿಲ್ಲದೇ ೨೫,೦೦೦ ರೂಪಾಯಿಗಳ ನಫೆಯನ್ನು ಮಾಡಿ ತೋರಿಸಿದ್ದರು. ಅವರು ಬಹಳ ಚೆನ್ನಾಗಿ ಕೆಲಸವನ್ನು ಮಾಡಿದ್ದರು. ಅವರು ಮಾಡಿದ ಕೆಲಸಕ್ಕೆ ರಿಜಿಸ್ಟ್ರಾರ್ ಅವರು ಮೆಚ್ಚಿಗೆಯನ್ನೂ ಸಹಾ ಸೂಚಿಸಿದ್ದರು. ಅಲ್ಲಿಯ ಅಧಿಕಾರ ವರ್ಗವನ್ನು ಮೆಚ್ಚಿ ಇನ್ಸ್‌ಪೆಕ್ಷನ್ ರಿಪೋರ್ಟ್‌ನಲ್ಲಿ ಮೆಚ್ಚಿಗೆಯನ್ನು ಸೂಚಿಸಿ ಹೋಗಿದ್ದರು. ಆ ನಂತರ ೮ ದಿನಗಳಾದ ಮೇಲೆ ಅವರ ಮೇಲೆ Why the President should not be removed ? Why the Secretary should not be removed ? ಎಂದು ಒಂದು ನೋಟೀಸ್ ಬಂತು. ಹೀಗೆಯೇ ೩–೪ ನೋಟೀಸ್‌ಗಳನ್ನು ಕೊಟ್ಟು ವಿಚಾರಣೆ ಮಾಡದೇ ಆ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಲಾಯಿತು. ಇದರಲ್ಲಿ ರಾಜಕೀಯ ಇಲ್ಲವೇ ? ತಿನ್ನುವುದಕ್ಕಾಗಿ ಈಗ ಸ್ಪರ್ಧೆಗಳು ನಡೆಯುತ್ತಿವೆ. ಯಾವುದರಲ್ಲಿ ನಿಮಗೆ ಕಂಟ್ರೋಲ್ ಇದೆ ? ಈ ಬಗ್ಗೆ ಎನ್‌ಕ್ವೈರಿ ಮಾಡಿ ಎಂದು ೨೦ ಅಪ್ಲಿಕೇಷನ್ಸ್ ಬಂದಿವೆ. ಇವತ್ತಿನ ದಿವಸ ಆ ಸೊಸೈಟಿ ಎಲ್ಲಿಗೆ ಹೋಯಿತು ? ಯಾವ ನೌಕರರಿಗೆ ನ್ಯಾಯ ಬೇಕಾಗಿತ್ತೋ ಅದು ಸಿಕ್ಕುತ್ತಾ ಇಲ್ಲ. ಇವತ್ತು ಆ ಸೊಸೈಟಿಯನ್ನು ವಿಸಿಟ್ ಮಾಡಿದ ಅಧಿಕಾರಿಗಳು ನಿವೃತ್ತಿ ಹೊಂದಿರುತ್ತಾರೆ. ಅಂಥ ಸಂಸ್ಥೆಯ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಕಿರುಕುಳವನ್ನು ಕೊಟ್ಟರೆ ಯಾವ ಸಂಸ್ಥೆಗಳು ಉಳಿಯುತ್ತವೆ ? ಎಲ್ಲಾದರೂ ಹಣದ ದುರುಪಯೋಗವಾಗಿದ್ದರೆ ಯಾವ ಅಧಿಕಾರಿ ಅಲ್ಲಿಗೆ ಪರಿಶೀಲನೆಗೆ ಬರುತ್ತಾನೋ ಆತನಿಗೆ ಸ್ವಲ್ಪ ಹಣವನ್ನು ಕೊಟ್ಟುಬಿಟ್ಟರೆ ಹಣ ದುರುಪಯೋಗದ ವಿಷಯ ಈಚೆಗೆ ಬರುವುದಿಲ್ಲ. ಈ ರೀತಿಯಾದರೆ ಇಲಾಖೆ ಯಾಕೆ ಇರಬೇಕು ? ಇನ್ಸ್‌ಪೆಕ್ಟರ್ಸ್ ಏಕೆ ಇರಬೇಕು ? ಅಸಿಸ್ಟೆಂಟ್ ರಿಜಿಸ್ಟ್ರಾರ್ ಏಕೆ ಇರಬೇಕು ? ಡೆಪ್ಯುಟಿ ರಿಜಿಸ್ಟ್ರಾರ್ಸ್ ಏಕೆ ಇರಬೇಕು ? ಮೇಲ್ಪಟ್ಟ ರಿಜಿಸ್ಟ್ರಾರ್ ಏಕೆ ಇರಬೇಕು ? ಇವರು ಬರೀ ಸಂಬಳವನ್ನು ತೆಗೆದುಕೊಳ್ಳುವುದಕ್ಕಾಗಿ ಇರಬೇಕೇ ? ಅನೇಕ ಸೊಸೈಟಿಗಳ ನಫೆ ಬರುವುದು ಇರಲಿ. ಶೇರು ಬಂಡವಾಳವೇ ಸರಿಯಾಗಿ ಇರುವುದಿಲ್ಲ. ಅನೇಕ ಸೊಸೈಟಿಗಳಿಗೆ ಡಿ.ಸಿ.ಸಿ. ಬ್ಯಾಂಕುಗಳು ಲೋನ್ ಕೊಟ್ಟಿದ್ದರೂ ಬಂಡವಾಳ ಸರಿಯಾಗಿ ವಿನಿಯೋಗವಾಗುತ್ತಾ ಇಲ್ಲ. ಈ ಬಗ್ಗೆ ಸರ್ಕಾರ ಗಮನ ಕೊಡಬೇಕು.

ಇನ್ನು ಎರಡನೆಯದಾಗಿ ಗುಬ್ಬಿಯಲ್ಲಿ ತಾಲ್ಲೂಕು ಅಗ್ರಿಕಲ್ಚರಲ್ ಪ್ರೊಡ್ಯೂಸ್ ಕೋ–ಆಪರೇಟಿವ್ ಮಾರ್ಕೆಟಿಂಗ್ ಸೊಸೈಟಿ ಎಂದು ಏನು ಇದೆ ಅಲ್ಲಿ ಯಾರು ಒಬ್ಬ ಪ್ರೆಸಿಡೆಂಟರು ಇದ್ದರು ಅವರನ್ನು ರಾಜಕೀಯ ದುರುದ್ದೇಶದಿಂದ ಅಲ್ಲಿಂದ ಕಿತ್ತುಹಾಕಿ ಒಬ್ಬ ಸರ್ಕಾರಿ ಅಧಿಕಾರಿಯನ್ನು ನಾಮಿನೇಟ್ ಮಾಡಲಾಗಿ. ಆತ ಲಕ್ಷಾಂತರ ರೂಪಾಯಿ ಹಣವನ್ನು ಲೂಟಿ ಮಾಡಿದ್ದಾನೆ. ಹಿಂದೆ ಈ ಬಗ್ಗೆ ಶ್ರೀ ದೇವೇಗೌಡರು ನೋಟೀಸ್ ಕೊಟ್ಟ ಸುಮಾರು ೨ ಗಂಟೆಗಳ ಕಾಲ ಈ ಸಭೆಯಲ್ಲಿ ಡಿಸ್ಕಷನ್ ಆಗಿದೆ. ಈ ಬಗ್ಗೆ ವರದಿಯನ್ನು ತರಿಸಿ ಕೂಲಂಕಷವಾಗಿ ನೋಡಿ ಇಲ್ಲಿ ನೇರವಾಗಿ ಯಾವ ಅಧಿಕಾರಿಗಳು ಶಾಮೀಲಾಗಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಸೊಸೈಟಿ ಉಳಿಯುವುದಿಲ್ಲ. ರಾಜಕೀಯವಾಗಿ ಇದು ಒಂದು ಸ್ಪರ್ಧೆ ಎಂದು ನಾನು ಹೇಳುತ್ತೇನೆ. ಅಧಿಕಾರಿಗಳು ಇರಬೇಕು ನಿಜ ; ಆದರೆ ಏತಕ್ಕೋಸ್ಕರ ಇರಬೇಕು ? ಅಧಿಕಾರಿಗಳು ಎಷ್ಟು ಹೊಡೆದರು, ರಾಜಕೀಯವಾಗಿ ಎಷ್ಟು

ಹಣ ಹೊಡೆದರು, ಎಷ್ಟು ಹಣವನ್ನು ಹೊಡೆಯಬೇಕು, ಎಂಬ ಬಗ್ಗೆ ಅವರು ಸ್ಪರ್ಧಾತ್ಮಕವಾಗಿ ಇರಬಾರದು, ಈ ರೀತಿ ಖಂಡಿತಾ ಆಗಬಾರದು. ಎಷ್ಟು ಮಂದಿ ಹರಿಜನರಿಗೆ ಸಾಲವನ್ನು ಕೊಟ್ಟಿದ್ದೇವೆ ಎಂಬುದನ್ನು ಅವರು ನೋಡಬೇಕು. ಆದರಿಂದ ಎಷ್ಟು ಜನರು ಉದ್ಧಾರವಾಗಿದ್ದಾರೆ ಏನು ಎಂಬುದರ ಬಗ್ಗೆ ಸ್ಪರ್ಧೆ ಅವರಲ್ಲಿ ಬೆಳೆದುಬರಬೇಕು. ಆ ರೀತಿಯ ಒಂದು ಸ್ಪರ್ಧೆ ಇಲ್ಲದೆ ೩೦ ವರ್ಷಗಳಿಂದಲೂ ಸರ್ಕಾರಿ ಸೊಸೈಟಿಗಳು ಮುಳುಗಿಹೋಗುವುದರಲ್ಲಿ ಇವೆ.

ಶ್ರೀ ವಿ. ಎಲ್. ಶಿವಪ್ಪ. – ಮಾನ್ಯ ಸದಸ್ಯರು ಯಾವ ಸಂಸ್ಥೆಗಳಲ್ಲೂ ವ್ಯವಹಾರ ಮಾಡದೇ ನೇರವಾಗಿ ವಿಧಾನಸಭಾ ಸದಸ್ಯರಾದರೆಂದು ಕಾಣುತ್ತದೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ನೀವು ಏಕೆ ಸ್ವಾಮಿ 'ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡ' ಅಂದ ಹಾಗೆ ಮಧ್ಯ ಪ್ರವೇಶ ಮಾಡುತ್ತಿದ್ದೀರಿ ? ಮಾನ್ಯ ಜಕನೂರ್ ಅವರು ಬಹುಶಃ ಇವರನ್ನು ಡಿಫಾಲ್ಟರ್ ಎಂದು ತೆಗೆದುಹಾಕಿದ್ದಾರೆಂದು ಕಾಣುತ್ತದೆ. ಇವತ್ತಿನ ದಿವಸ ಸೊಸೈಟಿಗಳಲ್ಲಿ ಅಧಿಕಾರಿಗಳು ಇದ್ದರೂ ಕೂಡ ಭ್ರಷ್ಟಾಚಾರಗಳು ನಡೆಯುತ್ತಿವೆ, ಹೀಗಿರುವಾಗ, What is the duty of the Co-operative Inspector ? What is the duty of the Assistant Registrar ? What is the duty of the District Registrar ? ಇವರಿಗೆ ಏನಾದರೂ ಮಾಹಿತಿ ಇದೆಯೇ ಸ್ವಾಮಿ ? ಯಾವ ಸೊಸೈಟಿಗಳಿಗೆ ಎಷ್ಟು ಹಣವನ್ನು ಕೊಡಲಾಗಿದೆ ಎಷ್ಟು ಬಂಡವಾಳ ಉಳಿದಿದೆ ಎಂಬುದನ್ನೆಲ್ಲಾ ಯೋಚನೆ ಮಾಡಬೇಕು. ಸೊಸೈಟಿಯಲ್ಲಿ ವ್ಯವಹಾರ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ನೋಡಿಕೊಳ್ಳಬೇಕು. ಸೊಸೈಟಿಯ ಸೆಕ್ರೆಟರಿಗಳು ಏನು ಮಾಡಿದರೂ ಅಧಿಕಾರಿಗಳು ಮುಚ್ಚಿಕೊಂಡು ಹೋಗಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ ಇದನ್ನು ಆದಷ್ಟು ಬೇಗ ತಪ್ಪಿಸಬೇಕು. ರಾಜಕೀಯ ಇಲ್ಲಿ ಬೇಡ ಎಂದು ನಾನು ಹೇಳುತ್ತಿದ್ದೇನೆ. ರಾಜಕೀಯ ವ್ಯಕ್ತಿಗಳೆಲ್ಲ ಈ ರೀತಿ ಮಾಡುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಸೊಸೈಟಿಗಳಲ್ಲಿ ರಾಜಕೀಯ ಇರಬಾರದೆಂದು ನಾನು ಹೇಳುತ್ತೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ವಲ್ಪ ಗಮನವನ್ನು ಹರಿಸಬೇಕಾಗುತ್ತದೆ.

ಇನ್ನು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಬಗ್ಗೆ ಹೇಳುತ್ತೇನೆ. ಆ ಬಗ್ಗೆ ತಾವು ಏನೋ ಹೇಳಿದ್ದೀರಿ ಮತ್ತು ಕೆಲವು ಆಕ್ಟ್‌ಗಳನ್ನೂ ಸಹಾ ತಂದಿದ್ದೀರಿ. ಈ ಬಗ್ಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ೧೯೬೪ ಅಥವಾ ೧೯೬೫ರಲ್ಲಿ ಒಬ್ಬ ನಾಲ್ಕೂವರೆ ಸಾವಿರ ರೂಪಾಯಿಯನ್ನು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್‌ನಲ್ಲಿ ತೆಗೆದುಕೊಂಡಿದ್ದಾನೆ. ಆ ಸಾಲವನ್ನು ತೆಗೆದುಕೊಂಡಿರುವವನು ಸತ್ತು ಹೋಗಿದ್ದಾನೆ. ಅವನ ಮಗ ಸುಮಾರು ೫,೭೯೧.೫೭ ಪೈಸೆಯನ್ನು ಸೊಸೈಟಿಗೆ ಕಟ್ಟಿದ್ದಾನೆ. ಆ ಬಗ್ಗೆ ನಾನು ಒಂದು ಪ್ರಶ್ನೆಯನ್ನು ಸದನಕ್ಕೆ ಹಾಕಿದ್ದೆ. ಉತ್ತರದಲ್ಲಿ ೪,೩೯೯.೭೩ ಪೈಸೆಯನ್ನು ಆತನಿಂದ ವಸೂಲು ಮಾಡಲಾಗಿದ್ದು, ಅದರಲ್ಲಿ ೪೨೧ ರೂಪಾಯಿ ಮಾತ್ರ ಅಸಲು ಬಂದಿದೆ ಎಂದು ಹೇಳಲಾಗಿದೆ. ಹೀಗಾದರೆ, ಯಾವ ರೈತನನ್ನು ಉದ್ಧಾರ ಮಾಡುತ್ತೀರಿ ಸ್ವಾಮಿ ? ಅದು ಬಾವಿ ತೋಡುವುದಕ್ಕೆ ತೆಗೆದುಕೊಂಡಿರುವ ಸಾಲ. ಎಲ್ಲಿ ನೀರು ಬರುವುದಿಲ್ಲವೋ ಅಂಥ ಕಡೆ ಎಕ್ಸೆಮ್ಷನ್ ಕೊಡುತ್ತೇವೆಂಬುದಾಗಿ ಘನ ಸರ್ಕಾರದವರು ಕಾನೂನು ಮಾಡಿದರು ಇವತ್ತಿನ ದಿವಸ ಬಾವಿಯಲ್ಲಿ ನೀರು ಬಂದಿಲ್ಲವೆಂದು ಅರ್ಜಿ ಹಾಕಿದರೂ ಕೂಡ, ಅಲ್ಲಿ ನೀರು ಬರುವ ಸಾಧ್ಯತೆ ಇದೆಯೋ ಇಲ್ಲವೋ ಎಂದು ನೋಡುವುದಿಲ್ಲ. ಆದರೆ ಸಾಲವನ್ನು ಮಾತ್ರ ಮರುಪಾವತಿ ಮಾಡಬೇಕೆಂದು ಹೇಳಿ ಮುಲಾಜಿಲ್ಲದೆ ವಸೂಲು ಮಾಡಿರುತ್ತಾರೆ. ಇದಕ್ಕೆಲ್ಲ ರಸೀತಿಗಳು ಇರುತ್ತವೆ. ಒಟ್ಟು ಮೂರು ಸಾವಿರ ರೂಪಾಯಿಗಳವರೆಗೆ ಕಟ್ಟಿದ್ದರೂ ೪೨೧–೫೪ ಪೈಸೆ ಬಾಕಿ ಇದೆ ಎಂದು ಉತ್ತರ ಕೊಟ್ಟಿದ್ದಾರೆ. ರೈತರೇ ದೇಶದ ಬೆನ್ನುಮೂಳೆ ಎಂದು ಚುನಾವಣೆಗಳು ಬಂದಾಗ ಹೇಳತಕ್ಕಂಥ ಸರ್ಕಾರ ಈ ರೀತಿ ರೈತರಿಂದ ಸುಲಿಗೆ ಮಾಡುತ್ತಿದ್ದಾರೆ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ರೈತರು ಸಾಹುಕಾರರ ಕೈಯಲ್ಲಿ ಸಿಕ್ಕಬಾರದು, ಬಂಡವಾಳಗಾರರ ಕೈಯಲ್ಲಿ ಸಿಕ್ಕಬಾರದೆಂದು ಒಂದು ವೇಳೆ ಹೀಗೆ ಸಿಕ್ಕಿದರೆ ಅವರು ಮತ್ತಷ್ಟು ಶ್ರೀಮಂತರಾಗುತ್ತಾರೆಂದು ಭಾವಿಸಿ, ಸರ್ಕಾರದವರು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕುಗಳಿಂದ ಸುಲಭವಾಗಿ ರೈತರಿಗೆ ಸಾಲಸಿಗುವಂತೆ ಸೌಲಭ್ಯಗಳನ್ನು ಕಲ್ಪಿಸಿರುತ್ತೇವೆಂದು ಹೇಳುತ್ತಾರೆ. ಆದರೆ ರೈತರ ಮೇಲೆ ಸರಳ ಬಡ್ಡಿ, ಸುಸ್ತಿ ಬಡ್ಡಿಯನ್ನು ಹಾಕಿ ರೈತರ ಮನೆಗಳನ್ನು ಹಾಳು ಮಾಡಿಬಿಡುತ್ತಿದ್ದಾರೆ. ಆದ್ದರಿಂದ ರೈತರು ತೆಗೆದುಕೊಂಡ ಸಾಲಗಳಿಗೆ ಸರಳಬಡ್ಡಿ, ಸುಸ್ತಿ ಬಡ್ಡಿ ಎಂದು ಏನು ವಿಧಿಸುತ್ತಾರೆ ಅದನ್ನು ತೆಗೆಯಬೇಕೆಂದು ಹೇಳುತ್ತೇನೆ. ಈ ಬ್ಯಾಂಕ್‌ನವರು ಮತ್ತು

ಸೊಸೈಟಿಯವರು ಸಾಲ ಕೊಟ್ಟಿರುವುದನ್ನು ವಸೂಲು ಮಾಡುವ ವಿಧಾನವನ್ನು ನೋಡಿದರೆ ತುಮಕೂರು ಡಿಸ್ಟ್ರಿಕ್ಟ್ ಹೆಬ್ಬೂರ್‌ನಲ್ಲಿ ಯಾರಾದರು ಒಬ್ಬರ ಹತ್ತಿರ ರಿಕವರಿ ಮಾಡಲು ಹೊರಟರೆ ರಸ್ತೆ ಎಡಬಲದಲ್ಲಿರತಕ್ಕಂಥ ೪೦-೫೦ ಜನ ಸಾಲವನ್ನು ತಗೆದುಕೊಂಡವರು ಏನು ಇರುತ್ತಾರೆ ಅವರೆಲ್ಲರಿಗೂ ೫೦ ರೂಪಾಯಿ ರಿಕವರಿ ಚಾರ್ಜಸ್ ಎಂದು ಹಾಕುತ್ತಾರೆ. ಇದಕ್ಕೆ ಯಾವುದಾದರೂ ಕಾನೂನು ಇದೆಯೋ ಈ ರೀತಿ ರಿಕವರಿ ಮಾಡುವುದರಿಂದ ಅಧಿಕಾರಿಗಳು ನಿಮಗೆಲ್ಲ ಬೋನಸ್ ಹಂಚುತ್ತಾರೆಯೇ ? ಸರ್ಕಾರದವರು ಯಾವ ಉದ್ದೇಶದಿಂದ ಸಂಸ್ಥೆಗಳನ್ನು ಮಾಡಿರುತ್ತಾರೆಯೋ ಅದಕ್ಕೆ ತದ್ವಿರುದ್ಧವಾಗಿ ಕೆಲಸ ನಡೆಯುತ್ತಿದೆ.

ಎರಡನೆಯದಾಗಿ ಸ್ವಾಮಿ, ಮರಿನಾಯಕನಹಳ್ಳಿ ಕೊರಟಗೆರೆ ತಾಲ್ಲೂಕು ನರಸಮ್ಮನ ಮಕ್ಕಳು ಎಲ್ಲ ಸೇರಿ ಏಳು ಸಾವಿರ ರೂಪಾಯಿಗಳನ್ನು ಲೋನ್ ಆಗಿ ತೆಗೆದುಕೊಂಡರು. ಸುಮಾರು ಏಳೂವರೆ ಎಕರೆ ಜಮೀನಿನಲ್ಲಿ ಬಾವಿಯನ್ನು ತೆಗೆಯಲು ೧೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಪಂಪ್ ಸೆಟ್ ಹಾಕಿಸಲು ೪-೫ ಸಾವಿರ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿರುತ್ತಾರೆ. ಸಾಲ ತೆಗೆದುಕೊಂಡಿರುವ ಏಳು ಸಾವಿರ ರೂಪಾಯಿಗಳನ್ನು ಕಟ್ಟಿಲ್ಲವೆಂದು ಆ ಜಮೀನನ್ನು ಹರಾಜು ಮಾಡಿರುತ್ತಾರೆ. ಹರಾಜು ನೋಟೀಸು ಕಳಿಸಿರತಕ್ಕಂಥದ್ದರಲ್ಲಿ ಸರ್ವೆ ನಂಬರ್ ಇಲ್ಲ. ಷೆಡ್ಯೂಲ್ ಇಲ್ಲ ಏನೇನು ಇಲ್ಲ. ಜಮೀನು ಇರುವುದು ಒಂದು ಊರಿನಲ್ಲಿಯಾದರೆ ಅದನ್ನು ಹರಾಜು ಮಾಡಿರುವುದು ಬೇರೊಂದು ಊರಿನಲ್ಲಿ. ಸುಮಾರು ೭೫-೮೦ ಸಾವಿರ ರೂಪಾಯಿ ಬೆಲೆಬಾಳತಕ್ಕಂಥ ಆಸ್ತಿ ಕೇವಲ ೧೦ ಸಾವಿರ ರೂಪಾಯಿಗಳಿಗೆ ಹರಾಜು ಮಾಡಿರುವುದಾಗಿ ನಿಮ್ಮ ಸೇಲ್ ಆಫೀಸರ್ ಬರೆದುಕೊಂಡು ಬಂದಿರುತ್ತಾರೆ. ಆ ಬಗ್ಗೆ ತಮಗೆ ಲೆಟರ್ ಕಳುಹಿಸಿ ಕೊಟ್ಟಿರುತ್ತೇನೆ ಅದಕ್ಕೆ ತಮ್ಮಿಂದ ಉತ್ತರ ಬಂದಿಲ್ಲ. ರಿಜಿಸ್ಟ್ರಾರ್, ಡೆಪ್ಯುಟಿ ರಿಜಿಸ್ಟ್ರಾರ್ ಅಸಿಸ್ಟೆಂಟ್ ರಿಜಿಸ್ಟ್ರಾರ್ ಇವರುಗಳಿಗೆ ಕಾಗದವನ್ನು ಬರೆದಿದ್ದರೂ ಕೂಡ ಯಾರಿಂದಲೂ ಉತ್ತರ ಬಂದಿಲ್ಲ. ಅವರ ಪರಿಸ್ಥಿತಿ ಹೇಗಿದೆ ಎಂದರೆ ಲೋನ್ ತೆಗೆದುಕೊಂಡಿರತಕ್ಕಂಥ ಆಯಮ್ಮನಿಗೆ ೮೦ ವರ್ಷಗಳಾಗಿರುತ್ತದೆ, ಕಣ್ಣು ಕಾಣಿಸುವುದಿಲ್ಲ ಕಿವಿ ಕೇಳಿಸುವುದಿಲ್ಲ. ನಮ್ಮ ಸರ್ಕಾರದವರು ಏನು ಒಂದು ಕಾನೂನು ಮಾಡಿದ್ದಾರೆ ಎಂದರೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕುಗಳಿಂದ ಸಾಲವನ್ನು ತೆಗೆದುಕೊಂಡವರು ಸಾಲವನ್ನು ತೀರಿಸದಿದ್ದರೆ ಜಮೀನನ್ನು ಹರಾಜು ಮಾಡುತ್ತೇವೆಂದು. ಈ ರೀತಿ ಬಂದ ಜಮೀನನ್ನು ಬಡಬಗ್ಗರಿಗೆ, ಹರಿಜನಗಿರಿಜನರಿಗೆ ಹಂಚಿದ್ದರೆ ನನಗೆ ಸಂತೋಷವಾಗುತ್ತಿತ್ತು. ಆದರೆ ೭೦-೮೦ ಸಾವಿರ ರೂಪಾಯಿ ಬೆಲೆಬಾಳತಕ್ಕಂಥ ಜಮೀನನ್ನು ಕೇವಲ ೧೦ ಸಾವಿರ ರೂಪಾಯಿಗಳಿಗೆ ಹರಾಜು ಹಾಕಿರುವುದನ್ನು ಬೇಕಾದರೆ ರೆಕಾರ್ಡ್ ತೆಗೆಸಿ ನೋಡಿ ಎನ್‌ಕ್ವಯರಿ ಮಾಡಿ ಇಂಥಾದ್ದು ನಡೆಯಬಾರದು. ಕೇವಲ ಸಾಲ ಸೌಲಭ್ಯವನ್ನು ಕೊಡುತ್ತೇವೆಂದು ಹೇಳಿ ಒಂದೇ ದಿವಸದಲ್ಲಿ ರೈತರ ಮನೆಯನ್ನು ಹಾಳು ಮಾಡುವ ಕೆಲಸ ಮಾಡಬಾರದು. ರೈತರ ಬೆನ್ನುಮೂಳೆ ಮುರಿದರೆ ರಾಷ್ಟ್ರದ ಗತಿ ಏನಾಗಬೇಕು ? ರಾಷ್ಟ್ರಕ್ಕೆ ಒಳ್ಳೆಯದಾಗಬೇಕಾದರೆ ರೈತರು ಬೆಳೆದುಕೊಟ್ಟರೆ ತಾನೆ ? ಯಾವಾಗಲಾದರೂ ರೈತರು ಸರ್ಕಾರಕ್ಕೆ ಮೋಸ ಮಾಡತಕ್ಕಂಥಾದ್ದು ಕಂಡು ಬಂದಿರುತ್ತದೆಯೇ ? ರೈತರ ಬಗ್ಗೆ ಇಷ್ಟೊಂದು ದುರ್ಲಕ್ಷ್ಯ ಸರ್ಕಾರಕ್ಕೆ ಇರಬಾರದು ದೊಡ್ಡ ದೊಡ್ಡ ಫ್ಯಾಕ್ಟರಿಗಳೆಂದು ಇವತ್ತು ಬೋರ್ಡ್ ಹಾಕಿಕೊಂಡಿರುತ್ತಾರೆ. ಲಕ್ಷಾಂತರ ರೂಪಾಯಿಗಳನ್ನು ಲೂಟಿ ಮಾಡುತ್ತಾರೆ, ನಾಳೆಯ ದಿವಸ ಬೋರ್ಡ್‌ಗಳನ್ನು ಬದಲಾಯಿಸುತ್ತಾರೆ, ಆದರೆ ರೈತ ಎಂದರೆ ನಮ್ಮ ದೇಶದ ಕಣ್ಣು ಇದ್ದಹಾಗೆ. ರೈತನನ್ನು ಎಚ್ಚರಿಸಲು ಇವತ್ತು ಸರ್ಕಾರಕ್ಕೆ ಪೋಲಿಸ್ ಇದೆ. ಅಧಿಕಾರವಿದೆ ಎಂದರೆ ಅದರಿಂದ ಏನು ಪ್ರಯೋಜನವಾಗಲಾರದು. ಲ್ಯಾಂಡ್ ರಿಫಾರ್ಮ್ಸ್ ಮಾಡುತ್ತೇವೆಂದು ಹೇಳಿದಿರಿ, ಆದರೆ ಎಲ್ಲ ಕಡೆ ಬರೀ ರಾಜಕೀಯ ವ್ಯವಹಾರ ನಡೆಯುತ್ತಿದೆ. ರೈತರ ಬಗ್ಗೆ ನಿರ್ಲಕ್ಷ್ಯ ಮನೋಭಾವದಿಂದ ಸರ್ಕಾರ ನಡೆಯುತ್ತಾ ಇದೆ. ಅದಕ್ಕೋಸ್ಕರವಾಗಿ ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ. ಮೊದಲು ರೈತನ ಏಳಿಗೆಯಾಗಬೇಕು ಇದರಿಂದ ಸರ್ಕಾರಕ್ಕೂ ಲಾಭದಾಯಕವಾಗುತ್ತದೆ. ಸೊಸೈಟಿಗಳನ್ನು ತೆರೆಯಬೇಕು. ಮತ್ತು ಅಲ್ಲಿ ಹರಿಜನ ಗಿರಿಜನರಿಗೆ ಸ್ಥಾನ ಮಾನಗಳನ್ನು ಕೊಡಬೇಕು ಅವನೂ ಸದಸ್ಯನಾಗಬೇಕು ಅವನು ಹಾಲು ಉತ್ಪಾದನೆ ಮಾಡಬೇಕು, ಹಾಲು ಉತ್ಪಾದನೆ ಮಾಡಬೇಕಾದರೆ, ಆತನಿಗೆ ಹಸುಗಳನ್ನು ಕೊಡಬೇಕು, ಅದರಿಂದ ಅವನಿಗೂ ಪ್ರಯೋಜನವಾಗುತ್ತದೆ. ಸಹಕಾರ ಸಂಘಗಳ ಮುಖಾಂತರ ಪ್ರತಿಯೊಬ್ಬ ಹರಿಜನರಿಗೂ, ಪ್ರತಿಯೊಬ್ಬ ಮಾರ್ಜಿನಲ್ ಫಾರ್ಮರ್ಸ್‌ಗೂ ಹಸು ಎಮ್ಮೆ ಕೊಡುವಂಥ ಕೆಲಸ ಮಾಡಿದರೆ ತಮಗೆ ಶಹಬಾಸ್‌ಗಿರಿ ಕೊಡುತ್ತೇವೆ.

ಇನ್ನು ಮಾನ್ಯ ಸಹಕಾರ ಸಚಿವರು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ; ಅವರ ವಿರುದ್ಧ ಯಾರೂ ಚುನಾವಣೆಗೆ ನಿಂತುಕೊಳ್ಳಬೇಡಿ ಎಂದು ನಾನು ನಮ್ಮ ಪಕ್ಷದವರನ್ನು ಕೇಳಿಕೊಳ್ಳುತ್ತೇನೆ ಕೇವಲ ರಾಜಕೀಯ ದೃಷ್ಟಿಯಿಂದ ಈ ಇಲಾಖೆ ಇರಬೇಕು, ಇವರಿಗೆ ಸಂಬಳ ಕೊಡಬೇಕೆಂದಿದ್ದರೆ ನಾನಾದರೂ ಹೇಳುತ್ತೇನೆ ಮೊದಲು ಇದನ್ನು ವೈಂಡ್ ಅಪ್ ಮಾಡಿ ಎಂದು ಇವತ್ತಿನ ದಿವಸ ಸೊಸೈಟಿಗಳಲ್ಲಿ ಎಷ್ಟು ಕೋಟಿ ರೂಪಾಯಿ ಹಾಳಾಗುತ್ತಿದೆ ಎಂಬುದನ್ನು ನೋಡಿ. ನಿಮ್ಮ ಕಾನೂನಿನಲ್ಲಿರುವ "He should be a member pouring milk to that society" ಎಂಬುದನ್ನು ನೀವು ಇಂಪೋಸ್ ಮಾಡಬಾರದು; ಮಾಡುವುದಾದರೆ, ಅವನಿಗೆ ಹಸುವನ್ನು ಕೊಡಿಸಿ ಅವನೂ ಇದರಲ್ಲಿ ಭಾಗವಹಿಸುವಂತೆ ಮಾಡಬೇಕಾಗುತ್ತದೆ.

ಸ್ವಾಮಿ, ಯಶವಂತಪುರದ ರೆಗ್ಯುಲೇಟೆಡ್ ಮಾರ್ಕೆಟ್ ಕಟ್ಟಿ ಎಷ್ಟು ದಿವಸ ಆಯಿತು ? ಇದುವರೆಗೂ ಅಲ್ಲಿ ಆಹಾರ ಪದಾರ್ಥಗಳನ್ನು ತಂದು ಮಾರಾಟ ಮಾಡುವುದಕ್ಕೆ ಏತಕ್ಕೆ ಪ್ರಯತ್ನ ಮಾಡುತ್ತಿಲ್ಲ? ಅಲ್ಲಿನ ಛೇರ್ಮನ್ ಮೇಲೆ ನೂರಾರು ಆಪಾದನೆಗಳು ಬಂದಿವೆ. ಯಶವಂತಪುರ ಮಾರ್ಕೆಟ್‌ನಲ್ಲಿ ಯಾವ ಅನುಕೂಲಗಳೂ ಇಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ.

ಇನ್ನು ಎರಡನೆಯದಾಗಿ, ಮಾರ್ಕೆಟ್ ಇಲಾಖೆಯಲ್ಲಿ ಸುಮಾರು ೩ ಸಾವಿರ ಜನ ನೌಕರರು ಇದ್ದಾರೆ. ನನಗೆ ತಿಳಿದಿರುವಂತೆ ೧೯೭೩ರಲ್ಲಿ ಸರ್ಕಾರದವರು ಒಂದು ನೋಟಿಫಿಕೇಷನ್ ಹೊರಡಿಸಿ ಈ ಮಾರ್ಕೆಟಿಂಗ್ ಇಲಾಖೆಯಲ್ಲಿರತಕ್ಕ ನೌಕರರನ್ನು ಸರ್ಕಾರೀ ನೌಕರರೆಂದು ಪರಿಗಣಿಸಲಾಗಿದೆ ಎಂದು ಹೇಳಿದರು. ನಂತರ ೧೯೭೭ರಲ್ಲಿ ಅದಕ್ಕೆ ತಿದ್ದುಪಡಿಯನ್ನು ಮಾಡಿದರು. ಆದರೆ ಅದನ್ನು ಈ ಲಾಗಾಯ್ತು ಕಾರ್ಯಗತ ಮಾಡಿಲ್ಲ. ಹೀಗೆ ೭ ತಿಂಗಳು ಕಳೆದರೂ ನೀವು ಸುಮ್ಮನಿರಲು ಕಾರಣವೇನು ? ಇದರಲ್ಲಿ ನಾವು ಯಾರೂ ನಿಮಗೆ ಅಡ್ಡ ಬರುತ್ತಿಲ್ಲ. ಅಡ್ಡ ಬರುತ್ತಿರುವವರು ಎಂದರೆ ನಿಮ್ಮ ಅಧಿಕಾರಿಗಳು. ನಿಮ್ಮ ಅಧಿಕಾರಿಗಳು ಕೊಟ್ಟಿರತಕ್ಕ ಉತ್ತರವನ್ನು ನಮ್ಮ ಮುಂದಿಟ್ಟಿದ್ದೀರಿ. ಈಗ ಅದು ಸರಿಯಲ್ಲವೆಂದು ತಾವು ಹೇಳುವುದಾದರೆ ನಿಮ್ಮ ಮೇಲೆ ನಾವು ಪ್ರಿವಿಲೇಜ್ ಮೋಷನ್‌ನನ್ನು ತರಬೇಕಾಗುತ್ತದೆ. ಅಲ್ಲಿ ೧೭ ಜನ ಅಪೀಲ್ ಹೋಗಿ ಸ್ಟೇ ತಂದಿದ್ದಾರೆ ಎಂದು ಹೇಳುತ್ತಿದ್ದೀರಿ. ಆದರೆ, ಕೋರ್ಟಿನಲ್ಲಿ ಅಪೀಲೇ ಅಡ್ಮಿಟ್ ಆಗಿಲ್ಲ; ಇನ್ನು ಸ್ಟೇ ಎಲ್ಲಿಂದ ಬರುತ್ತದೆ ? ನೀವು ಈ ವಿಚಾರವನ್ನು ಇಷ್ಟು ಲಘುವಾಗಿ ತೆಗೆದುಕೊಂಡು ಉತ್ತರ ಹೇಳವುದಾದರೆ, ನಿಮ್ಮ ಮೇಲೆ ನಾವು ಪ್ರಿವಿಲೇಜ್ ಮೋಷನ್ ತರಬೇಕಾಗುತ್ತದೆ. ನಿಮಗೆ ಉತ್ತರವನ್ನು ಕೊಟ್ಟವರು ಯಾರು ? ನೀವು ಈ ಉತ್ತರವನ್ನು ಸದನಕ್ಕೆ ನೀಡುವ ಮೊದಲು ಇದು ಸರಿಯಾಗಿದೆಯೇ ಎಂಬುದನ್ನು ನೋಡಬೇಕಾಗಿತ್ತು. ಈ ವಿಚಾರ ಇಷ್ಟಕ್ಕೆ ಮುಗಿಯಿತೆಂದು ತಿಳಿದುಕೊಳ್ಳಬೇಡಿ, ಮತ್ತೆ ಈ ಪ್ರಶ್ನೆ ಬಂದೇ ಬರುತ್ತದೆ; ಆಗ ನೀವು ಪುನಃ ಉತ್ತರವನ್ನು ಸದನಕ್ಕೆ ಕೊಡಬೇಕಾಗುತ್ತದೆ. ಆದ್ದರಿಂದ ನಿಮ್ಮ ಅಧಿಕಾರಿಗಳಿಂದ ಸರಿಯಾದ ಉತ್ತರವನ್ನು ತರಿಸಿಕೊಂಡು ಸಿದ್ಧವಾಗಿ ಇಟ್ಟುಕೊಂಡಿರಿ. ಎ.ಪಿ.ಎಂ.ಸಿ ಯಲ್ಲಿ ಸುಮಾರು ೧೦-೧೫ ಜನರನ್ನು ಇಲ್ಲೇ ರೆಗ್ಯುಲರೈಸ್ ಮಾಡುತ್ತೇವೆಂದು ಹೇಳುತ್ತಿದ್ದೀರಿ. ನೀವು ಇಷ್ಟು ಜನರನ್ನು ತೃಪ್ತಿಪಡಿಸುವುದಾದರೆ ಅಲ್ಲಿರತಕ್ಕ ೩ ಸಾವಿರ ಜನ ನೌಕರರ ಗತಿ ಏನು ? ಅವರಿಗೂ ನೀವು ಇನ್‌ಕ್ರಿಮೆಂಟ್, ರಜಾ, ಪೆನ್‌ಷನ್ ಎಲ್ಲಾ ಕೊಡಬೇಕಾಗುತ್ತದೆ. ಅದಕ್ಕೆ ನಾವಾಗಲಿ, ಅಥವಾ ಬೇರೆ ಯಾರೇ ಆಗಲಿ ಅಡ್ಡಿ ಬಂದಿಲ್ಲ. ಅಡ್ಡಿ ಬಂದಿರುವವರು ಎಂದರೆ ನಿಮ್ಮ ಅಧಿಕಾರಿಗಳು.

ನಾನು ತಮ್ಮಲ್ಲಿ ಕೇಳಿಕೊಳ್ಳುವುದು, ಈ ೩೦೦೦ ನೌಕರರಿಗೆ ನ್ಯಾಯವನ್ನು ಒದಗಿಸಿ ಕೊಡಬೇಕು ಎಂದು. ಇಷ್ಟು ಮಾತುಗಳನ್ನು ಹೇಳಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ರಾಜೂಗೌಡ (ಹಾನೂರು).—ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ಈ ಸದನದ ಮುಂದೆ ಮಾನ್ಯ ಸಹಕಾರ ಸಚಿವರು ತಂದಿರತಕ್ಕ ಬೇಡಿಕೆಯನ್ನು ಸಂಪೂರ್ಣವಾಗಿ ನಾನು ಸಮರ್ಥಿಸುತ್ತಾ ಕೆಲವು ವಿಚಾರಗಳನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಸ್ವಾಮಿ, ಈ ಸರ್ಕಾರ ರಂಗ ಎಂಬುದು ಪ್ರತಿ ವರ್ಷವೂ ಹೆಮ್ಮರವಾಗಿ ಬೆಳೆಯುತ್ತಿದೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಸುಮಾರು ೨೨,೦೦೫ ಸಹಕಾರ ಸಂಘಗಳಿದ್ದು ಅವುಗಳಲ್ಲಿ ಸುಮಾರು ೮೦ ಸಾವಿರ ಸದಸ್ಯರಿದ್ದಾರೆ; ಮತ್ತು ಸುಮಾರು ೪೦೦ ಕೋಟಿ ರೂಪಾಯಿಯಷ್ಟು ವಿವಿಧ ರೀತಿಯ ಸಾಲಗಳನ್ನು ಬಟವಾಡೆ ಮಾಡಿದ್ದಾರೆ. ಅವರು ಬಡವಾಡೆ ಮಾಡಿರತಕ್ಕ ಹಣ ಏನಿದೆ ಅದರಲ್ಲಿ ೧೧೦ ಕೋಟಿ ರೂಪಾಯಿ

ಮಾತ್ರ ವ್ಯವಸಾಯಗಾರರಿಗೆ ಸಂದಾಯವಾಗಿದೆ ಎಂಬುದನ್ನು ತಿಳಿಸಲು ನನಗೆ ತುಂಬಾ ವಿಷಾದವಾಗುತ್ತದೆ ನಮ್ಮ ರಾಜ್ಯದಲ್ಲಿ ಎಷ್ಟು ವ್ಯವಸಾಯ ಕುಟುಂಬಗಳಿವೆ ಅವುಗಳಲ್ಲಿ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ೬೫ ಕುಟುಂಬಗಳನ್ನು ಮಾತ್ರ ಈ ಸಹಕಾರ ತತ್ವದ ಕಕ್ಷೆಯಲ್ಲಿ ತಂದಿದೀರಿ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ, ಇದನ್ನು ಕಟ್ಟಕಡೆಯ ಮಟ್ಟದಲ್ಲಿ ಅಂದರೆ ೬೫ ಪರ್ಸೆಂಟ್‌ನಷ್ಟು ರೈತರಿಗೆ ಈ ಅನುಕೂಲ ಕಲ್ಪಿಸಿ ಕೊಟ್ಟಿದ್ದರೆ ಚೆನ್ನಾಗಿತ್ತು. ಸರ್ಕಾರದವರು ಋಣ ಪರಿಹಾರ ಕಾಯಿದೆಯನ್ನು ಜಾರಿಗೆ ತಂದಮೇಲೆ ಬಡವರಿಗೆ ಹೊರಗಡೆ ಎಲ್ಲಿಯೂ ಸಾಲ ಸಿಕ್ಕುತ್ತಿಲ್ಲ. ಯಾವ ಸಾಹುಕಾರರೂ ಸಾಲಗಳನ್ನು ಕೊಡುತ್ತಿಲ್ಲ. ಆದ್ದರಿಂದ ನಾನು ತಮಗೆ ಹೇಳುವುದು ಏನೆಂದರೆ, ಸೊಸೈಟಿಗಳಲ್ಲಿ ಬ್ಯಾಂಕ್‌ಗಳಲ್ಲಿ ಸಾಲ ವಿತರಣೆ ಮಾಡುವ ನೀತಿಯನ್ನು ಸ್ವಲ್ಪ ಸಡಿಲ ಮಾಡಬೇಕು. ಪ್ರತಿಯೊಬ್ಬ ರೈತನಿಗೂ ಸಾಲ ಅವರ ಮನೆಯ ಬಾಗಿಲಿನಲ್ಲೇ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕು. ಅನೇಕ ಊರುಗಳಲ್ಲಿ ಸಂಚಾರಿ ಆಸ್ಪತ್ರೆಗಳು ರೈತರ ಮನೆಯ ಬಾಗಿಲಿಗೇ ಹೋಗಿ ಔಷಧೋಪಚಾರ ಮಾಡುತ್ತಿವೆ; ಅದೇ ರೀತಿ ಇದನ್ನೂ ಕೂಡ ಮಾಡಬೇಕು. ಪ್ರತಿಯೊಬ್ಬರ ಮನೆಯ ಹತ್ತಿರ ಹೋಗಿ ಅವರನ್ನು ಸಹಕಾರ ಸಂಘದ ಸದಸ್ಯರನ್ನಾಗಿ ಮಾಡಿಕೊಳ್ಳಬೇಕು ಮತ್ತು ಅವರಿಗೆ ಸಾಲ ವಿತರಣೆ ಮಾಡುವುದಕ್ಕೆ ಬೇಕಾದ ರೆಕಾರ್ಡ್‌ಗಳನ್ನು ನಿಮ್ಮ ಅಧಿಕಾರಿಗಳು ತಯಾರು ಮಾಡಬೇಕು ಆಗ ಪ್ರತಿಯೊಂದು ರೈತ ಕುಟುಂಬದವರಿಗೂ ಸಹಾಯವಾಗುತ್ತದೆ. ರೈತರ ಕಷ್ಟ ನಿವಾರಣೆ ಆಗುವ ರೀತಿಯಲ್ಲಿ ಅವರಿಗೆ ಸಾಲ ವಿತರಣೆ ಆಗಿಲ್ಲ ಎಂಬುದನ್ನು ತಿಳಿದು ನಾವು ಬಹಳವಾಗಿ ವಿಷಾದಪಡಬೇಕಾಗಿದೆ. ವ್ಯವಸಾಯಗಾರರಿಗೆ ಸಾಲ ವಿತರಣೆಗಾಗಿ ತಾವು ಏನು ೧೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ ಅದರಲ್ಲಿ ಸುಮಾರು ೭೫ ಪರ್ಸೆಂಟ್‌ನಷ್ಟು ಮಾತ್ರ ಅವರ ಕೈ ಸೇರಿರಬಹುದೆಂಬುದನ್ನು ಗತ್ಯಂತರ ಇಲ್ಲದೆ ಹೇಳಬೇಕಾಗಿದೆ. ಇವತ್ತು ರೈತಾಪಿ ಜನರು ಅನೇಕ ರೀತಿಯ ತೊಂದರೆಗಳಿಗೆ ಒಳಗಾಗಿದ್ದಾರೆ. ಅದರಲ್ಲೂ ಸಹಕಾರ ಸಂಘಗಳಲ್ಲಿ ಆಗುತ್ತಿರತಕ್ಕ ತೊಂದರೆಗಳನ್ನು ನೋಡಿ ಎಷ್ಟೋ ಜನ ರೈತರು ಸಾಲಕ್ಕಾಗಿ ಈ ಸಹಕಾರ ಸಂಘಗಳಿಗೆ ಅರ್ಜಿಗಳನ್ನೇ ಹಾಕಬಾರದೆಂಬ ಮಟ್ಟಕ್ಕೆ ಹೋಗಿದ್ದಾರೆ. ಆದ್ದರಿಂದ ತಾವು ಇದನ್ನು ಗಮನಿಸಿ ಬಡ ರೈತರಿಗೆ ಅತಿ ಸುಲಭವಾಗಿ ಸಾಲ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ಈ ಸಹಕಾರ ಸಂಘಗಳು ರೈತರ ಆಶೋತ್ತರಗಳನ್ನು ಈಡೇರಿಸಿ ಅವರ ಬಾಳಿನ ನಂದಾದೀಪವಾಗಬೇಕಾಗಿದ್ದುವು. ಆದರೆ ಆ ಸಹಕಾರ ಸಂಘಗಳು ನಂದಾದೀಪ ಆಗುವ ಬದಲು ಕಸಾಯಿಖಾನೆಗಳಾಗಿವೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಸಹಕಾರ ಸಂಘಗಳು ಕೇವಲ ಸಕ್ಕರೆಯನ್ನು ಮಾರಾಟ ಮಾಡತಕ್ಕ ಸಂಸ್ಥೆಗಳಾಗಿವೆ. ನಿಜವಾಗಿ ಹೇಳುವುದಾದರೆ, ಸಹಕಾರ ಸಂಘದ ವ್ಯಾಪ್ತಿಯಲ್ಲಿ ಬರತಕ್ಕ ರೈತರಿಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿಕೊಟ್ಟಿಲ್ಲ ಎನ್ನುವ ಮಾತನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಸಂದರ್ಭದಲ್ಲಿ ಒಂದು ಗಮನಿಸಬೇಕಾದ ವಿಚಾರ ಎಂದರೆ, ಸಹಕಾರ ಸಂಸ್ಥೆಗಳಿಂದ ಏನು ೪೦೦ ಕೋಟಿ ರೂಪಾಯಿಗಳನ್ನು ಸಾಲವಾಗಿ ರೈತರಿಗೆ ಕೊಟ್ಟಿದ್ದಾರೆ ಅದರಲ್ಲಿ ಕೇವಲ ೩೭–೩೮ ಪರ್ಸೆಂಟ್‌ನಷ್ಟು ಮಾತ್ರ ವಸೂಲ್ ಮಾಡಿದ್ದಾರೆ. ಇದಕ್ಕೆ ಮೂಲ ಕಾರಣ ಏನು ಎಂಬುದನ್ನು ತಾವು ಪರಿಶೀಲಿಸಬೇಕು. ಯಾವ ಹಂತದಲ್ಲಿ ದೋಷವಿದೆ ಎಂಬುದನ್ನು ನೋಡಿ ಅದನ್ನು ಸರಿಪಡಿಸಲು ಪ್ರಯತ್ನ ಮಾಡಬೇಕು. ಉದಾಹರಣೆಗೆ ಹೇಳುವುದಾದರೆ ಇವತ್ತು ರೈತ ಏನು ಬೆಳೆಯನ್ನು ಬೆಳೆಯುತ್ತಿದ್ದಾನೆ ಅದಕ್ಕೆ ಮಾರುಕಟ್ಟೆಯಲ್ಲಿ ಸರಿಯಾದ ಬೆಲೆ ಸಿಕ್ಕುತ್ತಿಲ್ಲ. ಅವನು ಆ ಬೆಳೆಯನ್ನು ಬೆಳೆಯುವುದಕ್ಕೆ ಎಷ್ಟು ಹಣ ಖರ್ಚು ಮಾಡುತ್ತಾನೆ ಅಷ್ಟು ಹಣ ಕೂಡ ಅವನಿಗೆ ವಾಪಸ್ಸು ಬರುತ್ತಿಲ್ಲ. ಇದರಿಂದಾಗಿ ಅವನು ಸಹಕಾರ ಸಂಘಗಳಲ್ಲಿ ತೆಗೆದುಕೊಂಡ ಸಾಲವನ್ನು ತೀರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ.

ಆದ್ದರಿಂದ ತಮಗೆ ನಾನು ಒಂದು ಸಲಹೆ ಕೊಡುವುದೇನೆಂದರೆ, ಪ್ರತಿಯೊಂದು ಸಹಕಾರ ಸಂಘಗಳೂ ಕೂಡ ರೈತರು ಏನು ಆಹಾರ ಧಾನ್ಯಗಳನ್ನು ಬೆಳೆಯುತ್ತಾರೆ ಅವುಗಳನ್ನು ಒಳ್ಳೆಯ ಬೆಲೆ ಬರುವವರೆಗೆ ದಾಸ್ತಾನು ಮಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿಕೊಡಬೇಕು. ಅಂದರೆ ಅವುಗಳಿಗೆ ಹೆಚ್ಚಿನ ಷೇರು ಕ್ಯಾಪಿಟಲ್ ಕೊಡಬೇಕು.

೫–೩೦ ಪಿ.ಎಂ.

ರೈತ ಬೆಳೆದಂತಹ ಪದಾರ್ಥಗಳಿಗೆ ಸರಿಯಾದ ಬೆಲೆ ಸಿಗುವ ತನಕ, ಅವನು ಸಹಕಾರ ಸಂಘಗಳ ಮುಖಾಂತರ ಮಾಡಿರತಕ್ಕಂಥ ಸಾಲವನ್ನು ತೀರಿಸುವುದಕ್ಕೆ ಕಾಲಾವಕಾಶ ಕೊಡಬೇಕು. ಅದನ್ನು ಬಿಟ್ಟು ಅವನಿಂದ ಸುಸ್ತಿ ಬಡ್ಡಿ ವಸೂಲು ಮಾಡುವುದಕ್ಕೆ ಹೋದರೆ ಅವನು ತೆಗೆದುಕೊಂಡ ಸಾಲವನ್ನು ತೀರಿಸು

ವುದಂ ದುಸ್ಸಾಧ್ಯವಾಗುತ್ತದೆ. ಅವನು ಪಡೆದ ಸಾಲವನ್ನು ವಾಪಸ್ ಮಾಡಲಿಕ್ಕೆ ಅವನಿಗೆ ಸ್ವಲ್ಪ ಕಾಲಾವಕಾಶ ಮಾಡಿಕೊಡಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ರೈತನಿಗೆ ಯಾವ ರೀತಿ ಯಾದ ತೊಂದರೆಗಳು ಇರುತ್ತವೆ ಎನ್ನುವುದನ್ನು ಪರಿಶೀಲಿಸಿ ಅವನ ಕಷ್ಟಕಾರ್ಪಣ್ಯಗಳನ್ನೆಲ್ಲಾ ದೃಷ್ಟಿಯಲ್ಲಿ ಇಟ್ಟುಕೊಂಡು ವಸೂಲಿಯ ಏರ್ಪಾಡು ಮಾಡಬೇಕೆಂದು ಹೇಳಬಯಸುತ್ತೇನೆ. ಮತ್ತೆ ಇನ್ನೊಂದು ವಿಷಯವೇನೆಂದರೆ, ತಾವು, ಸಣ್ಣ ರೈತ ಮತ್ತು ಅತಿ ಸಣ್ಣ ರೈತ ಎಂಬುದಾಗಿ ವಿಂಗಡಿಸಿ ಅವರಿಗೆ ಸಹಾಯ ಮತ್ತು ಸೌಲತ್ತು ದೊರಕಿಸಿಕೊಡುತ್ತೇವೆಂದು ಬಹಳವಾಗಿ ಹೇಳುತ್ತಿದ್ದೀರಿ. ಆದರೆ ತಮ್ಮ ವರದಿಯಲ್ಲಿ, ರಾಜ್ಯದಲ್ಲಿ ಎಷ್ಟು ಜನ ಸಣ್ಣ ರೈತರು ಇದ್ದಾರೆ, ಮತ್ತೆ ಎಷ್ಟು ಜನರು ಅತಿ ಸಣ್ಣ ರೈತರು ಇದ್ದಾರೆ, ಅವರಲ್ಲಿ ಶೇಕಡಾ ಎಷ್ಟು ಮಂದಿಗೆ ತಾವು ಸಾಲವನ್ನು ಸಹಕಾರಿ ಸಂಘಗಳ ಮೂಲಕ ಕೊಡುತ್ತೀರಿ ಎಂಬು ದನ್ನು ಏನೂ ಹೇಳಿಲ್ಲ. ಸಣ್ಣ ರೈತರಿಗೆ, ಬಾವಿ ಮುಂತಾದ ಸೌಲಭ್ಯಗಳಿಗಾಗಿ ಸಾಲವನ್ನು ಕೊಡಲಾಗು ತ್ತಿದೆ. ಈ ಸಣ್ಣ ರೈತರ ಹೆಸರಿನಲ್ಲಿ ದೊಡ್ಡ ದೊಡ್ಡ ಜಮೀನ್ದಾರರು ಏನು ಇದ್ದಾರೆ ಅವರು ಈ ಸಾಲ ವನ್ನು ಪಡೆಯುತ್ತಿದ್ದಾರೆ, ಜೊತೆಗೆ ತಮ್ಮ ಹೆಸರಿನಲ್ಲಿ ಇರುವ ಆಸ್ತಿಯನ್ನು ಬೇರೆಯವರ ಹೆಸರಿಗೆ ಮಾಡಿ ಯಾವ ಕೆಲಸವನ್ನು ಮಾಡಬಾರದೋ ಅದೆಲ್ಲವನ್ನೂ ಮಾಡುತ್ತಿದ್ದಾರೆ. ಇದನ್ನೆಲ್ಲಾ ಇಲಾಖೆಯವರು ಕಣ್ಣಲ್ಲಿ ಕಣ್ಣಿಟ್ಟು ನೋಡಿ, ಸಣ್ಣ ರೈತನಿಗೆ ಏನು ಸೌಲಭ್ಯ ಸಿಕ್ಕಬೇಕೋ ಅದು ಭಾರಿ ಮತ್ತು ದೊಡ್ಡ ರೈತನಿಗೆ ಹೋಗದಂತೆ ನೋಡಿಕೊಳ್ಳಬೇಕು. ಇವತ್ತಿನ ದಿವಸ, ಪ್ರತಿಯೊಂದು ಪ್ರಾಥಮಿಕ ಭೂ ಅಭಿವೃದ್ಧಿ ಸಂಘಗಳ ಮುಖಾಂತರ ಸಣ್ಣ ರೈತರನ್ನು ಸದಸ್ಯರನ್ನಾಗಿ ಮಾಡುತ್ತಿದ್ದಾರೆ; ಅದರಲ್ಲಿ ಎಷ್ಟೋ ಜನ ದೊಡ್ಡ ರೈತರು ಸೇರಿದ್ದಾರೆ. ಅವರು ತಪ್ಪಿಸಿಕೊಂಡು ಈ ಸಣ್ಣ ರೈತರಿಂದ ಮಾತ್ರ ಸಾಲ ವಸೂಲಿ ಮಾಡುವುದಕ್ಕೆ ಪಿತೂರಿ ಮಾಡುತ್ತಾರೆ. ಸಣ್ಣ ರೈತ ಗತ್ಯಂತರವಿಲ್ಲದೆ ಸಾಲವನ್ನು ಕಟ್ಟಬೇಕಾಗುತ್ತದೆ. ಉದಾಹರಣೆಗೆ ಹೇಳಬೇಕೆಂದರೆ, ಯಾವುದೇ ಬ್ಯಾಂಕ್ ಡಿಫಾಲ್ಟ್ ಆಗಬೇಕಾದರೆ ಅಲ್ಲಿ ಇರತಕ್ಕಂಥ ದೊಡ್ಡ ರೈತ ಡಿಫಾಲ್ಟ್ ಆಗಿರುತ್ತಾನೆಯೇ ಹೊರತು ಸಣ್ಣ ರೈತನಲ್ಲ. ಕಾರಣ, ಸಣ್ಣ ರೈತ ಸಾಲ ಕೊಡದೆ ಹೋದರೆ ಅವನ ಮನೆಯನ್ನು ಜಪ್ತಿ ಮಾಡುತ್ತಾರೆ; ಅದೇ ದೊಡ್ಡ ರೈತ ಸಾಲ ಕೊಡದೆ ಹೋದರೆ ಅಧಿಕಾರಿಗಳು ಕೂಡ ಅವನ ಹತ್ತಿರ ಹೋಗಿ ಜಬರ್‌ದಸ್ತು ಮಾಡಲಿಕ್ಕೆ ಸಾಧ್ಯವಿಲ್ಲ. ಅವನು ಒಂದಲ್ಲ ಒಂದು ರೀತಿಯಲ್ಲಿ ಅಧಿಕಾರಿಗಳಿಂದ ತಪ್ಪಿಸಿಕೊಳ್ಳುವುದಕ್ಕೆ ನಾನಾ ಪ್ರಯತ್ನ ಮಾಡಿ ತಪ್ಪಿಸಿಕೊಳ್ಳುತ್ತಾನೆ. ಆದರೆ ಯಾವ ಕಾರಣದಿಂದಲೂ ಸಣ್ಣ ರೈತ ಸಾಲ ವಸೂಲಿಯಲ್ಲಿ ತಪ್ಪಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲವೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ತಮ್ಮ ವರದಿಯಲ್ಲಿ ಸಣ್ಣ ರೈತರ ಬಗ್ಗೆ ಯಾವ ಮಾಹಿತಿಯನ್ನು ಒದಗಿಸಿಲ್ಲ. ಇನ್ನು ಇದರ ಜೊತೆಗೆ ೧೯ ಜಿಲ್ಲಾ ಕೇಂದ್ರ ಬ್ಯಾಂಕುಗಳಿಂದ ಎಷ್ಟು ಹಣವನ್ನು ಕೊಟ್ಟಿದ್ದಾರೆ, ಮತ್ತೆ ಎಷ್ಟು ವಸೂಲಾತಿಯಾಗಿದೆ ಎನ್ನುವ ಬಗ್ಗೆ ಹೋದ ವರ್ಷದ ವರದಿಯಲ್ಲಿ ಕೊಟ್ಟಿತ್ತು, ಆದರೆ ಈ ವರ್ಷದ ವರದಿಯಲ್ಲಿ ಕೊಟ್ಟಿಲ್ಲ. ನಮ್ಮ ರಾಜ್ಯದಲ್ಲಿರುವ ೧೭೭ ಭೂ ಅಭಿವೃದ್ಧಿ ಬ್ಯಾಂಕುಗಳ ಪೈಕಿ ಎಷ್ಟು ಬ್ಯಾಂಕುಗಳು ಪೂರ್ಣವಾಗಿ ಜಿಲ್ಲಾ ಬ್ಯಾಂಕುಗಳಿಂದ ಹಣ ಪಡೆಯಲು ಅರ್ಹತೆ ಪಡೆದಿವೆ ಎಂಬು ದನ್ನು ಹೇಳಿದ್ದೀರಿ, ಆದರೆ ಎಷ್ಟು ರಿಸರ್ವ್ಡ್ ಫೈನಾನ್ಸ್ ಇದೆ ಎಂಬುದನ್ನು ಹೇಳಲಿಲ್ಲ. ನಮ್ಮ ರಾಜ್ಯ ದಲ್ಲಿ ಎಷ್ಟು ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್‌ಗಳು ಇವೆ ಎಂಬ ಬಗ್ಗೆ ಮಾಹಿತಿ ಕೊಟ್ಟಿದ್ದೀರಿ, ಆದರೆ ಅವು ಯಾವ ಯಾವ ವರ್ಗದ ರೈತರಿಗೆ ಸಾಲ ನೀಡಿವೆ ಎಂಬುದನ್ನು ಹೇಳಲಿಲ್ಲ. ಎಷ್ಟೆಷ್ಟು ಸಾಲ ವನ್ನು ಯಾವ ಯಾವ ರೈತರಿಗೆ ಕೊಡಬೇಕೆನ್ನುವ ಬಗ್ಗೆ ಯಾವುದಾದರೂ ಕಾರ್ಯಕ್ರಮ ಹಾಕಿಕೊಂಡಾಗ, ಅದರಲ್ಲಿ ಕೆಲವೇ ಕೆಲವು ಬ್ಯಾಂಕುಗಳು ಮಾತ್ರ ಜಿಲ್ಲಾ ಬ್ಯಾಂಕುಗಳಿಂದ ಹಣವನ್ನು ಪಡೆಯಲು ಅರ್ಹತೆ ಯನ್ನು ಪಡೆಯುವುದಿಲ್ಲ. ಕಾರಣ, ಅವು ವಸೂಲಾತಿ ಕ್ರಮದಲ್ಲಿ ಹಿಂದೆ ಬಿದ್ದಿರುತ್ತವೆ. ಆದ್ದರಿಂದ ಇದಕ್ಕೆ ಒಂದು ಸುಧಾರಿಸಿದ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಈಗ ತಾತ್ಕಾಲಿಕವಾಗಿ ಸಾಲ ಎಂದು ಒಬ್ಬೊಬ್ಬರಿಗೆ ೧೨೫ ರೂಪಾಯಿಗಳನ್ನು ಮಕ್ಕಳ ವಿದ್ಯಾಭ್ಯಾಸ ಅಥವಾ ಯಾವುದಾದರೂ ಜರೂರು ಸಮಸ್ಯೆಗಳಿಗೆ ಎಂದು ಕೊಡುತ್ತಿದ್ದೀರಿ. ಅದರಿಂದ ಯಾವ ರೀತಿ ಬಡ ರೈತನಿಗೆ ಸಹಾಯವಾಗುತ್ತದೆ? ಆದ್ದರಿಂದ ಅದನ್ನು ಕನಿಷ್ಟ ೫ ನೂರು ರೂಪಾಯಿಗಳಿಗೆ ಆದರೂ ಹೆಚ್ಚು ಮಾಡಬೇಕು. ಇವತ್ತಿನ ದಿವಸ ಋಣ ಪರಿಹಾರ ಕಾಯಿದೆ ಬಂದಿರುವುದರಿಂದ ಎಲ್ಲಿಯೂ ಸಣ್ಣ ರೈತರಿಗೆ ಸಾಲ ಹುಟ್ಟುತ್ತಿಲ್ಲ. ಈ ರೀತಿ ನಿಜವಾಗಿಯೂ ತೊಂದರೆಗೆ ಒಳಗಾಗಿರುವವರಿಗೆ ಬ್ಯಾಂಕುಗಳ ಸಾಲ ನೀಡುವುದರಿಂದ ಸಹಾಯ ವಾಗುತ್ತದೆ. ಅಂತಹ ಒಂದು ಸನ್ನಿವೇಶದಲ್ಲಿ ಕನಿಷ್ಟ ೧೦ ಸಾವಿರ ರೂಪಾಯಿಗಳನ್ನಾದರೂ ನೀಡುವಂತೆ ಮಾಡಿದರೆ ಉಪಯೋಗ ಆಗುತ್ತದೆ. ಅದನ್ನು ಖಂಡಿತ ಮಾಡಬೇಕೆಂದು ಹೇಳುತ್ತೇನೆ. ಕಮರ್ಷಿಯಲ್ ಬ್ಯಾಂಕುಗಳ ಮುಖಾಂತರ ಹಾಗೂ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ಸಾಲ ದೊರೆಯುತ್ತಿಲ್ಲ. ಅಂಥ ಕಡೆ ಈ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಹೊಸದಾಗಿ ರೇಷ್ಮೆ ಹುಳು ಸಾಕುವವರಿಗೆ ಮನೆ ಕಟ್ಟಲಿಕ್ಕೆ ಸಿರಿಕಲ್ಚರ್ ಇಲಾಖೆಯ ಮುಖಾಂತರ ಅನುಕೂಲ ಮಾಡಿಕೊಡುವ ಒಂದು ಯೋಚನೆ ಇದೆ. ಅದನ್ನು ದಯಮಾಡಿ ಇಲಾಖೆಯವರು ಸಮಗ್ರವಾಗಿ ಪರಿಶೀಲನೆ ಮಾಡಿ ಸರಿಯಾದ ರೀತಿಯಲ್ಲಿ ಪಟ್ಟಿ ಮಾಡಿ, ಯಾರಿಗೆ ಅದರ ಸಹಾಯ ಮತ್ತು ಸೌಲತ್ತು ಸಿಗಬೇಕೋ ಅವರಿಗೆ ಸಿಕ್ಕುವಂತಹ ರೀತಿ ಮಾಡಬೇಕೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ತಮ್ಮ ಸಹಕಾರ ಸಂಘಗಳ ಮುಖಾಂತರ ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ರೈತ ಬೆಳೆದ ದವಸ ಧಾನ್ಯಗಳನ್ನು ಶೇಖರಿಸಿಡಲು ಎಷ್ಟು ಹಣ ಕೊಟ್ಟಿದ್ದೀರಿ, ಅದರಲ್ಲಿ ಎಷ್ಟು ಕಟ್ಟಡಗಳು ಪರಿಪೂರ್ಣವಾಗಿವೆ ಮತ್ತು ಎಷ್ಟು ಕಟ್ಟಡಗಳು ಯಾವ ಯಾವ ಹಂತದಲ್ಲಿ ಇವೆ ಎನ್ನುವುದರ ಬಗ್ಗೆ ಯಾವುದೇ ಅಂಕಿ ಅಂಶಗಳನ್ನು ಕೊಟ್ಟಿಲ್ಲ. ಇನ್ನೂ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ಕೊಳ್ಳೇಗಾಲದ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ಸುಮಾರು ೧೦ ವರ್ಷಗಳಿಂದ ಒಬ್ಬರು ಕಾರ್ಯದರ್ಶಿಗಳು ಇದ್ದಾರೆ, ಅವರನ್ನು ಸ್ಟೇಟ್ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ನೇಮಿಸಲಾಗಿದೆ. ಅಲ್ಲಿ ಪ್ರತಿ ವರ್ಷವೂ ಆಡಿಟ್ ಮಾಡಿದ್ದಾರೆ ಆದರೆ ನಡೆದಿರತಕ್ಕ ಅವ್ಯವಹಾರ ಬಗ್ಗೆ ಯಾವ ಆಡಿಟ್ ರಿಪೋರ್ಟ್‌ನಲ್ಲಿಯೂ ಅದನ್ನು ಎತ್ತಿ ತೋರಿಸಿಲ್ಲ. ಅಂತೂ ಅಲ್ಲಿಯ ಆಡಳಿತ ಮಂಡಲಿಯವರೇ ಯಾರೋ ಒಬ್ಬರು ಅದನ್ನು ಜಾಯಿಂಟ್ ರಿಜಿಸ್ಟ್ರಾರ್‌ರವರ ಗಮನಕ್ಕೆ ತಂದರು. ಅಷ್ಟರಲ್ಲಿ ಅಲ್ಲಿ ಎಷ್ಟು ಹಣ ದುರುಪಯೋಗವಾಗಿದೆಯೋ ಅದರಲ್ಲಿ ಶೇಕಡಾ ೭೫ ಭಾಗವನ್ನು ಆ ಕಾರ್ಯದರ್ಶಿಯಿಂದ ವಸೂಲು ಮಾಡಬೇಕು ಎಂದು ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ತೀರ್ಮಾನ ಮಾಡಿತ್ತು. ಆ ಬಳಿಕ ಆ ಕಾರ್ಯದರ್ಶಿ ಜಾಯಿಂಟ್ ರಿಜಿಸ್ಟ್ರಾರ್‌ರವರನ್ನು ಯಾವುದೋ ರೀತಿ ಒಲಿಸಿಕೊಂಡು ಅದನ್ನು ವಸೂಲು ಮಾಡದೆ ಇರುವ ರೀತಿ ಮಾಡಿ ತಪ್ಪಿಸಿಕೊಂಡರು. ಆ ಮೇಲೆ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಏನು ಇತ್ತು ಅದನ್ನು ಸರ್ಕಾರದವರು ಸೂಪರ್‌ಸೀಡ್ ಮಾಡಿ ಅದನ್ನು ಆಡಳಿತಾಧಿಕಾರಿಗಳ ಕೈಗೆ ಕೊಟ್ಟಾಗ ಅವರು ಅಲ್ಲಿ ನಡೆದಿರುವುದನ್ನೆಲ್ಲಾ ವಿವರವಾಗಿ ಜಾಯಿಂಟ್ ರಿಜಿಸ್ಟ್ರಾರ್‌ರವರ ಗಮನಕ್ಕೆ ತಂದ ಮೇಲೆ ಅದನ್ನು ವಸೂಲು ಮಾಡಲು ಜಾಯಿಂಟ್ ರಿಜಿಸ್ಟ್ರಾರ್ ಆದೇಶ ಕೊಟ್ಟರು. ಆ ಕಾರ್ಯದರ್ಶಿಯವರ ಮಾತನ್ನು ನಂಬಿ ಅದನ್ನು ವಸೂಲು ಮಾಡುವುದನ್ನು ತಡೆ ಹಿಡಿದಿದ್ದರು. ಇದು ಯಾವ ರೀತಿ ಅಲ್ಲಿ ನಡೆಯುತ್ತಾ ಇತ್ತು ಎನ್ನುವುದನ್ನು ಯೋಚನೆ ಮಾಡಿ, ಪುನಃ ಅಲ್ಲಿ ಏನು ೭೫ ಪರ್ಸೆಂಟ್ ಹಿಡಿಯಬೇಕೋ ಅದರಲ್ಲಿ ೩೦ ಪರ್ಸೆಂಟ್ ವಸೂಲಿ ಮಾಡಲಿಕ್ಕೆ ಪ್ರಯತ್ನ ನಡೆಯುತ್ತಿದೆಯೆಂದು ಕೇಳಿ ಬರುತ್ತಾ ಇದೆ. ಈ ಸೇವಾ ಕ್ಷೇತ್ರದಲ್ಲಿ ಈ ರೀತಿ ಸಾಹುಕಾರರು ಮತ್ತು ದೊಡ್ಡ ದೊಡ್ಡ ರೈತರು ಹೇಳಿದಂತೆ ಅಧಿಕಾರಿಗಳು ಕೇಳಬೇಕು ಎನ್ನುವುದಾದರೆ ಈ ಸಹಕಾರಿ ಸಂಘಗಳು ಉದ್ಧಾರವಾಗುವುದಕ್ಕೆ ಸಾಧ್ಯವೇ ಎಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಸರ್ಕಾರದವರು ಎಷ್ಟು ಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದಾರೆ ಎಂಬುದು ನನಗೆ ಗೊತ್ತಿದೆ. ಖಾಸಗಿ ಮುಖಂಡರು ಹೇಳತಕ್ಕಂಥಾ ಮಾತನ್ನು ಮತ್ತು ಅಧಿಕಾರಿಗಳು ಹೇಳತಕ್ಕಂಥಾ ಮಾತುಗಳನ್ನು ಗಮನಕ್ಕೆ ತೆಗೆದುಕೊಂಡು ಒಂದು ವಿಶಾಲ ದೃಷ್ಟಿಯಿಂದ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಯಾರೋ ಹೇಳಿದರು ಎಂದು ಹೇಳಿ ಸಂಕುಚಿತ ಭಾವನೆಯಿಂದ ತೀರ್ಮಾನವನ್ನು ತೆಗೆದುಕೊಳ್ಳಬಾರದು. ಸಹಕಾರಿ ಬ್ಯಾಂಕುಗಳ ಚುನಾವಣೆಯನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಸಹಕಾರಿ ಬ್ಯಾಂಕುಗಳಲ್ಲಿ ರೈತರಿಗೆ ಸಾಲವನ್ನು ಕೊಡಬೇಕಾದರೆ ಕಡ್ಡಾಯವಾಗಿ ಇಷ್ಟು ಪರ್ಸೆಂಟ್ ಸಾಲಗಳೂ ವಸೂಲು ಆಗಲೇಬೇಕು ಎನ್ನುವ ನಿಯಮ ಏನಿದೆ ಅದನ್ನು ಸಡಿಲಗೊಳಿಸಬೇಕು. ಮಾನ್ಯ ಮಂತ್ರಿಗಳು ಈ ಬೇಡಿಕೆಯಲ್ಲಿ ೨೮ ಕೋಟಿ ರೂಪಾಯಿಗಳನ್ನು ಏನು ಕೇಳಿದ್ದಾರೆ ಅದು ಸಾಲುವುದಿಲ್ಲ. ಈ ಇಲಾಖೆಗೆ ೫೦ ಕೋಟಿ ರೂಪಾಯಿಗಳನ್ನು ಕೇಳಬೇಕು. ಸಹಕಾರ ಸಂಘಗಳು ದಷ್ಟಪುಷ್ಟವಾಗಿ ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಮಾನ್ಯ ಸಹಕಾರ ಮಂತ್ರಿಗಳು ಈ ಇಲಾಖೆಗೆ ಕಾಯಕಲ್ಪ ಮಾಡಬೇಕು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಡಿ. ಚೌಡಯ್ಯ (ಕೊರಗೋಡು) :—ಸನ್ಮಾನ್ಯ ಅಧ್ಯಕ್ಷರೇ, ನಾನು ಸಹಕಾರ ಇಲಾಖೆಯ ಬೇಡಿಕೆಯ ಮೇಲೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ನಾನು ಈ ಸಭೆಗೆ ಬಂದ ಮೇಲೆ ಬಡ್ಜೆಟ್ ಮೇಲೆ ಚರ್ಚೆ ಆಗುತ್ತಾ ಇರುವುದು ಇದು ಮೂರನೆಯ ಬಾರಿ. ಕಳೆದ ಎರಡು ವರ್ಷಗಳಲ್ಲಿ ಸಹಕಾರ ಇಲಾಖೆಯವರು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಗಳನ್ನು ಈ ವರದಿಯ ಜೊತೆ ಹೋಲಿಕೆ ಮಾಡಿದರೆ ಒಂದೇ ಮಾತಿನಲ್ಲಿ ಹೇಳಬೇಕಾಗುತ್ತದೆ ಈ ವರದಿ ಅಪೂರ್ಣವಾದುದು ಮತ್ತು ಅಸಮರ್ಪಕವಾದುದು ಎಂದು. ಈ ವರದಿಯನ್ನು ಮೊಟಕುಗೊಳಿಸಿದ್ದಾರೆ ಎಂದು ನಾನು

ಬಹಳ ವಿಷಾಧದಿಂದ ಹೇಳಬೇಕಾಗಿದೆ. ನಾನು ಬಿಚ್ಚು ಮನಸ್ಸಿನಿಂದ ಹೇಳುವುದಾದರೆ, ಈ ವರದಿಯನ್ನು ಇಲಾಖೆಯ ಅಧಿಕಾರಿಗಳು ಕೊಟ್ಟಿದ್ದಾರೆ. ಪೂರ್ವಭಾವಿಯಾಗಿ ಮಾನ್ಯ ಮಂತ್ರಿಗಳು ಇದನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿದ್ದರೆ ಅವರು ಈ ವರದಿಯನ್ನು ಒಪ್ಪುತ್ತಾ ಇರಲಿಲ್ಲ. ಈಗ ಮಾತಾಡುವುದಕ್ಕೆ ಮಾನ್ಯ ಅಧ್ಯಕ್ಷರು ಕಾಲದ ಮಿತಿಯನ್ನು ಗೊತ್ತು ಮಾಡಿದ್ದಾರೆ. ನನಗೆ ಒಂದು ಗಂಟೆಯ ಕಾಲಾವಕಾಶವನ್ನು ಕೊಡುವುದಾದರೆ ಪ್ರತಿಯೊಂದು ಐಟಂನಲ್ಲಿಯೂ ಏನು ತಪ್ಪುಗಳು ಇವೆ ಮತ್ತು ಯಾವ ರೀತಿ ಈ ವರದಿಯನ್ನು ಮೊಟಕುಗೊಳಿಸಿ ತಪ್ಪು ಅಂಕಿ ಅಂಶಗಳನ್ನು ಅಚ್ಚು ಹಾಕಿದ್ದಾರೆ ಎನ್ನುವುದನ್ನು ನಾನು ಎತ್ತಿ ತೋರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಛೇರ್ಮನ್: - ದಯಮಾಡಿ ಮಾನ್ಯ ಸದಸ್ಯರು ಒಂದು ಗಂಟೆಯ ಕಾಲವನ್ನು ತೆಗೆದುಕೊಳ್ಳಬೇಡಿ ೨೫ ನಿಮಿಷಗಳಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಎಚ್. ಡಿ. ಚೌಡಯ್ಯ :—ರೈತರಿಗೆ ವ್ಯವಸಾಯ ಸಾಲವನ್ನು ಕೊಡುವ ಬಗ್ಗೆ ಹೇಳುವುದಾದರೆ ನಾವು ೨೫–೩೦ ವರ್ಷಗಳಿಂದ ವ್ಯವಸಾಯ ಸಾಲವನ್ನು ವಿತರಣೆ ಮಾಡಿದ್ದೇವೆ. ಇದರಲ್ಲಿ ಅನೇಕ ಪ್ರಯೋಗಗಳನ್ನು ಮಾಡಿದ್ದೇವೆ. ಇದರ ಪರಿಣಾಮವಾಗಿ ಸುಮಾರು ೪-೫ ವರ್ಷಗಳ ಹಿಂದೆ ರಿಜರ್ವ್ ಬ್ಯಾಂಕಿನವರು ಒಂದು ನೀತಿಯನ್ನು ಆಚರಣೆಗೆ ತಂದರು. ಅದು ಏನೆಂದರೆ ರಾಷ್ಟ್ರದಲ್ಲಿ, ರಾಜ್ಯದಲ್ಲಿ ಎಲ್ಲೆಲ್ಲಿ ಯಾವ ಯಾವ ಸಹಕಾರ ಸಂಘಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲವೊ ಅಂಥಾ ಸಹಕಾರ ಸಂಘಗಳನ್ನು ವಾಣಿಜ್ಯ ಬ್ಯಾಂಕುಗಳಿಗೆ ವಹಿಸಬೇಕು ಎನ್ನುವ ಒಂದು ನಿರ್ಧಾರವನ್ನು ಕೈಗೊಂಡು ಅದರಂತೆ ನಮ್ಮ ರಾಜ್ಯದ ಪ್ರತಿ ಜಿಲ್ಲೆಯಲ್ಲಿಯೂ ಕೂಡ ಡಿಫಂಕ್ಟ್ ಆಗಿರತಕ್ಕ ಅನೇಕ ಸಹಕಾರಿ ಬ್ಯಾಂಕುಗಳನ್ನು ವಾಣಿಜ್ಯ ಬ್ಯಾಂಕುಗಳಿಗೆ ವಹಿಸಿ ಅವುಗಳ ಮುಖಾಂತರ ಸಾಲವನ್ನು ಪಾವತಿ ಮಾಡತಕ್ಕ ಮತ್ತು ವಸೂಲು ಮಾಡತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡು ಬಂದಿದ್ದಾರೆ. ಇದರಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ. ೧೯೭೭ನೇ ಇಸವಿಯಲ್ಲಿ ರೈತರಿಗೆ ವಿತರಣೆ ಮಾಡಿರತಕ್ಕ ಅಲ್ಪಾವಧಿ ಮತ್ತು ಮಧ್ಯಮಾವದಿ ಸಾಲದ ಮೊತ್ತ ೫೮ ಕೋಟಿ ೪೯ಲಕ್ಷ ರೂಪಾಯಿಗಳು. ೧೯೭೮-೭೯ನೇ ಸಾಲಿನಲ್ಲಿ ಈ ಸಾಲದ ವಿತರಣೆ ೫೪ಕೋಟಿ ೭೭ಲಕ್ಷ ರೂಪಾಯಿಗಳಿಗೆ ಇಳಿದಿದೆ. ೧೯೭೯–೮೦ನೇ ಸಾಲಿನಲ್ಲಿ ಡಿಸೆಂಬರ್ ಎಂಡ್‌ವರೆಗೆ ೨೨ಕೋಟಿ ೪೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ವರ್ಷ ಪೂರ್ತಿಯಾಗುವುದರೊಳಗೆ ೪೦ ಅಥವಾ ೪೨ ಕೋಟಿ ರೂಪಾಯಿಗಳು ಆಗಬಹುದು. ಇದರ ಜೊತೆಗೆ ವಾಣಿಜ್ಯ ಬ್ಯಾಂಕುಗಳು ಹಣವನ್ನು ವಿತರಣೆ ಮಾಡಿವೆ. ಇದನ್ನು ನೋಡಿದರೆ ಇವರು ತಪ್ಪು ಅಂಕಿ ಅಂಶಗಳನ್ನು ಈ ವರದಿಯಲ್ಲಿ ಕೊಟ್ಟಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

ಶ್ರೀ ಎ. ಬಿ. ಜಕನೂರ್ :—ಅದು ಪ್ರಿಂಟ್ ದೋಷ ಎಂದು ಕಾಣುತ್ತದೆ. ನಾನು ಅದನ್ನು ನೋಡುತ್ತೇನೆ.

ಶ್ರೀ ಎಚ್. ಡಿ ಚೌಡಯ್ಯ :—ಅದು ಪ್ರಿಂಟ್ ದೋಷವಲ್ಲ. ಅದನ್ನು ತಯಾರು ಮಾಡುವುದಕ್ಕೆ ಅಧಿಕಾರಿಗಳು ಯಾರು ತಲೆಯನ್ನು ಉಪಯೋಗಿಸಿದ್ದಾರೆ ಅವರದು ತಪ್ಪು ಎಂದು ಕಾಣುತ್ತದೆ.

ಶ್ರೀ ಎ. ಬಿ. ಜಕನೂರ್ :—ಮುಂದಿನ ಫಿಗರ್ ನೋಡಿದರೆ ಮಾನ್ಯ ಸದಸ್ಯರಿಗೆ ಗೊತ್ತಾಗುತ್ತದೆ, ಕೆಲವೊಂದು ಫಿಗರ್ಸ್ ಡಿಸೆಂಬರ್ ಎಂಡ್‌ವರೆಗೆ ಎಂದು ಕೊಟ್ಟಿದೆ. ಏತಕ್ಕೆಂದರೆ ಜನವರಿ ತಿಂಗಳಲ್ಲಿ ರಿಪೋರ್ಟ್ ತಯಾರು ಮಾಡಿ ಬಡ್ಜೆಟ್ಟಿನಲ್ಲಿ ಸೇರಿಸುವುದಕ್ಕೆ ಕಳುಹಿಸಬೇಕಾಗುತ್ತದೆ. ಆದ್ದರಿಂದ ಆಗ ಕರೆಕ್ಟ್ ಫಿಗರ್ಸ್ ಕೊಡಬೇಕಾಗುತ್ತದೆ.

ಚೇರ್ಮನ್ — ಕರೆಕ್ಟ್ ಫಿಗರ್ ಕೊಟ್ಟನಂತರ ಮಾನ್ಯ ಮಂತ್ರಿಗಳು ಈ ಚರ್ಚೆಗೆ ಉತ್ತರ ಕೊಡುವಾಗ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಬಹುದು. ಆಗ ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಚ್. ಡಿ. ಚೌಡಯ್ಯ :—ಈ ರಾಜ್ಯದ ರೈತರಿಗೆ ನೀಡಿರುವ ಒಟ್ಟು ಸಾಲದ ಮೊತ್ತ ಎಷ್ಟು ಈ ರಾಜ್ಯದಲ್ಲಿ ಎಷ್ಟು ವ್ಯವಸಾಯಗಾರರ ಸಂಸಾರಗಳು ಇವೆ? ಎಷ್ಟು ವ್ಯವಸಾಯಕ್ಕೆ ಯೋಗ್ಯವಾದ ಜಮೀನು ಇದೆ. ಯಾವ ಯಾವ ಬೆಳೆಗಳನ್ನು ರೈತರು ಬೆಳೆಯುತ್ತಾರೆ? ಎಷ್ಟು ಸಾಲದ ಮೊತ್ತ ಅವರಿಗೆ ಬೇಕಾಗುತ್ತದೆ ಎನ್ನುವ ಅಂಕಿ ಅಂಶಗಳನ್ನು ಶೇಖರಿಸಬೇಕಾಗುತ್ತದೆ. ಸಾಲವನ್ನು ವಿತರಣೆ ಮಾಡತಕ್ಕ ವಿಷಯದಲ್ಲಿ ಸರ್ಕಾರದ ಕಾರ್ಯಕ್ರಮ ದುರದೃಷ್ಟವಶಾತ್ ಕಳೆದ ವರ್ಷದಿಂದ ಇಳಿಮುಖವಾಗುತ್ತಿದೆ. ಇದರ ಬಗ್ಗೆ ನನಗೆ ಇರತಕ್ಕ ಕೊಂಚ ಅನುಭವದಿಂದ ಹೇಳುವುದಾದರೆ ಸಾಲವನು

ವಿತರಣೆ ಮಾಡತಕ್ಕದ್ದು ಮತ್ತು ಸಾಲವನ್ನು ವಸೂಲು ಮಾಡತಕ್ಕದರಲ್ಲಿ ಅನೇಕ ರೀತಿಯ ಲೋಪ ದೋಶಗಳು ಇರತಕ್ಕದ್ದೇ ಮುಖ್ಯ ಕಾರಣ ಈಗ ನನಗಿಂತ ಹಿಂದೆ ಮಾತನಾಡಿದ ನನ್ನ ಸ್ನೇಹಿತರೂ ಕೂಡ ಇದೇ ಮಾತನ್ನು ಹೇಳಿದ್ದಾರೆ. ಈಗ ಸಹಕಾರ ಸಂಘಗಳಲ್ಲಿ ಸಾಲವನ್ನು ಕೊಡುತ್ತಿದ್ದಾರೆ. ಹೀಗೆ ಸಾಲವನ್ನು ಕೊಡತಕ್ಕ ಸಂದರ್ಭದಲ್ಲಿ ಹಣದ ಭದ್ರತೆಗೋಸ್ಕರ ಜಮೀನನ್ನು ಮಾರ್ಟ್‌ಗೇಜ್ ಮಾಡಿಕೊಂಡು ಹಣವನ್ನು ಕೊಡುತ್ತಾರೆ. ಇದರ ಜೊತೆಗೆ ಒಬ್ಬರು ಜಾಮೀನು ಬೇರೆ ತೆಗೆದುಕೊಳ್ಳುತ್ತಾರೆ. ಹಣವನ್ನು ಪಡೆದಿರತಕ್ಕ ವ್ಯಕ್ತಿ ಸಾಲದ ಕಂತುಗಳನ್ನು ಮರುಪಾವತಿ ಮಾಡದೇ ಹೋದರೆ ಜಾಮೀನ್ದಾರ ಸಾಲವನ್ನು ಪಡೆಯುವುದಕ್ಕೆ ಹಕ್ಕು ಇರುವುದಿಲ್ಲ. ಮತ್ತು ಒಂದು ವೇಳೆ ಸಾಲ ಪಡೆದಿರತಕ್ಕ ವ್ಯಕ್ತಿಯ ಮೇಲೆ ಡಿಸ್‌ಪ್ಯೂಟ್ ಫೈಲು ಮಾಡಿ ಡಿಕ್ರಿಯಾಗಿ ಎಗ್ಸಿಕ್ಯೂಷನ್ನಿಗೆ ಹೋದಂತಹ ಸಮಯದಲ್ಲಿ ಅವನ ಮೂವಬಲ್ ಮತ್ತು ಇಮ್ಮೂವಬಲ್ ಆಸ್ತಿಯನ್ನೆಲ್ಲಾ ಎಗ್ಸಾಸ್ಟ್ ಮಾಡಿದ ಮೇಲೆ ಅವನಲ್ಲಿ ಬೇರೆ ಸೋರ್ಸಸ್ ಇಲ್ಲದೇ ಹೋದರೆ ಜಾಮೀನ್ದಾರನನ್ನು ಹಿಡಿಯಬೇಕೆಂದು ಕಾನೂನು ಇದೆ. ಈವೊತ್ತು ಇದರಿಂದ ಏನಾಗಿದೆ ಎಂದರೆ ಏಕಕಾಲದಲ್ಲಿ ಜಾಮೀನ್ದಾರರ ಮನೆಯನ್ನೂ ಜಪ್ತಿ ಮಾಡುತ್ತಾರೆ ಮತ್ತು ಬಾರೋಯರ್ಸ್ ಮನೆಯನ್ನೂ ಜಪ್ತಿ ಮಾಡುತ್ತಾರೆ. ಆದ್ದರಿಂದ ಈವೊತ್ತಿನ ದಿವಸ ಯಾರೇ ಆಗಲಿ ಜಾಮೀನಿಗೆ ಮುಂದೆ ಬರುವವರ ಸಂಖ್ಯೆ ಕಡಿಮೆಯಾಗಿದೆ. ನಿಜವಾಗಿ ಹೇಳಬೇಕಾದರೆ, ಅತ್ಯಾವಶ್ಯಕವಾಗಿ, ಅವಶ್ಯಕವಾಗಿ ಯಾವನಿಗಾದರೂ ಸಾಲ ಬೇಕು ಎಂದರೆ ಆ ಸೌಲಭ್ಯಗಳು ತಪ್ಪಿಹೋಗಿದೆ. ಈಗ ಇದರಿಂದ ರೈತರಿಗೆ ಎಷ್ಟು ಕಷ್ಟವಾಗಿದೆ ಅನ್ನುವುದಕ್ಕೆ ಒಂದು ಉದಾಹರಣೆ ಕೊಟ್ಟೆ. ಈ ರೀತಿಯಾಗಿ ಅನೇಕ ಉದಾಹರಣೆಗಳು ಇವೆ. ಅವನ್ನೆಲ್ಲಾ ಈಗ ಹೇಳುತ್ತಾ ಹೋದರೆ ಇನ್ನು ಅರ್ಧ ಗಂಟೆ ಕಾಲ ಬೇಕಾಗುತ್ತದೆ. ಆದುದರಿಂದ ನಾನು ಈ ಸಂದರ್ಭದಲ್ಲಿ ಅಗತ್ಯವಾಗಿ ಹೇಳುವುದೇನೆಂದರೆ ರೈತರಿಂದ ಈವೊತ್ತಿನ ದಿವಸ ಸಾಲ ಏನು ವಸೂಲ್ಮಾಡುತ್ತಿದ್ದಾರೆ, ಅದರಲ್ಲಿ ಏನು ಲೋಪ ದೋಷಗಳು ಇವೆ ಅದರ ಬಗ್ಗೆ ದಯಮಾಡಿ ಕೂಲಂಕಷವಾಗಿ ಚರ್ಚೆ ಮಾಡಿ ಅದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯಬೇಕು ಎಂದು ಹೇಳುತ್ತೇನೆ. ತಮ್ಮ ಅಧಿಕಾರಿಗಳು ಈ ಬಗ್ಗೆ ಸರಿಯಾಗಿ ಯೋಚನೆ ಮಾಡದೇ ಹೋದರೆ ವರ್ಷೇ ವರ್ಷೇ ೪-೫ ಕೋಟಿ ರೂಪಾಯಿ ಉತ್ಪನ್ನ ಕಡಿಮೆಯಾಗುತ್ತದೆ. ನಿಜವಾಗಿ ಯಾರಿಗೆ ಅವಶ್ಯಕವಾಗಿ ಸಾಲ ಬೇಕೋ ಅವರಿಗೆ ಸಾಲ ಒದಗಿಸುವುದಕ್ಕೆ ಸಾಧ್ಯವಾಗದೇ ಹೋಗುತ್ತದೆ.

ಇನ್ನು ಸ್ಪೆಷಲ್ ಪ್ರೊಗ್ರಾಂನಲ್ಲಿ, ಎಸ್. ಎಫ್. ಡಿ. ಎ. ಮತ್ತು ಎಂ. ಎಫ್. ಎ. ಬೆನಿಫಿಷರೀಸ್ ಯಾರ್ಯಾರು ಇದ್ದಾರೆ, ಅನ್ನುವುದರ ಬಗ್ಗೆ ೧೨. ೨೬ ಲಕ್ಷ ಅನ್ನುವ ಒಂದು ಅಂಕಿ ಸಂಖ್ಯೆಯನ್ನು ಇಲ್ಲಿ ಕೊಟ್ಟಿದ್ದೀರಿ ಇದರಲ್ಲಿ ೩೦-೬-೧೯೭೮ರ ವರೆಗೆ ಇರುವುದನ್ನು ಕೊಟ್ಟಿದ್ದೀರಿ. ಕೊನೇ ಪಕ್ಷ ಮಾರ್ಚ್ ೧೯೮೦ರ ವರೆಗಾದರೂ (ಲೇಟೆಸ್ಟ್) ಫಿಗರ್ಸ್ ಕೊಡಬೇಕಾಗಿತ್ತು. ಏತಕ್ಕೆ ಕೊಡಲಿಲ್ಲಾ ? ಇದರಲ್ಲಿ ಅನೇಕ ಲೋಪದೋಷಗಳು ಸೊಸೈಟಿಯ ಮಟ್ಟದಲ್ಲಿ ಇವೆ. ಸಾಮಾನ್ಯವಾಗಿ ಬೆನಿಫಿಷರೀಸ್ ಅನ್ನು ಐಡೆಂಟಿಫೈ ಮಾಡತಕ್ಕಂಥಾ ಕಾಲದಲ್ಲಿ ಮಧ್ಯಮ ವರ್ಗದ ರೈತರು ಸ್ಮಾಲ್ ಫಾರ್ಮರ್ಸ್, ಮಾರ್ಜಿನಲ್ ಫಾರ್ಮರ್ಸ್ ಏನು ಇದ್ದಾರೆ ಅವರನ್ನು ಐಡೆಂಟಿಫೈ ಮಾಡತಕ್ಕಂಥಾ ಸಂದರ್ಭಗಳು ಇವೆಯೋ ಅನ್ನುವುದನ್ನು ನಾವು ನೋಡಬೇಕಾಗಿದೆ.

ಇನ್ನು ರೀಆರ್ಗನೈಸೇಷನ್ ಆಫ್ ದಿ ಅಗ್ರಿಕಲ್‌ಚರಲ್ ಸೊಸೈಟೀಸ್ ಬಗ್ಗೆ ಹೇಳಬೇಕಾದರೆ, ಈ ಹಿಂದೆ ಮಾತನಾಡಿದಂಥಾ ಆಡಳಿತ ಪಕ್ಷದವರಾದ ಶ್ರೀ ತೆಕ್ಕೇಡ್‌ರವರು ರೈತರ ಬಗ್ಗೆ ಚೆನ್ನಾಗಿ ಹೇಳಿದ್ದಾರೆ. ಇದರಲ್ಲಿ ರಾಜಕೀಯ ನಡೆಸುವುದೇನೂ ಇಲ್ಲ. ಈ ಬಗ್ಗೆ ಹಿಂದಿನ ಮಂತ್ರಿಗಳಿಗೂ ಹೇಳಿದ್ದೇನೆ. ತಮಗೂ ಹೇಳಿದ್ದೇನೆ. ಚೆನ್ನಾಗಿ ಕೆಲಸ ಮಾಡತಕ್ಕಂಥಾ ಸಹಕಾರ ಸಂಘಗಳು ಏನು ಇವೆ, ಅವುಗಳೊಂದಿಗೆ ಕೆಲಸ ಮಾಡದೇ ಇರತಕ್ಕಂಥಾ ಸಹಕಾರ ಸಂಘಗಳು, ಡಿಫಂಕ್ಟ್ ಸೊಸೈಟಿಗಳು, ಮಿಸ್ ಅಪ್ರೋಪ್ರಿಯೇಷನ್ ಆಗಿರತಕ್ಕಂಥಾದ್ದು ಇಂಥಾ ಸೊಸೈಟಿಗಳನ್ನು ಸೇರಿಸಿಬಿಟ್ಟಿದ್ದರಿಂದ ಚೆನ್ನಾಗಿ ಕೆಲಸ ಮಾಡುವ ಸೊಸೈಟಿಗಳೂ ಕೂಡ ಈವೊತ್ತಿನ ದಿವಸ ಸರಿಯಾಗಿ ಕೆಲಸ ಮಾಡದೇ ಹಾಗೆಯೇ ಇವೆ. ಈ ಬಗ್ಗೆ ಬೇಕಾದರೆ ಅನೇಕ ನಿದರ್ಶನಗಳನ್ನು ಕೊಡುತ್ತೇನೆ. ಇದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ. ಆದುದರಿಂದ ಇದರ ಬಗ್ಗೆ ಏನಾದರೂ ಒಂದು ಪರಿಹಾರವನ್ನು ಕಂಡುಹಿಡಿಯಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಬಗ್ಗೆ ಕೆಲವು ಸಂದರ್ಭಗಳಲ್ಲಿ ಪ್ರತ್ಯೇಕವಾಗಿಯೂ ಹೇಳಿದ್ದೇನೆ. ಈ ಬಗ್ಗೆ ಹೇಳಬೇಕಾದರೆ ಇದನ್ನು ಈಗಲಾದರೂ ಸಹ ಬೈಫರ್‌ಕೇಟ್ ಮಾಡುವುದಕ್ಕೆ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ. ಯಾವ ಸಹಕಾರ ಸಂಘಗಳು ಉತ್ತಮವಾಗಿ ಕೆಲಸ

ಮಾಡಿಕೊಂಡು ಹೋಗುತ್ತಿವೆ. ಅವುಗಳೊಂದಿಗೆ ಡಿಫಂಕ್ಟ್ ಆಗಿರತಕ್ಕಂಥಾ ಸಹಕಾರ ಸಂಘಗಳನ್ನೂ ಮಿಸ್ ಅಪ್ರೋಪ್ರಿಯೇಷನ್ ಆಗಿರತಕ್ಕಂಥಾ ಸಹಕಾರ ಸಂಘಗಳನ್ನೂ ಸೇರಿಸುವುದು ಅಷ್ಟು ಸರಿಯಾದುದಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಕನ್‌ಸಂಪ್‌ಷನ್ ಫೈನಾನ್ಸ್ ಬಗ್ಗೆ ಏನು ಪ್ರೋಗ್ರೆಸ್ ಆಗಿದೆ ಅದರ ಬಗ್ಗೆ ಒಂದು ರಿಪೋರ್ಟ್‌ನ್ನು ಏತಕ್ಕೆ ಕೊಡಬಾರದು ಎಂದು ಕೇಳುತ್ತೇನೆ. ೧೯೭೭-೭೮, ೧೯೭೮-೭೯, ೧೯೭೯-೮೦ ಮತ್ತು ಚಾಲ್ತಿ ಸಾಲಿನ ೧೯೮೦-೮೧ರಲ್ಲಿ ಈ ಬಗ್ಗೆ ಏನು ಪ್ರಗತಿಯಾಗಿವೆ ಅದರ ಅಂಕಿ ಸಂಖ್ಯೆಗಳನ್ನು ಈವಾಗ ಏತಕ್ಕೆ ಕೊಡಲಿಲ್ಲಾ ಅನ್ನುವುದನ್ನು ದಯವಿಟ್ಟು ಹೇಳುತ್ತೀರಾ ?

ಶ್ರೀ ಎ. ಬಿ. ಜಕನೂರ್.—ಆ ಮಾಹಿತಿ ಇಲ್ಲದೇ ಇದ್ದರೆ, ಮಾನ್ಯ ಸದಸ್ಯರಿಗೆ ನಾನು ಉತ್ತರ ಕೊಡುವಾಗ ತಿಳಿಸುತ್ತೇನೆ.

ಶ್ರೀ ಹೆಚ್. ಟಿ. ಚೌಡಯ್ಯ.—ಇನ್ನು ಕೋಆಪರೇಟೀವ್ ಪ್ರೊಸೆಸಿಂಗ್ ಸೊಸೈಟಿ ಬಗ್ಗೆ ಹೇಳುವುದಾದರೇ ಈಗ ೨೫೩ ಯೂನಿಟ್ಸ್ ಇವೆ. ಅವುಗಳ ಪೈಕಿ ಸಹಕಾರೀ ರಂಗದಲ್ಲಿ ಎಷ್ಟು ಕೆಲಸ ಮಾಡುತ್ತಾ ಇವೆ ಸಹಕಾರೇತರ ರಂಗದಲ್ಲಿ ಎಷ್ಟು ಕೆಲಸ ಮಾಡುತ್ತಾ ಇವೆ ಅನ್ನುವುದನ್ನು ಇದರಲ್ಲಿ ಕೊಟ್ಟಿದ್ದೀರಿ. ಮತ್ತು ಇದರಲ್ಲಿ ಸಿಕ್ ಯೂನಿಟ್‌ಗಳು ಎಷ್ಟು ಇವೆ ಅನ್ನುವುದನ್ನೂ ಸಹ ಕೊಟ್ಟಿದ್ದೀರಿ. ಇದರಲ್ಲಿ ಕಾರ್ಯಗತವಾಗುತ್ತಿರುವುದು ಎಷ್ಟು, ಕಾರ್ಯಗತವಾಗದೇ ಇರುವುದು ಎಷ್ಟು ? ನಮ್ಮ ರಾಜ್ಯದಲ್ಲಿ ಸಿಕ್ ಯೂನಿಟ್ಸ್ ಎಷ್ಟು ಇವೆ ಅದನ್ನು ರೀಹ್ಯಾಬಿಲಿಟೇಟ್ ಮಾಡಬೇಕಾದರೆ ಸರ್ಕಾರ ಇದರ ಬಗ್ಗೆ ಏನಾದರೂ ಒಂದು ಯೋಜನೆ ಹಾಕಿಕೊಂಡಿದ್ದಾರೋ ಏನೋ ಗೆ ತ್ತಿಲ್ಲ. ನಾನು ಈ ಸಂದರ್ಭದಲ್ಲಿ ಒಂದು ಸಲಹೆ ಕೊಡುತ್ತೇನೆ. ಈ ಸಿಕ್ ಯೂನಿಟ್ಸ್‌ನ್ನು ಪ್ರೊಸೆಸಿಂಗ್ ಯೂನಿಟ್ಸ್ ಆಗಿ ಮಾಡುವುದಕ್ಕೆ ಒಂದು ನಿಖರವಾದ ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಒಂದು ದೊಡ್ಡ ಜವಾಬ್ದಾರಿ. ಇದನ್ನು ಸರ್ಕಾರದವರು ಪರಿಗಣಿಸುತ್ತಾರೆಂದು ನಾನು ನಂಬಿದ್ದೇನೆ.

ಇನ್ನು ಕೋಆಪರೇಟೀವ್ ಷುಗರ್ ಫ್ಯಾಕ್ಟರಿ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಸುಮಾರು ೨೨ ಸಕ್ಕರೆ ಕಾರ್ಖಾನೆಗಳು ಇವೆ. ಇದರಲ್ಲಿ ಸಹಕಾರೀ ರಂಗದಲ್ಲಿ ಎಷ್ಟು ನಡೆಯುತ್ತಾ ಇವೆ, ಸಹಕಾರೇತರ ರಂಗದಲ್ಲಿ ಎಷ್ಟು ನಡೆಯುತ್ತಾ ಇವೆ ಅನ್ನುವುದನ್ನೂ ಸಹ ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಸಕ್ಕರೆ ಕಾರ್ಖಾನೆಗಳು ಸಹಕಾರೀ ರಂಗದಲ್ಲೇ ಇರಲಿ ಅಥವಾ ಸಹಕಾರೇತರ ರಂಗದಲ್ಲೇ ನಡೆಯಲ್ಲಿ ಅವುಗಳಿಗೆ ೧೯೭೫ರಲ್ಲಿ ಒಂದೊಂದು ಜೋನ್ ಅನ್ನು ಗೊತ್ತುಪಡಿಸಿದ್ದಾರೆ. ನಮ್ಮ ಜಿಲ್ಲೆ ಬಗ್ಗೆ ಹೇಳುವುದಾದರೆ, ನಮ್ಮ ಜಿಲ್ಲೆಯಲ್ಲಿ ೩ ಸಕ್ಕರೆ ಕಾರ್ಖಾನೆಗಳು ಇವೆ. ಈ ಮೂರಕ್ಕೂ ಕೂಡ ಇಂತಿಂಥಾ ಜೋನ್ ಎಂದು ಫಿಕ್ಸ್ ಮಾಡಿದ್ದಾರೆ. ಈ ಕಾರ್ಖಾನೆಯು ಬೈಲಾ ಪ್ರಕಾರ ಆ ಸಹಕಾರ ಸಂಘದ ಒಂದು ವ್ಯಾಪ್ತಿಯಲ್ಲೇ ಇರತಕ್ಕಂಥಾ ಜಮೀನುಗಳಲ್ಲಿ ಕಬ್ಬನ್ನು ಬೆಳೆದು ಆ ಸಕ್ಕರೆ ಕಾರ್ಖಾನೆಗೆ ಕೊಡಬೇಕು. ಉದಾಹರಣೆಗೆ ನಮ್ಮ ಪಾಂಡವಪುರದ ಒಂದು ಸಕ್ಕರೆ ಕಾರ್ಖಾನೆಗೆ ೪ ತಾಲ್ಲೂಕುಗಳು, ಅಂದರೆ ಮಂಡ್ಯ, ಪಾಂಡವಪುರ, ನಾಗಮಂಗಲ ಮತ್ತು ಕೃಷ್ಣರಾಜನಗರ ತಾಲ್ಲೂಕುಗಳು ಒಳಗೊಂಡಿವೆ. ಈ ಒಂದು ಸಕ್ಕರೆ ಕಾರ್ಖಾನೆಯ ವ್ಯಾಪ್ತಿಗೆ ೪ ತಾಲ್ಲೂಕುಗಳು ಒಳಗೊಂಡಿದ್ದರೂ ಕೂಡ ಇದರಲ್ಲಿ ಮಂಡ್ಯದ ಎರಡು ತಾಲ್ಲೂಕುಗಳನ್ನು ಬಿಟ್ಟು ಬಿಟ್ಟಿದ್ದಾರೆ. ಆದರೆ ಅವರಿಂದ ಷೇರ್ ಮೊಬಲಗನ್ನು ಮಾತ್ರ ಕಲೆಕ್ಟ್ ಮಾಡಿದ್ದಾರೆ. ಅವರು ಈಗ ಈ ಒಂದು ವ್ಯಾಪ್ತಿಯಲ್ಲಿ ಬರದೇ ಇರುವುದರಿಂದ, ನಮ್ಮ ಷೇರ್ ಮೊಬಲಗನ್ನು ವಾಪಸ್ಸು ಕೊಡಿ ಎಂದು ಅರ್ಜಿ ಕೊಟ್ಟು ಒಂದು ವರ್ಷವಾದ ಮೇಲೆ ಆ ಷೇರ್ ಮೊಬಲಗನ್ನು ವಾಪಸ್ಸು ಕೊಡುತ್ತೇವೆ ಎಂದು ಹೇಳಿದ್ದಾರೆ ಇದು ಬಹಳ ಅನ್ಯಾಯ. ಇದು ಸಹಕಾರಿಯ ಒಂದು ತತ್ವಕ್ಕೆ ಸರಿಯೇ ಎಂದು ಕೇಳುತ್ತೇನೆ. ಆದುದರಿಂದ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಈ ಬಗ್ಗೆ ಯೋಚನೆ ಮಾಡಿ ಪಾಂಡವಪುರದ ಸಕ್ಕರೆ ಕಾರ್ಖಾನೆಯ ಆಡಳಿತವರ್ಗಕ್ಕೆ ಯಾವ ರೀತಿ ಆದೇಶ ಕೊಡಬೇಕೋ ಆ ರೀತಿ ಆದೇಶ ಕೊಡಬೇಕೆಂದು ಹೇಳುತ್ತೇನೆ. ಅವರು, ತಮ್ಮ ಒಂದು ಸಕ್ಕರೆ ಕಾರ್ಖಾನೆಯ ವ್ಯಾಪ್ತಿಗೆ ಒಳಪಡದ ಮೇಲೆ ಕೂಡಲೇ ಆ ಜನರ ಷೇರು ಮೊಬಲಗನ್ನು ಕೊಡಬೇಕಾದ್ದು ನ್ಯಾಯವಲ್ಲವೇ ? ನಾನು ಈ ಮಾತನ್ನು ಅನಿವಾರ್ಯವಾಗಿ ಹೇಳಬೇಕಾಗಿದೆ.

೬-೦೦ ಪಿ. ಎಂ.

ಇನ್ನು ವಿಶ್ವೇಶ್ವರಯ್ಯ ನಾಲದ ಮಾರ್ಗದಲ್ಲಿ ಒಂದು ಸುರಂಗವಿದೆ. ಅಲ್ಲಿ ಒಂದು ಲಿಫ್ಟ್ ಇರಿಗೇಷನ್ ಸೊಸೈಟಿ ಇದೆ. ಅದು ಕಳೆದ ಒಂದು ವರ್ಷದಿಂದ ಕೆಲಸ ಮಾಡುತ್ತಿದೆ. ಅಲ್ಲಿ ಇರುವಂತಹ ದೋಷ ಏನೆಂದರೆ, ಆ ಸೊಸೈಟಿಯ ಸದಸ್ಯರು ಕನ್‌ಸಮ್‌ಷನ್ ಚಾರ್ಜ್ ಎಂದು ಪ್ರತಿ ತಿಂಗಳೂ ಕೊಡುತ್ತಾರೆ. ಅದರ ಜೊತೆಗೆ ಒಂದು ತಿಂಗಳಿಗೆ ೩ ಸಾವಿರ ರೂಪಾಯಿಗಳನ್ನು ಡಿಮ್ಯಾಂಡ್ ಚಾರ್ಜ್ ಎಂದು ಬೇರೆ ಕೊಡಬೇಕಾಗಿದೆ. ಇದು ಸರಿಯಲ್ಲ. ಇದನ್ನು ಮನ್ನಾ ಮಾಡಬೇಕೆಂದು ಕೆ.ಇ.ಬಿ.ನವರಿಗೆ ಮತ್ತು ಸರ್ಕಾರಕ್ಕೆ ಮನವಿಗಳನ್ನು ಕೊಟ್ಟಿದ್ದರೂ ಸಹ ಇನ್ನೂ ಪರಿಹಾರ ಒದಗಿಸಿಲ್ಲ. ಇದೂ ಸಹ ಸಹಕಾರೀ ಕ್ಷೇತ್ರದಲ್ಲಿ ಬರುವುದರಿಂದ ಮಾನ್ಯ ಮಂತ್ರಿಗಳು ಇದನ್ನು ಪರಿಶೀಲನೆ ಮಾಡಿ, ಇದರ ಬಗ್ಗೆ ಪರಿಹಾರ ದೊರಕಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಎನ್‌ಕ್ವೈರಿ ಮತ್ತು ಇನ್ಸ್‌ಪೆಕ್ಷನ್ ಬಗ್ಗೆ ಹೇಳುವುದಾದರೆ, ಇವೊತ್ತಿನ ದಿವಸ ಸಿ.ಇ.ಒ. ಅವರಿಂದ ಹಿಡಿದು ರಿಜಿಸ್ಟ್ರಾರ್‌ವರೆಗೆ ಯಾರೂ ಸಹ ಸರಿಯಾಗಿ ಇನ್ಸ್‌ಪೆಕ್ಷನ್ ಮಾಡುತ್ತಿಲ್ಲವೆಂಬ ವಿಚಾರವನ್ನು ಈ ಸದನದಲ್ಲಿರುವಂತಹ ಎಲ್ಲಾ ಸನ್ಮಾನ್ಯ ಸದಸ್ಯರೂ ಒಪ್ಪುತ್ತಾರೆ. ಇದೇ ಮಾತನ್ನು ನಾನು ಹಿಂದಿನ ವರ್ಷಗಳಲ್ಲಿಯೂ ಸಹ ಹೇಳಿದ್ದೇನೆ. ಇದರ ಬಗ್ಗೆ ಒಂದು ರಿವ್ಯೂ ಮಾಡಿ ಎಂದು ನಾನು ಆಗ ಹೇಳಿದ್ದೆ ; ಆದರೆ ಮಾಡಲಿಲ್ಲ. ಹಳ್ಳಿಗಳ ಮಟ್ಟದಲ್ಲಿ ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡುತ್ತಿವೆಯೋ ಅಥವಾ ಇಲ್ಲವೇ ಎಂಬ ಬಗ್ಗೆ ಜನರಲ್ ಸೂಪರ್‌ವಿಷನ್ ಮಾಡುತ್ತಿಲ್ಲ. ಮಾನ್ಯ ಶಿವನಂಜಪ್ಪನವರು ತುಮಕೂರು ಜಿಲ್ಲೆಯಲ್ಲಿ ಒಂದೇ ಒಂದು ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳಿದರು. ಸಹಕಾರೀ ಕ್ಷೇತ್ರದಲ್ಲಿ ಕೆಲಸ ಏನೂ ಆಗಿಲ್ಲವೆಂದರೆ, ನಾವು ಈ ಇಲಾಖೆಯನ್ನು ಮುಂದುವರೆಸಬೇಕಾದ ಅಗತ್ಯವೇ ಇಲ್ಲ. ಇದನ್ನು ಎಲ್ಲರೂ ಒಪ್ಪಬೇಕಾಗುತ್ತದೆ. ಹಳ್ಳಿಗಳ ಮಟ್ಟದಲ್ಲಿ ಕೋಆಪರೇಟೀವ್ ಎಕ್ಸ್‌ಟೆನ್‌ಷನ್ ಆಫೀಸರ್‌ಗಳು ಏನಿದ್ದಾರೋ, ಅವರು ಏನೇನೂ ಕೆಲಸ ಮಾಡುತ್ತಿಲ್ಲವೆಂದು ಜವಾಬ್ದಾರಿಯುತವಾಗಿ ಹೇಳುತ್ತಿದ್ದೇನೆ. ನಾನು ಕೇವಲ ಈ ಸದನದಲ್ಲಿ ಭಾಷಣ ಮಾಡಬೇಕೆಂಬ ಚಪಲದಿಂದ ಈ ಮಾತನ್ನು ಹೇಳುತ್ತಿಲ್ಲ. ನಾನು ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡಿರುವ ಒಂದು ಅನುಭವದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಯಾವ ಒಂದು ಸೊಸೈಟಿಯಲ್ಲಿಯೂ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ. ರಿಜಿಸ್ಟ್ರಾರ್ ಅವರು ಯಾವುದಾದರೂ ಒಂದು ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರ ಕಛೇರಿಗೆ ಅನಿರೀಕ್ಷಿತ ಭೇಟಿ ಕೊಟ್ಟು ನೋಡಿದರೆ, ಅಲ್ಲಿ ಎಷ್ಟೊಂದು ಪೆಂಡಿಂಗ್ ಕೇಸ್‌ಗಳಿವೆ ಮತ್ತು ಸಾಮಾನ್ಯ ಜನರಿಂದ ಬಂದಿರುವ ದೂರುಗಳು ಎಷ್ಟು ಇವೆ ಎಂಬುದು ತಿಳಿದುಬರುತ್ತದೆ. ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳೊಳಗೆ ಜನರಲ್-ಬಾಡಿ ಮೀಟಿಂಗ್ ಮಾಡಬೇಕೆಂಬ ನಿಯಮವಿದೆ. ಅದರ ಪ್ರಕಾರ ನನ್ನ ಅಧ್ಯಕ್ಷತೆಯಲ್ಲಿ ಒಂದು ಸೊಸೈಟಿಯಲ್ಲಿ ಮೀಟಿಂಗ್ ಆಗಿ ಕೆಲವು ತಿದ್ದುಪಡಿಗಳನ್ನು ಮಾಡಿ, ಅದನ್ನು ಅಪ್ರೂವಲ್‌ಗೆ ಕಳುಹಿಸಿಕೊಟ್ಟು ೨-೩ ವರ್ಷಗಳಾದರೂ ಇನ್ನೂ ಅಪ್ರೂವ್ ಮಾಡಿಲ್ಲ, ಇಲ್ಲವೇ ರಿಜೆಕ್ಟ್ ಸಹ ಮಾಡಿಲ್ಲ. ಇದರ ಬಗ್ಗೆ ನಾನು ಫೋನ್ ಮಾಡಿ ಕೇಳಿದಾಗ ಹಿಂದಿನವರು ಆ ಕೆಲಸ ಮಾಡಬೇಕಾಗಿತ್ತು, ಆದರೆ ಮಾಡಿಲ್ಲವೆಂದು ಈಗಿರುವ ಅಧಿಕಾರಿಗಳು ಹೇಳಿದರು. ಅಧಿಕಾರಿಗಳು ಬರುತ್ತಾರೆ, ಹೋಗುತ್ತಾರೆ. ಆದರೆ ಕಛೇರಿ ಮಾತ್ರ ಖಾಯಂ ಆಗಿ ಇರುತ್ತದೆ. ಇಂತಹ ಸಂದರ್ಭಗಳಲ್ಲಿ ಮೇಲಿನ ಅಧಿಕಾರಿಗಳು ಕೆಳಗಿನ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಆದರೆ ಡೆಪ್ಯೂಟಿ ರಿಜಿಸ್ಟ್ರಾರ್ ಅವರಾಗಲೀ, ಜಾಯಿಂಟ್ ರಿಜಿಸ್ಟ್ರಾರ್ ಅವರಾಗಲೀ, ರಿಜಿಸ್ಟ್ರಾರ್ ಅವರಾಗಲೀ ಯಾರೂ ಸಹ ಸೂಪರ್‌ವಿಜನ್ ಸರಿಯಾಗಿ ಮಾಡುತ್ತಿಲ್ಲ. ಇಲ್ಲಿ ನಮಗೆ ಏನು ವರದಿ ಕೊಟ್ಟಿದ್ದಾರೆ, ಇದೆಲ್ಲಾ ಸುಳ್ಳು ವರದಿ ಎಂದು ನಾನು ಪ್ರತ್ಯಕ್ಷದರ್ಶಿಯಾಗಿ ಹೇಳಬೇಕಾಗಿದೆ. ಕೆಲವು ಸಂದರ್ಭಗಳಲ್ಲಿ ಇನ್ಸ್‌ಪೆಕ್ಷನ್ ಮಾಡದಿರಲು ಕಾರಣವೇನು ಎಂದು ನಾನೇ ಕೇಳಿದ್ದೇನೆ. ಅದಕ್ಕೆ ಅವರು, ಜಿಲ್ಲಾ ಬ್ಯಾಂಕ್‌ನವರು ಮತ್ತು ವಾಣಿಜ್ಯಬ್ಯಾಂಕಿನವರು ಸಾಲ ಕೊಡುತ್ತಿರುವ ಕಾರಣ, ಅಲ್ಲಿ ನಮ್ಮ ಜವಾಬ್ದಾರಿ ಏನೂ ಇರುವುದಿಲ್ಲವೆಂದು ಉತ್ತರ ಕೊಡುತ್ತಾರೆ ಆದರೆ ನನ್ನ ಒಂದು ಅನುಭವದಿಂದ ಹೇಳಬೇಕೆಂದರೆ, ಈ ಕ್ಷೇತ್ರದಲ್ಲಿ ಡ್ಯೂಯಲ್ ರೆಸ್‌ಪಾನ್ಸಿಬಿಲಿಟಿ, ಡ್ಯೂಯಲ್ ಕಂಟ್ರೋಲ್, ಡ್ಯೂಯಲ್ ಮೇನೇಜ್‌ಮೆಂಟ್ ಇದೆ. ಆದ್ದರಿಂದ ಮಾನ್ಯ ಮಂತ್ರಿಗಳು ಇಂತಹ ವಿಷಯಗಳಲ್ಲಿ ಒಳಹೊಕ್ಕು ನೋಡದೇ ಹೋದರೆ ಈ ಒಂದು ಕ್ಷೇತ್ರಕ್ಕೆ ಯಾರು ದಿಕ್ಕು ಎಂದು ಯೋಚನೆ ಮಾಡಬೇಕಾಗುತ್ತದೆ. ಈ ವಿಚಾರದಲ್ಲಿ ನಾವೆಲ್ಲರೂ ಪರಿತಪಿಸಬೇಕಾಗಿದೆ. ಆದಕಾರಣ, ಇದಕ್ಕೆಲ್ಲಾ ಅವಕಾಶ ಕೊಡದೆ ಮಾನ್ಯ ಮಂತ್ರಿಗಳು ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಹರಿಜನ ಮತ್ತು ಗಿರಿಜನರಿಗೆ ಪ್ರಾತಿನಿಧ್ಯ ಕೊಡಲು ನಾಮಿನೇಷನ್ ಪದ್ಧತಿಯನ್ನು ಮಾಡಿದ್ದೇವೆಂದು ಹೇಳುತ್ತಾರೆ. ಮತ್ತೊಂದು ಕಡೆ ಸರ್ಕಾರದ ಷೇರ್ ಕ್ಯಾಪಿಟಲ್ ಅಲ್ಲಿರುವುದರಿಂದ ಅದನ್ನು ಕಾಪಾಡುವುದಕ್ಕೋಸ್ಕರ ನಾಮಿನೇಷನ್ ಮಾಡುತ್ತೇವೆಂದು ಹೇಳುತ್ತಾರೆ. ನಾಣ್ಯಕ್ಕೆ ಎರಡು ಮುಖಗಳಿರುವಂತೆ, ಸರ್ಕಾರದವರೂ ಸಹ ಇದಕ್ಕೆ ಎರಡು ಕಾರಣಗಳನ್ನು ಕೊಡುತ್ತಾರೆ. ೧೯೭೮ರಲ್ಲಿ ಇದೇ ಇಲಾಖೆಯ ಬೇಡಿಕೆಗಳ ಮೇಲೆ ಮಾತನಾಡುತ್ತಾ, ಮಾನ್ಯ ಕುಸನೂರ್ ಅವರಿಗೆ ನಾನು ಸಲಹೆ ಮಾಡಿದ್ದೇನೆಂದರೆ, ಈ ಕ್ಷೇತ್ರದಲ್ಲಿ ಪರಿಶುದ್ಧತೆಯನ್ನು ಕಾಪಾಡಬೇಕಾದರೆ, ಇದರ ಗುಣಮಟ್ಟವನ್ನು ಜಾಸ್ತಿ ಮಾಡಬೇಕಾದರೆ, ಯಾರು ಯಾರಿಗೆ ಈ ಕ್ಷೇತ್ರದಲ್ಲಿ ಹೆಚ್ಚಿನ ಒಂದು ಅನುಭವವಿದೆ, ಹೆಚ್ಚಿನ ಒಂದು ಆಸಕ್ತಿ ಇದೆ, ಅಂತಹವರನ್ನು ಮಾತ್ರ ನೇಮಕ ಮಾಡಿ, ಆಗ ಮಾತ್ರ ಈ ಕ್ಷೇತ್ರದಲ್ಲಿ ಹೆಚ್ಚಿನ ರೀತಿಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಸಲಹೆ ಮಾಡಿದ್ದೆ. ಆದರೆ ಇದರ ಕಡೆಗೆ ಸರ್ಕಾರ ಗಮನ ಕೊಡಲಿಲ್ಲ. ರ್‍ಯಾಂಡಮ್ ಆಗಿ ಯಾವ ಒಂದು ಅರ್ಹತೆಯೂ ಇಲ್ಲದವರನ್ನು ನಾಮಿನೇಷನ್ ಮಾಡುವುದರಿಂದ ಅಲ್ಲಿನ ಗುಣಮಟ್ಟ ಜಾಸ್ತಿ ಆಗುತ್ತದೋ ಅಥವಾ ಇಲ್ಲವೋ ಎಂಬುದನ್ನು ಮಾನ್ಯ ಮಂತ್ರಿಗಳೇ ಯೋಚನೆ ಮಾಡಿ ನೋಡಬೇಕು. ಈ ವಿಚಾರವನ್ನು ವೈಯುಕ್ತಿಕ ದ್ವೇಷಕ್ಕಾಗಿ ಹೇಳುತ್ತಿಲ್ಲ, ನಮ್ಮ ಮಂಡ್ಯ ಜಿಲ್ಲೆಯಲ್ಲಿ ನಡೆದಿರುವ ಒಂದು ಅಂಕಿ ಅಂಶಗಳ ಆಧಾರದ ಮೇಲೆ ಈ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ದೇವರಾಜ ಅರಸ್ ಅವರ ಸರ್ಕಾರ ಇದ್ದಾಗಲೂ ಸಹ ಇದನ್ನು ವಿರೋಧ ಮಾಡಿದ್ದೆ, ಈಗಲೂ ಸಹ ಒಂದು ತತ್ವದ ದೃಷ್ಟಿಯಿಂದ ವಿರೋಧ ಮಾಡುತ್ತಿದ್ದೇನೆ. ಈ ಒಂದು ಪಾಪದ ಕೆಲಸವನ್ನು ಇನ್ನಾದರೂ ನಿಲ್ಲಿಸಬೇಕು. ಈಗ ಮಾನ್ಯ ಮುಖ್ಯ ಮಂತ್ರಿಗಳು ಸಭೆಯಲ್ಲಿ ಇಲ್ಲ. ನಾನು ಕಳೆದ ಮಾರ್ಚಿ ೧೩ನೇ ತಾರೀಖು ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿ ಇದೇ ವಿಚಾರವನ್ನು ಪ್ರಸ್ತಾಪ ಮಾಡಿ ಹೇಳಿದೆ. ಈ ಕ್ಷೇತ್ರದ ಸ್ವಚ್ಛತೆ, ಪರಿಶುದ್ಧತೆ ಹಾಗೂ ಗುಣಮಟ್ಟವನ್ನು ಕಾಪಾಡಲು ಶ್ರಮಿಸುವಂತಹವರನ್ನು ನಾಮಿನೇಷನ್ ಮಾಡಿ, ರಾಜಕೀಯ ಕಾರಣಕ್ಕಾಗಿ ಯಾರನ್ನೋ ನಾಮಿನೇಷನ್ ಮಾಡಬೇಡಿ ಎಂದು ಅವರಿಗೆ ಹೇಳಿದಾಗ, ಅವರು ಈ ಮಾತನ್ನು ನಾನು ವೈಯಕ್ತಿಕವಾಗಿ ಸಂಪೂರ್ಣವಾಗಿ ಒಪ್ಪುತ್ತೇನೆ, ಆದರೆ ಏನು ಮಾಡುವುದು, ಇದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ ಎಂದು ಹೇಳಿದರು.

ಶ್ರೀ ಸಿ. ಎ. ಚಂದ್ರೇಗೌಡ.—ಅಲ್ಲಿನ ಗುಣಮಟ್ಟವನ್ನು ಹೆಚ್ಚು ಮಾಡಲು ತರಬೇತಿ ಹೊಂದಿರುವವರನ್ನೇ ನೇಮಕ ಮಾಡಲಾಗುತ್ತಿದೆ.

ಶ್ರೀ ಎಚ್. ಡಿ. ಚೌಡಯ್ಯ.—ಈ ಮಾತನ್ನು ಅವರು ಆತ್ಮಪೂರ್ವಕವಾಗಿ ಹೇಳುತ್ತಾರೆಯೋ ? ಇನ್ನು ರೆಗ್ಯುಲೇಟೆಡ್ ಮಾರ್ಕೆಟ್ ಬಗ್ಗೆ ಹೇಳುವುದಾದರೆ, ನಮ್ಮ ಮಂಡ್ಯ ಜಿಲ್ಲಾ ಕೇಂದ್ರವಾಗಿದ್ದು ಅಲ್ಲಿ ಕಳೆದ ೨೦ ೨೫ ವರ್ಷಗಳಿಂದಲೂ ಈ ರೆಗ್ಯುಲೇಟೆಡ್ ಕಮಿಟಿ ಕೆಲಸ ಮಾಡಿಕೊಂಡು ಬರುತ್ತಿದೆ. ಆದರೆ ಅಲ್ಲಿ ಸರಿಯಾದಂಥ ಒಂದು ಮಾರ್ಕೆಟ್ ಯಾರ್ಡ್ ಇಲ್ಲ. ಇದರಿಂದ ಅಲ್ಲಿ ಕೆಲಸಕ್ಕೆ ತೊಂದರೆಯಾಗಿದೆ. ಮಾನ್ಯ ಮಂತ್ರಿಗಳು ಅಲ್ಲಿಗೆ ಸ್ಥಳ ಪರಿಶೀಲನೆ ಮಾಡಲು ಬಂದಾಗ ಯಾರು ಹೈಕೋರ್ಟಿಗೆ ಹೋಗಿದ್ದಾರೆ, ಅವರಿಗೆ ಸೇರಿದ ಜಾಗವನ್ನು ಬಿಟ್ಟು, ಉಳಿದ ಜಾಗದಲ್ಲಿ ಕೆಲಸ ಪ್ರಾರಂಭ ಮಾಡಿ ಎಂದು ಅಲ್ಲಿನ ಅಧಿಕಾರಿಗಳಿಗೆ ಆದೇಶ ಕೊಟ್ಟರು ಆದರೆ ಇದುವರೆಗೆ ಯಾವ ಕೆಲಸವೂ ಪ್ರಾರಂಭ ಆಗಿಲ್ಲ. ಆ ಕೆಲಸವನ್ನು ಜಾಗ್ರತೆಯಾಗಿ ಮಾಡಿಸಬೇಕೆಂದು ಹೇಳುತ್ತೇನೆ. ಅದೇ ರೀತಿಯಲ್ಲಿ ಮಾರ್ಕೆಟ್ ಸೆಸ್ ವಸೂಲಿ ಮಾಡತಕ್ಕಂಥ ಕಮಿಟಿಯಲ್ಲಿ ಕಳೆದ ಒಂದೂವರೆ ವರ್ಷಗಳಿಂದ ಖಾಸಗಿಯವರು ಇಲ್ಲ. ಎಲ್ಲಾ ಅಧಿಕಾರಿಗಳೇ ಇದ್ದಾರೆ. ಅಲ್ಲಿ ಏನಾಗುತ್ತಿದೆ ಎಂದರೆ ನಮ್ಮ ಮಂಡ್ಯ ತಾಲ್ಲೂಕಿನಲ್ಲಿ ಕಬ್ಬಿನ ಗಾಣಗಳೇ ಜಾಸ್ತಿ. ಅಲ್ಲಿ ತಯಾರಾದ ಬೆಲ್ಲ ಸಕ್ಕರೆ ಮಂಗಳೂರು, ಅರಸೀಕೆರೆ, ತಿಪಟೂರು, ಮಧ್ಯಪ್ರದೇಶ, ರಾಜಾಸ್ಥಾನ ಈ ಕಡೆಗಳಿಗೆ ಹೋಗುತ್ತದೆ. ಅಲ್ಲಿ ಒಂದು ಲಾರಿ ಇದೆ. ಆದರಲ್ಲಿ ೫-೬ ಜನ ಸಿಬ್ಬಂದಿಯವರು ಕುಳಿತುಕೊಂಡು ಬಿಸಿನೆಸ್ ಪಾಯಿಂಟ್‌ಗಳಿಗೆ ಹೋದಾಗ ಅಲ್ಲಿ ಒಬ್ಬೊಬ್ಬರನ್ನೇ ಇಳಿಸುತ್ತಾರೆ. ಲಾರಿಯವರ ಹತ್ತಿರ ಅಧಿಕಾರಿಗಳು ೧೦೦-೧೫೦ ರೂಪಾಯಿಗಳನ್ನು ವಸೂಲು ಮಾಡುತ್ತಾರೆ, ಅದಕ್ಕೆ ರಸೀತಿಯನ್ನು ಕೊಡುವ ಹಾಗೆ ಇಲ್ಲ. ಈ ರೀತಿಯ ವಸೂಲಿ ಕೆಲಸ ನಡೆಯುತ್ತಿದೆ. ಇದು ಭ್ರಷ್ಟಾಚಾರದ ತವರು ಮನೆಯಾಗಿದೆ ಇದನ್ನು ಕೂಡಲೇ ಸರ್ಕಾರದವರು ಸರಿಪಡಿಸತಕ್ಕಂಥಾದ್ದು ಅಗತ್ಯ ಎಂದು ಹೇಳ ಬಯಸುತ್ತೇನೆ ಈ ಒಂದು ವರದಿಯನ್ನು ನಿಮ್ಮ ಇಲಾಖೆಯ ಅಧಿಕಾರಿಗಳು ಏನು ಕೊಟ್ಟಿದ್ದಾರೆ ಅವರಿಗೆ ಈ ಬಗ್ಗೆ ಆದೇಶ ಕೊಡಿ; ಇನ್ನು ಮುಂದೆ ಇಂತಹ ಅಪೂರ್ಣವಾದ, ಅಸಮರ್ಪಕವಾದ ಹಾಗೂ ತಪ್ಪು ತಪ್ಪು ಅಚ್ಚು ಹಾಕಿಸಿರತಕ್ಕಂಥಾ ವರದಿಯನ್ನು ಈ ಸದನಕ್ಕೆ ಕೊಡಬೇಡಿ ಎಂದು, ಏಕೆಂದರೆ

ಕರ್ನಾಟಕ ಶಾಸನಸಭೆಯ ಸದಸ್ಯರು ಯಾವುದನ್ನೂ ಪೂರ್ಣವಾಗಿ ಓದುವುದಿಲ್ಲ, ಅವರಿಗೆ ಏನೂ ಅರ್ಥವಾಗುವುದಿಲ್ಲ, ಏನೋ ಇಲ್ಲಿಗೆ ಬರುತ್ತಾರೆ ಹೋಗುತ್ತಾರೆ ಎಂದು ಅವರು ತಿಳಿದುಕೊಂಡಿದ್ದರೆ ಅದು ತಪ್ಪಾಗುತ್ತದೆ. ಆದ್ದರಿಂದ ಅವರಿಗೆ ಈ ವಿಚಾರವನ್ನು ತಿಳಿಸಬೇಕೆಂದು ಹೇಳಿ ಇಷ್ಟು ವಿಷಯಗಳನ್ನು ಹೇಳುವುದಕ್ಕೆ ಅವಕಾಶಕೊಟ್ಟಂಥ ಮಾನ್ಯ ಅಧ್ಯಕ್ಷರವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬದಾಮಿ).—ಸನ್ಮಾನ್ಯ ಅಧ್ಯಕ್ಷರೇ, ಈ ಸಹಕಾರ ಮತ್ತು ರೆಗ್ಯುಲೇಟೆಡ್ ಮಾರ್ಕೆಟ್ ಇಲಾಖೆಯ ಬೇಡಿಕೆಗಳನ್ನು ನಾನು ಬೆಂಬಲಿಸುತ್ತಾ ಕೆಲವು ಮಾತುಗಳನ್ನಾಡುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಅನೇಕ ಮಾನ್ಯ ಸದಸ್ಯರು ಈ ಸಹಕಾರ ರಂಗದ ಮೇಲೆ ಬೆಳಕನ್ನು ಚೆಲ್ಲಿದ್ದಾರೆ. ಆದ್ದರಿಂದ ನಾನು ಈ ಸಹಕಾರ ರಂಗದ ಬಗ್ಗೆ ಹೆಚ್ಚಾಗಿ ಪ್ರಸ್ತಾಪ ಮಾಡತಕ್ಕಂಥ ಅವಶ್ಯಕತೆ ಇಲ್ಲ. ನಾನು ಈ ಸಹಕಾರ ರಂಗದ ಮೇಲೆ ಪ್ರಸ್ತಾಪ ಮಾಡತಕ್ಕಂಥ ಸಮಯದಲ್ಲಿ, ನನ್ನ ಕ್ಷೇತ್ರದಲ್ಲಿ ಅನೇಕ ಬಾವಿಗಳು ಫೆಯಿಲ್ಯುರ್ ಆಗಿರುವುದರ ಬಗ್ಗೆ ಮತ್ತು ದ್ರಾಕ್ಷಿ ತೋಟಗಳು ಹಾಳಾಗಿರುವುದರ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡಿದರೂ ಕೂಡ ಅದು ಸರ್ಕಾರದವರ ಗಮನಕ್ಕೆ ಬಂದಿಲ್ಲ. ಆ ಬಗ್ಗೆ ಏನಾದರೂ ಪರಿಹಾರ ಕೊಡುವ ಬಗ್ಗೆ ಕೂಡ ಏನೂ ಪ್ರಯತ್ನ ಮಾಡಲಿಲ್ಲ, ಈ ದೃಷ್ಟಿಯಿಂದ ನಾನು ಸಹಕಾರ ಇಲಾಖೆಯ ಮೇಲೆ ಹೆಚ್ಚಾಗಿ ಮಾತನಾಡುವುದಕ್ಕೆ ಇಚ್ಛೆಪಡುವುದಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ನಾನು ಈ ರೆಗ್ಯುಲೇಟೆಡ್ ಮಾರ್ಕೆಟ್ ಮೇಲೆ ಮಾತನಾಡತಕ್ಕಂಥ ಹವ್ಯಾಸವನ್ನು ಇಟ್ಟುಕೊಂಡಿದ್ದೇನೆ. ಆದ್ದರಿಂದ, ನಾನು ಅದರ ಮೇಲೆ ಈಗ ಮಾತನಾಡುವುದಕ್ಕೆ ಬಯಸುತ್ತೇನೆ. ಇವತ್ತಿನ ದಿವಸ. ಈ ರೆಗ್ಯುಲೇಟೆಡ್ ಮಾರ್ಕೆಟ್‌ಗಳು ರೈತನ ಹಿತರಕ್ಷಣೆಗಾಗಿ ಇವೆ. ರೈತರ ಹಿತರಕ್ಷಣೆಗಾಗಿ ಮತ್ತು ಅವರಿಗಾಗಿ ಮೀಸಲಾಗಿರತಕ್ಕಂಥ ಈ ರೆಗ್ಯುಲೇಟೆಡ್ ಮಾರ್ಕೆಟ್ ಇಲಾಖೆ ಇವತ್ತಿನ ದಿವಸ ರೈತರ ಹಿತರಕ್ಷಣೆಯನ್ನು ಮಾಡುವುದಕ್ಕೆ ಮುಂದಾಗದೇ ರೈತರನ್ನು ಶೋಷಣೆ ಮಾಡತಕ್ಕಂಥ ಮಧ್ಯವರ್ತಿ ಜನಗಳನ್ನು ರಕ್ಷಣೆ ಮಾಡತಕ್ಕಂಥ ಹವ್ಯಾಸದಲ್ಲಿ ತೊಡಗಿದೆಯೋ ಏನೋ ಎನ್ನತಕ್ಕಂಥ ಸಂಶಯ ನಮಗೆ ಸ್ಪಷ್ಟವಾಗಿ ಕಂಡುಬರುತ್ತಿದೆ. ಏಕೆಂದರೆ ಇವತ್ತಿನ ದಿವಸ ಈ ಇಲಾಖೆಯ ಕಾರ್ಯಕ್ರಮಗಳನ್ನು ನೋಡಿದಾಗ ರೈತನ ರಕ್ಷಣೆಯ ಬಗ್ಗೆ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರೂ ಕೂಡ ಇಲ್ಲಿಯವರೆಗೆ ರೈತನ ರಕ್ಷಣೆಯನ್ನು ಮಾಡತಕ್ಕಂಥ ಪ್ರಯತ್ನ ಮಾಡಿಲ್ಲ ಅಥವಾ ಆ ಕಾರ್ಯಕ್ರಮಗಳ ಗುರಿಯನ್ನು ಮುಟ್ಟುವುದಕ್ಕೆ ಹೋಗಿಲ್ಲ ಎಂದು ಹೇಳಬಹುದು. ಇದಕ್ಕೆ ನಾನಾ ರೀತಿಯ ಕಾರಣಗಳು ಇರಬಹುದು. ರೈತನ ರಕ್ಷಣೆಯನ್ನು ಮಾಡುವುದಕ್ಕೆ ಮೀಸಲಾಗಿರತಕ್ಕಂಥ ಈ ಇಲಾಖೆಯನ್ನು ವಹಿಸಿಕೊಂಡಿರತಕ್ಕಂಥ ಮಾನ್ಯ ಮಂತ್ರಿಯವರು ದೊಡ್ಡ ಮನಸ್ಸು ಮಾಡಿ ರೈತರ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಿ ಅವರ ಕಲ್ಯಾಣ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ. ರೈತ ಈ ದೇಶದ ಬೆನ್ನೆಲುಬಾಗಿದ್ದಾನೆ. ಅವನು ಕಷ್ಟಪಟ್ಟು ಈ ದೇಶಕ್ಕೆ ಬೇಕಾಗುವಷ್ಟು ಬೆಳೆಯನ್ನು ಬೆಳೆಯದೇ ಹೋದರೆ ಈ ದೇಶ ದುಃಖಕ್ಕೆ ಈಡಾಗತಕ್ಕಂಥ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಅವನ ಕಲ್ಯಾಣದ ಬಗ್ಗೆ ನಾವು ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು. ಅವನು ಬೆಳೆದಂಥ ಮಾಲಿಗೆ ಯೋಗ್ಯ ಬೆಲೆ ಸಿಕ್ಕುವಂತೆ ಮಾಡಬೇಕು. ಅವನಿಗೆ ಯೋಗ್ಯ ಬೆಲೆ ಸಿಕ್ಕುವಂತೆ ಮಾಡಬೇಕಾದರೆ ಆ ದಿಶೆಯಲ್ಲಿ ಸರ್ಕಾರ ಪ್ರಯತ್ನ ಮಾಡಬೇಕು. ಅಲ್ಲದೇ ಅವನ ಕುಂದುಕೊರತೆಗಳನ್ನು ಅರಿತುಕೊಂಡು ಅವನಿಗೆ ಎಲ್ಲಾ ಬಗೆಯ ಸಹಕಾರ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಮಾನ್ಯ ಮಂತ್ರಿಯವರಲ್ಲಿ ಭಿನ್ನವಿಸಿಕೊಳ್ಳುತ್ತೇನೆ. ರೈತರಿಗೆ ಇರತಕ್ಕಂಥ ಕುಂದುಕೊರತೆಗಳನ್ನು ಇಲ್ಲಿ ಪ್ರಸ್ತಾಪ ಮಾಡತಕ್ಕಂಥ ಸಂದರ್ಭದಲ್ಲಿ ಮೊಟ್ಟಮೊದಲನೆಯದಾಗಿ, ರೈತರು ಬೀಜವನ್ನು ಕೊಂಡುಕೊಳ್ಳುವುದರಲ್ಲಿ ಅನೇಕ ಕಷ್ಟಗಳನ್ನು ಎದುರಿಸುತ್ತಿದ್ದಾರೆ. ಹೊಲಕ್ಕೆ ಬೀಜವನ್ನು ಬಿತ್ತಿ ಬೆಳೆಯನ್ನು ತೆಗೆದುಕೊಂಡು ಮಾರ್ಕೆಟ್ಟಿಗೆ ಹೋಗಿ ಅವನ್ನು ಅಲ್ಲಿ ಮಾರಿ ಸುರಕ್ಷಿತವಾಗಿ ಸ್ವಗ್ರಾಮಕ್ಕೆ ಬರಬೇಕಾದರೆ ಎಷ್ಟೋ ಕಷ್ಟಗಳನ್ನು ಎದುರಿಸುತ್ತಾರೆ. ರೈತರು ಕಷ್ಟಪಟ್ಟು ಬೆಳೆದಂಥ ಬೆಳೆಯನ್ನು ಮಾರ್ಕೆಟ್ಟಿಗೆ ತೆಗೆದುಕೊಂಡು ಹೋದರೂ ಕೂಡ ಅವರ ಮಾಲಿಗೆ ಒಂದು ಯೋಗ್ಯ ಬೆಲೆ ಸಿಕ್ಕುವುದಿಲ್ಲ. ಅಲ್ಲಿರತಕ್ಕಂಥ ಮಧ್ಯವರ್ತಿ ಜನಗಳಿಂದ ಅವರಿಗೆ ಅನ್ಯಾಯವಾಗತಕ್ಕಂಥ ಸಂದರ್ಭಗಳೇ ಜಾಸ್ತಿ ಇರುತ್ತವೆ. ಇಂತಹ ಸಂದರ್ಭದಲ್ಲಿ ಸರ್ಕಾರದವರು ಅವರ ರಕ್ಷಣೆಗೋಸ್ಕರ ಮುಂದೆ ಬರಬೇಕು. ಈ ವಿಚಾರದಲ್ಲಿ ನಾನು ಸರ್ಕಾರದವರಿಗೆ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಸರ್ಕಾರದವರು ಕರ್ನಾಟಕ ರಾಜ್ಯದ ಪ್ರತಿಯೊಂದು ಹಳ್ಳಿಯಲ್ಲಿಯೂ ಗೋಡೋನ್‌ಗಳನ್ನು ಕಟ್ಟುವುದಕ್ಕೆ ಸಾಧ್ಯವಾಗದೇ ಹೋದರೂ ಕೂಡ ಎಲ್ಲೆಲ್ಲಿ ಸಾಧ್ಯವಾಗುತ್ತದೆಯೋ ಅಂಥ ಕಡೆಗಳಲ್ಲಿ ಸಾಕಷ್ಟು ಗೋಡೋನ್ ವ್ಯವಸ್ಥೆಯನ್ನು ಮಾಡಿಕೊಡಬೇಕು. ಈ ಗೋಡೋನ್ ವ್ಯವಸ್ಥೆ ಮಾಡುವುದರಿಂದ ರೈತರು ಬೆಳೆದಂಥ ಮಾಲನ್ನು ಅಲ್ಲಿ

ಸಂಗ್ರಹಣೆ ಮಾಡಲು ಸಾಧ್ಯವಾಗುತ್ತದೆ ಮತ್ತು ಅವರಿಗೆ ಅವರ ಮಾಲಿನ ಮೇಲೆ ಯೋಗ್ಯ ಬೆಲೆ ಸಿಕ್ಕುವುದಕ್ಕೆ ಪ್ರಯತ್ನಪಟ್ಟಂತಾಗುತ್ತದೆ. ಇನ್ನು ಎರಡನೆಯದಾಗಿ ಗೋಡೋನ್‌ಗಳಲ್ಲಿ ಮಾಲು ಹೆಚ್ಚಾದ ನಂತರವೂ ಕೂಡ ಅವನು ಬೆಳೆಯತಕ್ಕಂಥ ಬೆಳೆಯ ಮೇಲೆ ಅವರಿಗೆ ಕಷ್ಟಕಾಲದಲ್ಲಿ ನೆರವಾಗುವಂಥ ರೀತಿಯಲ್ಲಿ ಅಡ್ವಾನ್ಸ್ ಹಣವನ್ನು ಕೊಡುವಂಥ ಯೋಜನೆಯನ್ನು ಮಾಡಬೇಕು. ಈ ಯೋಜನೆಯಲ್ಲಿ ರೈತರಿಂದ, ರೈತರಿಗಾಗಿ ಮತ್ತು ರೈತರಿಗೋಸ್ಕರ ಎನ್ನತಕ್ಕಂಥ ತತ್ವವನ್ನು ಅಳವಡಿಸಿಕೊಂಡು ಅವರಿಗೆ ಅನುಕೂಲ ಮಾಡಿಕೊಡಬೇಕು. ಪ್ರತಿದಿವಸ ನಾವು ನೋಡುತ್ತಿರುತ್ತೇವೆ, ರೈತರು ತಮ್ಮ ಮಾಲನ್ನು ತೆಗೆದುಕೊಂಡು ಹೋದರೆ ಅಲ್ಲಿ ಮಾಡತಕ್ಕಂಥಾದ್ದರಲ್ಲಿ ಅವರಿಗೆ ಕೆಲವರು ಮೋಸ ಮಾಡುತ್ತಾರೆ, ಮಾಲನ್ನು ಸುರಕ್ಷಿತ ಸ್ಥಳದಲ್ಲಿ ಇಡುವುದಕ್ಕೆ ವಸತಿ ಸೌಕರ್ಯ ಇಲ್ಲದೇ ಇರುವುದರಿಂದ ಮಾಲನ್ನು ಕಳ್ಳರು ಕದೀಮರು ಕದಿಯುತ್ತಾರೆ, ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕ ರೈತರು ನೋವು ಪಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ, ಸರ್ಕಾರದವರು ಅವರನ್ನು ರಕ್ಷಣೆ ಮಾಡದೇ ಹೋದರೆ ಇವತ್ತಿನ ದಿವಸ ಇರತಕ್ಕಂಥ ಮೂಲತಃ ಉದ್ದೇಶದಿಂದ ದೂರ ಸರಿದಂತಾಗುತ್ತದೆ. ಆದ್ದರಿಂದ ನಾವು ರೈತರ ರಕ್ಷಣಾ ವಿಷಯದಲ್ಲಿ ಮಾತನಾಡುವಾಗ ಒಂದೊಂದು ಕ್ಷೇತ್ರದಲ್ಲೂ ಸಬ್‌ಯಾರ್ಡ್‌ಗಳನ್ನು ಮಾಡಿ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಇನ್ನು ಕೆರೂರ್‌ನಲ್ಲಿ ವಾರದಲ್ಲಿ ಒಂದು ದಿವಸ ಅಂದರೆ ಮಂಗಳವಾರದ ದಿವಸ ದನಗಳ ವ್ಯಾಪಾರ ನಡೆಯುತ್ತದೆ. ರೈತರು ಯಾವುದೋ ಒಂದು ಜಾಗದಲ್ಲಿ ದನಗಳನ್ನು ನಿಲ್ಲಿಸಿಕೊಂಡು ವ್ಯಾಪಾರ ಮಾಡಿ ಹೋಗುತ್ತಿದ್ದಾರೆ. ಅಲ್ಲಿ ದನಗಳನ್ನು ನಿಲ್ಲಿಸುವುದಕ್ಕೆ ಸರಿಯಾದ ವ್ಯವಸ್ಥೆಯಿಲ್ಲ ಹಾಗೂ ದನಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯೂ ಇಲ್ಲ. ಇದರಿಂದ ಸರ್ಕಾರದವರಿಗೆ ೪-೫ ಸಾವಿರ ಉತ್ಪನ್ನ ಬರುತ್ತಾ ಇದೆ. ಈ ರೀತಿಯಲ್ಲಿ ರೈತರಿಂದ ೪-೫ ಸಾವಿರ ರೂಪಾಯಿಗಳ ಉತ್ಪನ್ನ ಬರುವುದಲ್ಲದೇ ಸೆಸ್ ಮೂಲಕ ೨ ಲಕ್ಷ ರೂಪಾಯಿಗಳು ಬರುತ್ತದೆ. ಈ ಹಣವನ್ನೆಲ್ಲಾ ರೈತರ ಸಲುವಾಗಿ ಖರ್ಚು ಮಾಡತಕ್ಕಂಥ ಉದ್ದೇಶ ಇದ್ದರೂ ಕೂಡ ಹಳ್ಳಿಗಳಲ್ಲಿ ರಸ್ತೆಗಳ ನಿರ್ಮಾಣಕ್ಕಾಗಲೀ, ರೈತರ ಸಮಸ್ಯೆಗಳನ್ನು ಬಿಡಿಸುವುದಕ್ಕೆ ಆಗಲೀ ಆ ಹಣವನ್ನು ಖರ್ಚು ಮಾಡುತ್ತಾ ಇಲ್ಲ; ಆ ಹಣವನ್ನೆಲ್ಲಾ ಅಮೂಲಾಗ್ರವಾಗಿ ಅವರ ಹಿತದ ಸಲುವಾಗಿ ಖರ್ಚು ಮಾಡುವುದಕ್ಕಾಗಿ ಕಾಯಿದೆಯಲ್ಲಿ ತಿದ್ದುಪಡಿಯನ್ನಾದರೂ ತಂದು ಆ ಕೆಲಸವನ್ನು ಮಾಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಸರ್ಕಾರದವರನ್ನು ಕೇಳುವುದಕ್ಕೆ ಇಚ್ಛಿಪಡುತ್ತಿದ್ದೇನೆ. ಇನ್ನು ಮುಖ್ಯವಾಗಿ ಮಾರ್ಕೆಟ್‌ನಲ್ಲಿ ರೈತರು ಕಾಯಿಪಲ್ಯಗಳನ್ನು ಮಾರುತ್ತಾರೆ ಅದನ್ನು ಮಾರ್ಕೆಟ್‌ಗೆ ತೆಗೆದುಕೊಂಡು ಹೋದಂಥ ರೈತರು, ಒಂದು ದಿವಸ ಅವರಿಗೆ ಅದಕ್ಕೆ ಯೋಗ್ಯ ಬೆಲೆ ಸಿಕ್ಕದೇ ಹೋದರೆ ಮಾರನೆಯ ದಿವಸ ಅವನ್ನು ಮಾರತಕ್ಕಂಥ ಲಭ್ಯ ಇರುವುದಿಲ್ಲ ಏಕೆಂದರೆ, ಅದು ಕೆಟ್ಟು ಹೋಗುತ್ತದೆ. ಕೋಲ್ಡ್ ಸ್ಟೋರೇಜ್ ವ್ಯವಸ್ಥೆ ಇಲ್ಲ; ಅವನು ಪದಾರ್ಥಗಳನ್ನು ಇಡತಕ್ಕ ವ್ಯವಸ್ಥೆ ಇಲ್ಲ. ಅವನು ರಕ್ಷಣೆ ಮಾಡತಕ್ಕ ವ್ಯವಸ್ಥೆ ಇಲ್ಲದೇ ಹೋದರೆ, ಬೆಳೆಗಾರರಿಗೆ ಪ್ರೋತ್ಸಾಹ ಕೊಡದೇ ಹೋದರೆ, ಕಾಯಿಪಲ್ಯೆ ಇನ್ನಿತರ ಮಾಲಿಗೆ ಮಾರ್ಕೆಟ್ ದೊರಕಿಸಿಕೊಡದೆ ಹೋದರೆ ರೈತರಿಗೆ ಕಷ್ಟವಾಗುತ್ತದೆ. ಈ ರೀತಿ ಅನ್ಯಾಯ ಆಗುವುದರ ಬಗ್ಗೆ ಸರ್ಕಾರದವರು ಯೋಗ್ಯ ರೀತಿಯಿಂದ ವಿಚಾರ ಮಾಡಬೇಕಾಗಿದೆ ಎಂದು ಕಳಕಳಿಯಿಂದ ಭಿನ್ನವಿಸಿಕೊಳ್ಳುತ್ತೇನೆ. ತಮಿಳುನಾಡು ಮಾರ್ಕೆಟ್‌ನಲ್ಲಿ ನಾನು ತಿಳಿದುಕೊಂಡ ರೀತಿಯಲ್ಲಿ ಒಂದು ಸಾಹಸವನ್ನು ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಇಲಾಖಾ ಸಿಬ್ಬಂದಿ ಇದ್ದರೂ ಕೂಡ ನಮಗಿಂತಲೂ ಒಂದು ಹೆಜ್ಜೆಯನ್ನು ಅವರು ಮುಂದೆ ಇಟ್ಟಿದ್ದಾರೆ. ತಮಿಳುನಾಡಿನಲ್ಲಿ ರೈತರು ತೆಗೆದುಕೊಂಡು ಹೋದಂಥ ಮಾಲುಗಳಿಗೆ ಗ್ರೇಡಿಂಗ್ ಸಿಸ್ಟಂ ಇದೆ. ಅಲ್ಲಿ ಟೆಕ್ನಿಕಲಿ, ಸೈಂಟಿಫಿಕಲಿ ಟ್ರೈನಿಂಗ್ ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಈ ಒಂದು ತರಬೇತಿ ಕೊಟ್ಟಿಲ್ಲ ಎಂದು ಒಪ್ಪಿಕೊಳ್ಳಬೇಕಾಗಿದೆ. ಈ ಒಂದು ತರಬೇತಿ ಇಲ್ಲದೇ ಹೋದರೆ ಯೋಗ್ಯ ರೀತಿಯಿಂದ ಕೆಲಸ ನಿರ್ವಹಿಸಲು ಅಸಮರ್ಥರಾಗುತ್ತಾರೆ. ಅಂಥಾ ಒಂದು ಪದ್ಧತಿಗೆ ತಮಿಳುನಾಡಿನಲ್ಲಿ ಆದ್ಯತೆಯನ್ನು ಕೊಟ್ಟಿದ್ದಾರೆ. Correct weight, competitive price, minimum payment, development of infrastructure in the market, drinking water, Sanitary facilities, shelter to animals etc., ಇವೆಲ್ಲ ಸೌಕರ್ಯಗಳನ್ನು ಒದಗಿಸುವುದಕ್ಕೆ ತಮಿಳುನಾಡು ಸರ್ಕಾರ ಯಾವರೀತಿ ಪ್ರಯತ್ನ ಪಟ್ಟಿದೆ, ಆ ದಿಶೆಯಲ್ಲಿ ಮಾನ್ಯ ಮಂತ್ರಿಗಳು ಹೆಚ್ಚು ಆಸಕ್ತಿ ವಹಿಸಿ, ನಮ್ಮ ಕರ್ನಾಟಕದಲ್ಲಿರತಕ್ಕ ರೈತರ ಕಷ್ಟಗಳನ್ನು ನಿವಾರಣೆ ಮಾಡಲಿಕ್ಕೆ ದೇವರು ಅವರಿಗೆ ಹೆಚ್ಚಿನ ಶಕ್ತಿಯನ್ನು ಕೊಡಲಿ ಎಂದು ಕಳಕಳಿಯಿಂದ ಭಿನ್ನವಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

(Chairman Sri M.C. Basappa took the Chair)

† ಶ್ರೀ ಎ.ಜಿ. ಕೊಡ್ಗಿ (ಬೈಂದೂರ್).—ಮಾನ್ಯ ಅಧ್ಯಕ್ಷರೆ, ಈ ಸಹಕಾರಿ ರಂಗ ಬಹಳ ವ್ಯಾಪಕವಾಗಿ ಎಲ್ಲಾ ರಂಗಗಳಲ್ಲೂ ಕೂಡ ಪಸರಿಸಿದೆ. ಮತ್ತೆ ಇನ್ನೂ ಹೆಚ್ಚು ಪಸರಿಸಬೇಕಾಗಿದೆ ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಇವತ್ತು ಉತ್ಪಾದನೆಯಲ್ಲಿ ವಿತರಣೆಯಲ್ಲಿ, ಕೃಷಿಯಲ್ಲಿ, ಕೈಗಾರಿಕೆಯಲ್ಲಿ ಯಾವ ರಂಗದಲ್ಲಾದರೂ ಕೂಡ ಸಹಕಾರ ಕ್ಷೇತ್ರ ಬಹಳ ಮಹತ್ವಪೂರ್ಣ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ. ರೈತರ ಅಭಿವೃದ್ಧಿಯಾಗಬೇಕಾದರೆ, ಹಿಂದುಳಿದ ವರ್ಗದವರ ಅಭಿವೃದ್ಧಿಯಾಗಬೇಕಾದರೆ, ಸಣ್ಣಪುಟ್ಟ ಕೈಗಾರಿಕೆಗಳ ಅಭಿವೃದ್ಧಿಯಾಗಬೇಕಾದರೆ ಈ ದೇಶನಲ್ಲಿ ನಾವು ಸಹಕಾರ ರಂಗದ ಮೊರೆ ಹೋಗಬೇಕಾಗಿದೆ. ಸಹಕಾರ ರಂಗ ಅಂಥ ಮಹತ್ವಪೂರ್ಣ ಪಾತ್ರವನ್ನು ನಿರ್ವಹಿಸುತ್ತಾ ಇದೆ. ಇದನ್ನು ರಾಷ್ಟ್ರಕ್ಕೆ ಹೋಲಿಸಿ ನೋಡಿದಾಗ ಬಹುಶಃ ನಮ್ಮ ಕರ್ನಾಟಕ ಪ್ರಮುಖ ಪಾತ್ರವನ್ನು ನಿರ್ವಹಿಸಿಕೊಂಡು ಬಂದಿದೆ ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ನಮ್ಮ ಕರ್ನಾಟಕದಲ್ಲಿ ಸಹಕಾರಿ ರಂಗ ಅತ್ಯುತ್ತಮ ಕಾರ್ಯವನ್ನು ನಿರ್ವಹಿಸಿಕೊಂಡು ಬಂದಿದೆ. ಮಾನ್ಯ ನಾಣಯ್ಯನವರು ಇದರ ಬಗ್ಗೆ ಸವಿಸ್ತಾರವಾಗಿ ಹೇಳಿದ್ದಾರೆ. ಆ ವಿಚಾರವನ್ನು ನಾನು ಹೆಚ್ಚು ವಿಮರ್ಶೆ ಮಾಡಲಿಕ್ಕೆ ಹೋಗುವುದಿಲ್ಲ. ಆದರೆ ನಮ್ಮ ದೌರ್ಭಾಗ್ಯ ಏನೆಂದರೆ, ಹೆಚ್ಚು ಹೆಚ್ಚು ವ್ಯಾಪಕವಾಗಿ ರೈತನ ಅಭಿವೃದ್ಧಿಯ ಸಲುವಾಗಿ ಕೆಲಸ ಮಾಡಿದಂಥ ಸಹಕಾರಿ ರಂಗ ವರ್ಷೇ ವರ್ಷೇ ಹೋದಂತೆ ಇಳಿಮುಖವಾಗುವುದನ್ನು ಕಂಡಿದ್ದೇವೆ. ನಮ್ಮ ಸ್ನೇಹಿತರು ಮಾತನಾಡುವಾಗ ಸರ್ಕಾರದವರು ತಪ್ಪು ವರದಿ ಒಪ್ಪಿಸಿದ್ದನ್ನು ಎಲ್ಲರ ಗಮನಕ್ಕೆ ತಂದಿದ್ದಾರೆ. ಇದರಲ್ಲಿ ಸ್ಪಷ್ಟವಾದಂಥ ಚಿತ್ರ ಗೊತ್ತಾಗುತ್ತದೆ. ೧೯೭೭-೭೮, ೧೯೭೮-೭೯ ಮತ್ತು ೧೯೭೯-೮೦ ಈ ಅವಧಿಯಲ್ಲಿ ಸಾಕಷ್ಟು ಪ್ರಗತಿ ಆಗಬೇಕಾಗಿತ್ತು. ತಾವು ರೈತನಿಗೆ ಕೊಡುವ ಸಾಲವನ್ನಲ್ಲಿ ಅಭಿವೃದ್ಧಿಯಾಗುವುದಕ್ಕೆ ಬದಲಾಗಿ ಇಳಿಮುಖವಾಗುವುದನ್ನು ನಾವು ಇಲ್ಲಿ ಕಾಣಬಹುದಾಗಿದೆ. ಈ ವರ್ಷ ಇನ್ನಷ್ಟು ಇಳಿಮುಖವಾಗಿದೆ ಎನ್ನುವುದನ್ನು ಮಾನ್ಯ ಸಹಕಾರ ಸಚಿವರು ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಹಾಗಾದರೆ, ಇಷ್ಟು ಮಹತ್ವಪೂರ್ಣ ಪಾತ್ರವನ್ನು ನಿರ್ವಹಿಸಬೇಕಾದ ಸಹಕಾರಿ ಸಂಸ್ಥೆಗಳು, ರೈತನ ಆರ್ಥಿಕ ವ್ಯವಸ್ಥೆಯನ್ನು ಸುಧಾರಿಸಬೇಕಾದಂಥ ಸಹಕಾರಿ ಸಂಸ್ಥೆಗಳು ಇಳಿಮುಖವಾಗಲಿಕ್ಕೆ ಏನು ಕಾರಣ? ರೈತನಿಗೆ ಹೆಚ್ಚು ಸಾಲವನ್ನು ನಾವು ಒದಗಿಸಿ ಅವನ ಉತ್ಪಾದನೆಯನ್ನು ದ್ವಿಗುಣಗೊಳಿಸಲಿಕ್ಕೆ ಇರತಕ್ಕ ಆರ್ಥಿಕ ಅಡಚಣೆಯನ್ನು ನೀಗಿಸಬೇಕಾದಂಥ ಸಹಕಾರಿ ಸಂಸ್ಥೆಗಳು ಇವತ್ತು ಹಿಂದಕ್ಕೆ ಹೋಗಬೇಕಾದ ಪರಿಸ್ಥಿತಿ ಬಂದಿದೆ. ಏಕೆ ಈ ಪರಿಸ್ಥಿತಿ ಉಂಟಾಗಿದೆ ಎಂಬ ಬಗ್ಗೆ ವಿಮರ್ಶೆ ಮಾಡಬೇಕು ಎಂದು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರ ಗಮನವನ್ನು ಸೆಳೆಯಲಿಕ್ಕೆ ಇಷ್ಟಪಡುತ್ತೇನೆ. ಇಡೀ ರಾಜ್ಯದ ಚಿತ್ರವನ್ನು ನೋಡುವ ಮೊದಲು ನಮ್ಮ ಜಿಲ್ಲೆಯ ಚಿತ್ರವನ್ನು ಮಾನ್ಯ ಸಹಕಾರ ಸಚಿವರ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ ೧೯೭೮ ೭೯ನೇ ಸಾಲಿನಲ್ಲಿ ಷಾರ್ಟ್ ಟರ್ಮ್ ಲೋನ್ ೪೧೪.೨೪ ಲಕ್ಷ ರೂಪಾಯಿಗಳನ್ನು ಕೇಂದ್ರ ಸಹಕಾರಿ ಬ್ಯಾಂಕ್ ಇಡೀ ಜಿಲ್ಲೆಗೆ ಒದಗಿಸಿದೆ; ೧೯೭೯-೮೦ನೇ ಸಾಲಿನಲ್ಲಿ ೩೮೨.೭೧ ಲಕ್ಷ ರೂಪಾಯಿಗಳ ಸಾಲ ಒದಗಿಸಿದೆ. ೧೯೮೦-೮೧ನೇ ಸಾಲಿನಲ್ಲಿ ಅಂದರೆ ಪ್ರಸಕ್ತ ವರ್ಷದಲ್ಲಿ ತಾವು ಅಧಿಕಾರಕ್ಕೆ ಬಂದ ನಂತರ ಕೇವಲ ೨೬೧.೫೮ ಲಕ್ಷ ರೂಪಾಯಿಗಳ ಸಾಲವನ್ನು ಒದಗಿಸಲಿಕ್ಕೆ ಶಕ್ಯವಾಗಿದೆ. ಆದ್ದರಿಂದ ಇದರ ಬಗ್ಗೆ ವಿಮರ್ಶೆ ಮಾಡಬೇಕಾಗಿದೆ ಕೊಟ್ಟ ಸಾಲದಲ್ಲಿ ೧೯೭೮-೭೯ನೇ ಸಾಲಿನಲ್ಲಿ ೧೬೭.೫೧ ಲಕ್ಷ ರೂಪಾಯಿಗಳನ್ನು ಭತ್ತದ ಬೆಳೆಗಾಗಿ ವಿನಿಯೋಗಿಸಲಾಗಿತ್ತು. ೧೯೭೯-೮೦ನೇ ಸಾಲಿನಲ್ಲಿ ೧೬೩.೮೬ ಲಕ್ಷ ರೂಪಾಯಿಗಳನ್ನು ಭತ್ತದ ಸಾಲಕ್ಕಾಗಿ ಕೊಡಲ್ಪಟ್ಟಿದ್ದರೆ ಈ ವರ್ಷ ಜೂನ್ ೩೦ರ ತನಕ ಕೇವಲ ೬೫.೧೦ ಲಕ್ಷ ರೂಪಾಯಿಗಳನ್ನು ಇಡೀ ಜಿಲ್ಲೆಯಲ್ಲಿ ಬೇಸಾಯಗಾರನಿಗೆ ಸಾಲಕ್ಕಾಗಿ ಒದಗಿಸಿಕೊಡಲಿಕ್ಕೆ ಶಕ್ತರಾಗಿದ್ದಾರೆ ಹಾಗಾದರೆ ಇದಕ್ಕೆ ಏನು ಕಾರಣ ? ಇದೇ ಸದನದಲ್ಲಿ ಸಹಕಾರ ಸಚಿವರ ಗಮನಕ್ಕೆ ವಿಷಯವನ್ನು ತಂದಾಗ ಅವರು ಒಪ್ಪಲಿಲ್ಲ ಯಾವ ಕೃಷಿಕನಿಗೆ, ಸಣ್ಣ ಬೇಸಾಯಗಾರನಿಗೆ, ಹಿಂದುಳಿದ ಕೃಷಿಕನಿಗೆ ಸಾಲವನ್ನು ಒದಗಿಸಿಕೊಡಬೇಕು ಎನ್ನುವಂಥ ಯೋಜನೆ ಫಲಕಾರಿಯಾಗಲಿಲ್ಲ. ನಾವು ಭಾಷಣದಲ್ಲಿ. ಎಲ್ಲಾ ಕಡೆಗಳಲ್ಲಿ ಈ ವಿಚಾರವನ್ನು ಹೇಳುತ್ತಾ ಬಂದಿದ್ದೇವೆ. ಬೇಸಾಯಗಾರ ನಮ್ಮ ದೇಶದ ಬೆನ್ನೆಲುಬು; ಆದ್ದರಿಂದ ರೈತರಿಗೆ, ಅದೇ ರೀತಿ ಹಿಂದುಳಿದವರಿಗೆ, ಕಾರ್ಮಿಕರಿಗೆ, ಹೆಚ್ಚು ಸವಲತ್ತುಗಳನ್ನು ಒದಗಿಸಿಕೊಡಬೇಕು ಎಂದು ಎಲ್ಲಾ ವೇದಿಕೆಗಳಲ್ಲಿ ನಾವು ಮಾತನಾಡಿದ್ದೇವೆ. ನಮ್ಮ ಜಿಲ್ಲೆಯಲ್ಲಿ ಶೇಕಡ ೮೫ರಷ್ಟು ಗೇಣಿದಾರರಿದ್ದಾರೆ. ಅವರ ಅರ್ಜಿ ಇತ್ಯರ್ಥವಾಗದೇ ಇರುವುದರಿಂದ, ಈ ಸರ್ಕಾರ ಹೊಸ ಆದೇಶವನ್ನು ಹೊರಡಿಸಿ ಪ್ರೊವಿಷನ್ ಸರ್ಟಿಫಿಕೇಟ್ ಪಡೆದು ಸಾಲವನ್ನು ಪಡೆಯಬೇಕು ಎಂಬ ಸಿದ್ಧಾಂತವನ್ನು, ಸೂತ್ರವನ್ನು ಆಚರಣೆಗೆ ತಂದಿರುವುದರ ಪರಿಣಾಮವಾಗಿ ಗೇಣಿದಾರ ಸಾಲವನ್ನು ಪಡೆಯಲಿಕ್ಕೆ ಶಕ್ಯವಾಗಿಲ್ಲ. ಜೂನ್ ೩೦ರ ತನಕ ಆ ಆದೇಶವಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವತ್ತು ಸಾಲ ಬೇಕಾಗಿರುವುದಿಲ್ಲ, ಏಕೆಂದರೆ, ಇವತ್ತು ನಾಟಿ ಮುಗಿದುಹೋಗಿದೆ.

ತಾವು ಏನು ಒಂದು ವಿಚಾರವನ್ನು ಇಟ್ಟುಕೊಂಡಿದ್ದೀರಿ, ಹೆಚ್ಚು ಜನರಿಗೆ, ಹಿಂದುಳಿದಂಥ ನಮ್ಮ ಜನರಿಗೆ ಸಹಕಾರಿ ಸಂಸ್ಥೆಗಳ ಮುಖಾಂತರ ಸಾಲವನ್ನು ಒದಗಿಸಿಕೊಡಬೇಕು ಎನ್ನುವಂಥ ಯೋಜನೆ ಏನಿತ್ತು ಅದು ಫಲಕಾರಿಯಾಗಲ್ಲ ಆದರೆ ಎಲ್ಲಿ ತೊಂದರೆ ಬಂದಿದೆ, ಅದನ್ನು ನಿವಾರಿಸಬೇಕಾಗಿದೆ. ನಿವಾರಿಸದೇ ಹೋದರೆ ಕೇವಲ ಭಾಷಣಗಳಲ್ಲಿ ಸಹಕಾರಿ ಸಂಸ್ಥೆಗಳನ್ನು ಬಳಸಿಕೊಂಡಂತಾಗುತ್ತದೆ. ಈ ರೀತಿ ಜನರನ್ನು ಮರುಳು ಮಾಡಬಹುದು ಎಂದು ತಿಳಿದುಕೊಂಡಿದ್ದರೆ ಅದು ತಪ್ಪಾಗುತ್ತದೆ. ಆದ್ದರಿಂದ ಹೆಚ್ಚು ಜನರಿಗೆ ಸಾಲದ ಸವಲತ್ತನ್ನು ಒದಗಿಸಿಕೊಡಬೇಕು ಎಂದು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತೇನೆ. ಹೆಚ್ಚು ಭೂಮಿ ಹೊಂದಿರತಕ್ಕ ಭೂಮಾಲಿಕರಿಗೆ ಸಾಲವನ್ನು ಒದಗಿಸಲಿಕ್ಕೆ ಅಡ್ಡಿ ಆತಂಕ ಇಲ್ಲ. ಆದರೆ ಕೃಷಿ ಕಾರ್ಮಿಕರಿಗೆ ಮತ್ತು ಗೇಣಿದಾರರಿಗೆ ತಮ್ಮ ಆದೇಶದಿಂದ, ತಮ್ಮ ಸಿದ್ಧಾಂತದಿಂದ ಸಾಲ ಪಡೆಯಲಿಕ್ಕೆ ಅನಾನುಕೂಲವಾಗಿದೆ. ಆದ್ದರಿಂದ ಈ ಒಂದು ಅಡ್ಡಿ ಆತಂಕ ಏನಿದೆ ಅದನ್ನು ನಿವಾರಿಸಬೇಕು ಎಂದು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ಸಾಲ ಕೊಡುವಂಥ ವ್ಯವಸ್ಥೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕಾಗುತ್ತದೆ. ಮಾನ್ಯ ನಾನಯ್ಯನವರು ಮಾತನಾಡುವಾಗ ಒಂದು ವಿಚಾರವನ್ನು ಹೇಳಿದರು ಅದೇನೆಂದರೆ, ಕೊಟ್ಟ ಸಾಲವನ್ನು ನಾವು ರೈಟಾಫ್ ಮಾಡುವಂಥ ಪದ್ಧತಿ ಒಳ್ಳೆಯದಲ್ಲ ಎಂದು ಹೇಳಿದರು. ಕೊಟ್ಟ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕು ಎನ್ನುವಂಥ ಬೇಡಿಕೆ ಇಡುವಂಥ ವ್ಯಕ್ತಿ ನಾನಲ್ಲ, ಸಹಕಾರಿ ಸಂಸ್ಥೆಗಳು ಮುಂದುವರಿಯಬೇಕಾದರೆ, ಸಾಲವನ್ನು ಮನ್ನಾ ಮಾಡುವ ಪದ್ಧತಿಯನ್ನು ಕೈಬಿಡಬೇಕು, ಈ ಪದ್ಧತಿಯನ್ನು ಅನುಷ್ಠಾನಕ್ಕೆ ತಂದರೆ ಮುಂದೆ ಸಾಲವನ್ನು ಕೊಡಲಿಕ್ಕೆ ಅನುಕೂಲವಾಗುತ್ತದೆ. ಇನ್ನೊಂದು ವಿಚಾರ ಏನೆಂದರೆ, ಕೃಷಿಕನಿಗೆ ಕೊಡುವ ಸಾಲವನ್ನು ದುಬಾರಿ ಬಡ್ಡಿ ದರದಲ್ಲಿ ಕೊಡುತ್ತಿದ್ದಾರೆ. ರಿಸರ್ವ್ ಬ್ಯಾಂಕು ಅಪೆಕ್ಸ್ ಬ್ಯಾಂಕಿಗೆ ೭ ಪರ್ಸೆಂಟ್ ದರದಲ್ಲಿ ಹಣವನ್ನು ಕೊಟ್ಟರೆ ಅದು ಸಾಮಾನ್ಯ ಕೃಷಿಕನಿಗೆ ತಲುಪುವಾಗ ಶೇಕಡ ಹನ್ನೊಂದೂವರೆಯಿಂದ ಹದಿನೆಂಟೂವರೆವರೆಗೂ ಬಡ್ಡಿ ದರ ಹೋದಂಥ ಪರಿಸ್ಥಿತಿ ಇದೆ. ಮಾನ್ಯ ಸಹಕಾರ ಮಂತ್ರಿಗಳಿಗೆ ಗೊತ್ತಿದೆ, ಅವರು ಇದರ ಬಗ್ಗೆ ಮರು ಪರಿಶೀಲನೆ ಮಾಡಿ, ಸಹಕಾರ ರಂಗದಿಂದ ದೊರೆಯತಕ್ಕ ಸಾಲದ ಬಡ್ಡಿ ದರವನ್ನು ಇಳಿಸಬೇಕು. ಈ ಒಂದು ಕಾರ್ಯವನ್ನು ಮಾಡಿದರೆ ರೈತರ ಸಂಕಟವನ್ನು ಪರಿಹರಿಸಲಿಕ್ಕೆ ಹೊಸ ಮಾರ್ಗವನ್ನು ಕಂಡುಕೊಂಡಂತಾಗುತ್ತದೆ ಎಂದು ತಮ್ಮ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ.

೬–೩೦. ಪಿ. ಎಂ.

ಹಾಗೇ ಇವತ್ತು ಶ್ರೀಮಾನ್ ನಾನಯ್ಯನವರು ಮಾತನಾಡುತ್ತಾ ಕೆಲವು ಡಿಫಾಲ್ಕೇಷನ್ ವಿಚಾರಗಳನ್ನು ತಮ್ಮ ಗಮನಕ್ಕೆ ತಂದಿದ್ದಾರೆ. ಆದುದರಿಂದ ಅದರ ಬಗ್ಗೆ ಪುನಃ ಮಾತನಾಡಿ ಈ ಸಭೆಯ ಕಾಲವನ್ನು ಹೆಚ್ಚು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ, ಅಧ್ಯಕ್ಷರೇ, ಒಂದು ವಿಚಾರವನ್ನು ನಾವು ನೋಡುವುದಾದರೆ, ಇವತ್ತು ಸಹಕಾರ ಕ್ಷೇತ್ರಗಳಲ್ಲಿ ಏನು ವಂಚನೆಗಳು ನಡೆಯುತ್ತಿವೆ ಎಂಬುದರ ಬಗ್ಗೆ ಕೂಲಂಕಷವಾಗಿ ವಿಮರ್ಶೆ ಮಾಡಿ ನೋಡಿದರೆ, ಅದರ ಒಂದು ಚಿತ್ರ ಸ್ಪಷ್ಟವಾಗಿ ಗೊತ್ತಾಗುತ್ತದೆ. ಯಾರು ಪ್ರಭಾವ ಶಾಲಿ ಜನರಿದ್ದಾರೆ ಯಾರು ಶ್ರೀಮಂತರಿದ್ದಾರೆ ಅಂಥಾ ವ್ಯಕ್ತಿಗಳಿಂದಲೇ ಈ ವಂಚನೆಗಳು ಜಾಸ್ತಿಯಾಗುತ್ತಿವೆಯೇ ಹೊರತು ಸಣ್ಣಪುಟ್ಟ, ಮತ್ತು ಬಡವರು ದೀನ–ದಲಿತರು ಇರತಕ್ಕ ಸಂಘಸಂಸ್ಥೆಗಳಲ್ಲಿ ಅಷ್ಟಾಗಿ ವಂಚನೆಯ ಕೆಲಸಗಳು ನಡೆದಿಲ್ಲ. ಆದುದರಿಂದ ಯಾರು ಇಂಥಾ ಪ್ರಭಾವಿ ಜನ ಇದ್ದಾರೆ ಅಂಥವರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಂಡು ಅವರನ್ನು ಸರ್ಕಾರ ಶಿಕ್ಷಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಅಲ್ಲಿ ಯಾರು ಯಾರೆಲ್ಲಾ ಇದ್ದಾರೆ ಎಂಬುದು ತಮಗೆ ಗೊತ್ತಿದೆ ಆದ್ದರಿಂದ ಅವರನ್ನೆಲ್ಲ ಹೆಸರಿಸಬೇಕಾದ ಅಗತ್ಯವಿಲ್ಲ. ಕೋಆಪರೇಟಿವ್ ಸೊಸೈಟಿ ಮತ್ತು ಕನ್‌ಸ್ಯೂಮರ್ಸ್ ಸೊಸೈಟಿಗಳನ್ನು ಮಾಡಬೇಕೆಂದು ಮಾಡಿ ದೊಡ್ಡ ದೊಡ್ಡ ಪ್ರಭಾವ ಶಾಲಿ ವ್ಯಕ್ತಿಗಳು ಮತ್ತು ಮಾಜಿ ಶಾಸಕರುಗಳು ಬ್ರಹ್ಮಾವರದಲ್ಲಿ ಮತ್ತು ಕುಂದಾಪುರದಲ್ಲಿ ಲಕ್ಷಾಂತರ ರೂಪಾಯಿಗಳ ವಂಚನೆ ಮಾಡಿದ್ದಾರೆ. ಅದರ ಬಗ್ಗೆ ಈಗ ಸವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ ಏತಕ್ಕೆಂದರೆ ಅಲ್ಲಿ ಎನ್‌ಕ್ವೈರಿ ನಡೆಯುತ್ತಿದೆ. ಮತ್ತೆ ಇನ್ನೊಂದು ಏನೆಂದರೆ, ಅದನ್ನು ಮುಚ್ಚಿಡುವುದಕ್ಕೆ ಆ ಪ್ರಭಾವಿ ವ್ಯಕ್ತಿಗಳು ಬೆಂಗಳೂರಿಗೆ ಆಗಿಂದ ಗ್ಗೆ ಬಂದು ಹೋಗುತ್ತಿದ್ದಾರೆ. ಅವರು ಇಲ್ಲಿಗೆ ಬಂದಿದ್ದಾಗ ಮಾನ್ಯ ಮಂತ್ರಿಗಳವರನ್ನು ಮತ್ತು ಮುಖ್ಯಮಂತ್ರಿಗಳವರನ್ನು ಭೇಟಿ ಮಾಡಿದ್ದರೇನೋ ಗೊತ್ತಿಲ್ಲ.

ಇಂಥಾ ವಂಚನೆ ಪ್ರಕರಣಗಳನ್ನು ಬೆಳಕಿಗೆ ತಂದು, ಅಂಥವರಿಗೆ ಸರ್ಕಾರದವರು ಉಗ್ರವಾದ ಶಿಕ್ಷೆಯನ್ನು ಕೊಟ್ಟರೆ ಬಾಕಿ ಸಂಸ್ಥೆಗಳಲ್ಲಿ ವಂಚನೆ ಮಾಡುವುದನ್ನು ಕಡಿಮೆ ಮಾಡಬಹುದೆಂದು ತಿಳಿದುಕೊಂಡಿದ್ದೇನೆ.

ಇನ್ನು ಕೊನೆಯದಾಗಿ, ಮಾರುಕಟ್ಟೆ ಬಗ್ಗೆ ಮಾತ್ರ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಾದರೆ, ಈಗ ಹೊಸದಾಗಿ ಮಾರುಕಟ್ಟೆ ಮಂತ್ರಿಗಳವರು, ಯುವಕ ಮತ್ತು ಉತ್ಸಾಹಶಾಲಿ ಮಂತ್ರಿಗಳು ಬಂದಿದ್ದಾರೆ ಆದುದರಿಂದ ನಾನು ಹೆಚ್ಚಿಗೆ ಅವರ ಇಲಾಖೆಯ ಬಗ್ಗೆ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಈ ಮಾರುಕಟ್ಟೆ ಅಭಿವೃದ್ಧಿಗಾಗಿ ಜಾಗತಿಕ ಬ್ಯಾಂಕ್‌ನವರು ಹೋದ ವರ್ಷ ೯ ಕೋಟಿ ಕೊಟ್ಟಿದ್ದರೆ ಈ ವರ್ಷ ೩೦-೪೦ ಕೋಟಿ ರೂಪಾಯಿಗಳನ್ನು ಕೊಡುವುದಾಗಿ ತಿಳಿದು ಬಂದಿದೆ. ಆದರೆ ಇವತ್ತು ನಮ್ಮ ರಾಜ್ಯದಲ್ಲಿರುವ ಎಲ್ಲಾ ಮಾರುಕಟ್ಟೆ ಕಮಿಟಿಗಳನ್ನು ರದ್ದು ಮಾಡಿ ಚುನಾವಣೆಗಳನ್ನು ನಡೆಸದೇ ಅಲ್ಲಿಗೆ ತಹಶೀಲ್ದಾರರನ್ನೇ ಅಡ್ಮಿನಿಸ್ಟ್ರೇಟರ್‌ಗಳನ್ನಾಗಿ ನೇಮಕ ಮಾಡಿದ್ದೀರಿ. ಇದು ಮಾರುಕಟ್ಟೆಯ ಉದ್ದೇಶಕ್ಕೇ ವಿರುದ್ಧವಾಗಿದೆ. ಜನತೆಯ ಅಭಿಪ್ರಾಯವನ್ನು ಕಡೆಗಣಿಸಿದ್ದೀರಿ. ಆದುದರಿಂದ ಇನ್ನು ಮುಂದಾದರೂ ಆದಷ್ಟು ಶೀಘ್ರವಾಗಿ ಅಲ್ಲಿಗೆ ಚುನಾವಣೆಗಳನ್ನಾದರೂ ಮಾಡಿ ಇಲ್ಲವೇ ಯಾರನ್ನಾದರೂ ಪ್ರತಿನಿಧಿಗಳನ್ನು ನೇಮಿಸುವುದರ ಮೂಲಕ ಮಾರುಕಟ್ಟೆಗಳ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಮಾನ್ಯ ಮಾರುಕಟ್ಟೆಯ ಹೊಸ ಮಂತ್ರಿಗಳವರು ಪ್ರಯತ್ನ ಪಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೃಷಿಕರು ಬೆಳೆದಂಥ ಬೆಳೆಗೆ ಯೋಗ್ಯ ಮಾರುಕಟ್ಟೆಯನ್ನು ಒದಗಿಸುವ ದೃಷ್ಟಿಯಿಂದ ಈ ಕೆಲಸ ಮಾಡಬೇಕಾಗುತ್ತದೆ. ಇವತ್ತು ರೈತ ತಾನು ಬೆಳೆದಂಥ ಬೆಳೆಯನ್ನು ಕೇಂದ್ರ ಮಾರುಕಟ್ಟೆಗೆ ಸಾಗಿಸಬೇಕಾದರೆ ಲಾರಿಗಳು ಮತ್ತಿನ್ನಿತರ ವ್ಯವಸ್ಥೆಗಳು ಬೇಕಾಗುತ್ತದೆ, ಅದಕ್ಕೆಲ್ಲಾ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ, ಇವತ್ತು ಸ್ಟೇಟ್ ಮಾರ್ಕೆಟಿಂಗ್ ಬೋರ್ಡ್ ಈ ಹಿನ್ನೆಲೆಯಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅದೂ ಕೂಡ ಚೆನ್ನಾಗಿ ಕೆಲಸ ಮಾಡುವಂತೆ ಮಾಡಲು ಮಾನ್ಯ ಸಚಿವರು ಅತ್ತ ಕಡೆಗೂ ಸಹ ಗಮನಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ, ಎಚ್. ಬೆಕಿನಾಳ್‌ಕರ್ (ಸಿಂದಗಿ),—ಮಾನ್ಯ ಅಧ್ಯಕ್ಷರೇ. ಈ ಸಹಕಾರ ಇಲಾಖೆಯ ಬೇಡಿಕೆಯನ್ನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ, ಮುಖ್ಯವಾಗಿ ಈ ಕಾನೂನು ಬದಲಾವಣೆಯ ಅವಶ್ಯಕತೆ ಇದಯೆಂದು ಮಾನ್ಯ ಸಚಿವರು, ಶ್ರೀ ನಾನಯ್ಯನವರು ಮಾತನಾಡುತ್ತಿರುವಾಗ ಮಧ್ಯದಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ವಿಶೇಷವಾದ ಹಲವಾರು ಕಾನೂನುಗಳನ್ನು ಮಾರ್ಪಾಡು ಮಾಡುತ್ತೇವೆಂದು ಮಾನ್ಯ ಸಚಿವರು ಹೇಳುತ್ತಿರುವಾಗ, ಈ ಹಳೆಯ ಕಾಲದ ಅಂದರೆ ಬ್ರಿಟೀಷರ ಕಾಲದ ಪದ್ಧತಿಯನ್ನು ಸಂಪೂರ್ಣವಾಗಿ ಕೈಬಿಟ್ಟು ನಮ್ಮದೇ ಆದ ಒಂದು ಪದ್ಧತಿಯನ್ನು ಅನುಸರಿಸಬೇಕು ಎನ್ನುವ ಮಾತನ್ನು ಹೇಳಬಯಸುತ್ತೇನೆ. ಇಂಡಿಯನ್ ಪೀನಲ್ ಕೋಡ್ ಕ್ರಿಮಿನಲ್ ಪ್ರೊಸೀಜರ್ ಕೋಡ್ ಹಾಗೂ ಇನ್ನಿತರ ಕೋಡ್‌ಗಳನ್ನೆಲ್ಲಾ ಬಿಟ್ಟು ನಮ್ಮದೇ ಆದ ಒಂದು ಪದ್ಧತಿಯನ್ನು ಜಾರಿಗೆ ತಂದರೆ. ಅದರಿಂದ ಬಡ ರೈತರಿಗೆ ತಿಳುವಳಿಕೆಯಾಗುತ್ತದೆ ಮತ್ತು ವಕೀಲರಿಗೂ ಸಹ ಕನ್‌ಫೂಜ್ ಆಗುವಂತಾದ್ದು ತಪ್ಪುತ್ತದೆ. ಆದುದರಿಂದ ಹೊಸ ರೀತಿಯಲ್ಲಿ ಒಂದು ಕಾನೂನು ರಚನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆನ್ನುವ ಸಲಹೆಯನ್ನು ಕೊಡಬಯಸುತ್ತಿದ್ದೇನೆ ಎರಡನೆಯದಾಗಿ ಈ ಇಲಾಖೆಯಲ್ಲಿ ನೌಕರ ಶಾಹಿ ವರ್ಗ ಏನಿದೆ ಅದು ಬಡ ರೈತ ಗೆ ಅನುಕೂಲವಾಗುವ ರೀತಿಯಲ್ಲಿ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ಎನ್ನುವುದು ಎಲ್ಲರಿಗೂ ಕಂಡು ಬರುತ್ತಿದೆ. ಅದನ್ನು ಯಾವ ರೀತಿಯಲ್ಲಿ ತಪ್ಪಿಸಬೇಕೋ ಆ ರೀತಿ ತಪ್ಪಿಸಲು ಅವರಿಗೆ ಟ್ರೈನಿಂಗ್ ಕೊಡಿ. ಆದರೆ ಇವತ್ತು ಅವರಿಗೆ ಏನು ಟ್ರೈನಿಂಗ್ ಕೊಡುತ್ತಿದ್ದೀರಿ. ಅದು ಹಳ್ಳಿಗಾಡಿನಲ್ಲಿರತಕ್ಕ ರೈತರ ಪರಿಸ್ಥಿತಿಗೆ ಅನುಗುಣವಾಗಿ, ನಡೆಯುತ್ತಿಲ್ಲ. ಅವರ ಟ್ರೈನಿಂಗ್‌ನಲ್ಲಿ ಹಳ್ಳಿಯವರ ಕಷ್ಟವೇನು, ಅವರ ಪರಿಸ್ಥಿತಿ ಹೇಗಿದೆ ಎಂಬುದರ ಅರಿವು ಆಗಿರುವುದಿಲ್ಲ. ಕೋ ಆಪರೇಟಿವ್ ಟ್ರೈನಿಂಗ್‌ಗಳನ್ನು ನಗರಗಳಲ್ಲಿ ಕೊಟ್ಟು ಅವರುಗಳನ್ನು ಡೆಹರಾಡೂನ್ ಬೊಂಬಾಯಿ, ಕಲ್ಕತ್ತಾ ನಗರಗಳಿಗೆ ಕರೆದುಕೊಂಡು ಹೋಗಿ ಬಂದರೆ ಗೊತ್ತಾಗುವುದಿಲ್ಲ, ಅವರುಗಳಿಗೆ ಟ್ರೈನಿಂಗ್‌ನ್ನು ಹಳ್ಳಿಯಲ್ಲಿ ಕೊಟ್ಟರೆ ಅಲ್ಲಿಯ ವಾತಾವರಣವೇನೆಂಬುದನ್ನು ಅವರು ಚೆನ್ನಾಗಿ ಅರ್ಥ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಹಳ್ಳಿಗಳಲ್ಲಿ ವೆಸ್ಟೆಡ್ ಇಂಟ್ರೆಸ್ಟ್‌ನವರು ಯಾವ ರೀತಿಯಾಗಿ ನಡೆದುಕೊಳ್ಳುತ್ತಾರೆ, ಅವರು ಯಾವ ರೀತಿಯಾಗಿ ಹಳ್ಳಿಗಳಲ್ಲಿ ವರ್ತಿಸುತ್ತಿದ್ದಾರೆ. ಅದನ್ನು ಹೇಗೆ ನಿವಾರಣೆ ಮಾಡಬಹುದೆಂಬುದು ಅರ್ಥವಾಗುತ್ತದೆ. ಆದುದರಿಂದ ಟ್ರೈನಿಂಗ್ ಕ್ಯಾಂಪ್

ಗಳನ್ನು ಆದಷ್ಟು ಹಳ್ಳಿಗಳಲ್ಲಿ ಮಾಡುವುದು ಉತ್ತಮವೆಂದು ಹೇಳಬಯಸುತ್ತೇನೆ. ಹಳ್ಳಿಗಳಲ್ಲಿರುವ ಸೊಸೈಟಿಗಳ ಅಧಿಕಾರವೆಲ್ಲಾ ಒಬ್ಬರ ಕೈಯಲ್ಲಿಯೇ ಇರುತ್ತದೆ. ಅದೂ ಚೇರ್ಮನ್‌ರವರ ಕೈಯಲ್ಲಿರುತ್ತದೆ. ಅವನ ಮನೆಯಲ್ಲಿರುವ ಕಪಾಟಿನಲ್ಲಿಯೇ ಇಡೀ ಸೊಸೈಟಿಯ ಹಣವಿರುತ್ತದೆ, ಅಲ್ಲಿಗೇ ಕಾರಕೂನ ಹೋಗ ಬೇಕು, ಅಲ್ಲಿಗೆ ಸೆಕ್ರೆಟರಿಗಳವರು ಹೋಗಬೇಕು, ಈಗ ಏನಾಗಿದೆ ಎಂದರೆ ಎಷ್ಟೋ ಕಡೆಗಳಲ್ಲಿ ಛೇರ್ಮನ್‌ರವರೇ ಅನೇಕ ಜನರ ಹೆಸರಿನಲ್ಲಿ ಲಕ್ಷಾಂತರ ರೂಪಾಯಿಗಳ ಸಾಲ ತೆಗೆದುಕೊಂಡು ಬಿಟ್ಟಿರು ತ್ತಾರೆ, ಹತ್ತಾರು ವರ್ಷಗಳ ನಂತರ ನಿಮ್ಮ ಡಿಪಾರ್ಟ್‌ಮೆಂಟಿನವರು ವಸೂಲಿ ಮಾಡುವುದಕ್ಕೆ ಹೋಗುತ್ತಾರೆ ಆಗಲೇ ಅವರಿಗೆ ಗೊತ್ತಾಗುವುದು, ಆಗ ಅವರಿಗೆ ಆಶ್ಚರ್ಯವಾಗುತ್ತದೆ ನಾನು ಎಲ್ಲಿ ಸಾಲ ತೆಗೆದುಕೊಂಡಿದ್ದೆ ಎನ್ನುವಂಥ ಪರಿಸ್ಥಿತಿ ಅನೇಕ ಸಂದರ್ಭವಲ್ಲಿ ಆಗಿರುವುದು ತಮ್ಮ ಗಮನಕ್ಕೂ ಬಂದಿರಬಹುದು, ತಾವು ವಕೀಲರಿದ್ದೀರಿ, ತಮಗೂ ಇಂಥ ಸಮಸ್ಯೆಗಳು ಬಂದಿರಬಹುದು. ಇದನ್ನು ತಪ್ಪಿಸಬೇಕಾದರೆ ಯಾವ ರೀತಿಯಾಗಿ ಮಾಡಬೇಕು ಎನ್ನುವ ಬಗ್ಗೆ ಮುಖ್ಯವಾಗಿ ಒಂದು ವಿಷಯವನ್ನು ತಾವು ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಈ ಬಗ್ಗೆ ನನಗೆ ತಿಳಿದ ಮಟ್ಟಿಗೆ ಹೇಳಬೇಕೆಂದರೆ, ಈ ಸಹಕಾರ ಸಂಸ್ಥೆಗಳಿಗೆ ತಾವು ಏನು ಸಾಲವನ್ನು ಕೊಡುತ್ತೀರಿ, ಯಾರು ಯಾರಿಗೆ ಎಷ್ಟೆಷ್ಟು ಸಾಲ ಮಂಜೂರು ಮಾಡಿದ್ದೀರಿ ಎನ್ನುವ ಪಟ್ಟಿಯನ್ನು ಆಯಾಯಾ ಕ್ಷೇತ್ರದ ಎಂ ಎಲ್.ಎ ಗಳಿಗೂ ಕಳುಹಿಸಿ ಕೊಡುವುದು ಒಳ್ಳೆಯದು. ಇದರಿಂದ ಯಾರು ಯಾರಿಗೆ ಸಾಲ ಕೊಟ್ಟಿದೆ ಎನ್ನುವುದು ಬಹಿರಂಗವಾಗಿ ಎಲ್ಲರಿಗೂ ತಿಳಿದ ಹಾಗಾಗುತ್ತದೆ. ಆಗ ಸಂಬಂಧಪಟ್ಟ ಶಾಸಕರು ಅಲ್ಲಿಗೆ ಹೋದಾಗ ವಿಚಾರಣೆ ಮಾಡಲು ಅನುಕೂಲವಾಗುತ್ತದೆ. ಆಗ ಈ ತರಹದ ಯಾವುದೇ ತಕರಾರುಗಳು ಬರುವುದಕ್ಕೆ ಆಸ್ಪದವಿರುವುದಿಲ್ಲವೆಂದು ತಿಳಿದುಕೊಂಡಿದ್ದೇನೆ. ಇದೇ ರೀತಿ ರೆವಿನ್ಯೂ ಇಲಾಖೆಯ ಅಧಿಕಾರಿಗಳು ಮೇಲಿಂದ ಮೇಲೆ ಹಳ್ಳಿಗಳಿಗೆ ಹೋದಾಗ ಈ ಬಗ್ಗೆ ಕೂಡ ಸ್ವಲ್ಪ ದಕ್ಷತೆಯಿಂದ ಕಾರ್ಯವನ್ನು ನಿರ್ವಹಿಸ ಬೇಕು. ಮಾನ್ಯ ಸಚಿವರು ಈ ವಿಚಾರದಲ್ಲಿ ರೆವಿನ್ಯೂ ಇಲಾಖೆಯವರ ಸಹಾಯವನ್ನು ಸಹ ಪಡೆದು ಕೊಳ್ಳಬೇಕಾಗುತ್ತದೆ. ಅಂದರೆ ಮಾತ್ರ ಈ ರೀತಿಯಾದ ಅವ್ಯವಹಾರಗಳು, ದುರ್ವ್ಯವಹಾರಗಳು ಸೊಸೈಟಿಗಳಲ್ಲಿ ಆಗುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗಬಹುದು. ಇಲ್ಲದಿದ್ದರೆ, ಶ್ರೀಮಂತ ಛೇರ್ಮನ್ ಬಡಜನರ ಹೆಸರಿನಲ್ಲಿ ಸಾಲ ತೆಗೆದುಕೊಂಡು ಅದನ್ನು ಆ ಬಡವರಿಗೇ ಹೆಚ್ಚಿನ ಬಡ್ಡಿ ದರದಲ್ಲಿ ಸಾಲ ವಾಗಿ ಕೊಟ್ಟು ತಮ್ಮ ಸಂಸಾರವನ್ನು ತೂಗಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇದನ್ನು ತಪ್ಪಿಸಿ ಬಡ ರೈತರಿಗೆ ಆಗುತ್ತಿರುವಂಥಾ ತೊಂದರೆಗಳನ್ನು ಪರಿಹರಿಸುವಂತೆ ಮಾಡಬೇಕೆಂದು ಹೇಳಬಯಸು ತ್ತೇನೆ.

ಇನ್ನು ಹಳ್ಳಿಯಲ್ಲಿ ಸೊಸೈಟಿ ಆಫೀಸುಗಳಿಲ್ಲ. ಅಲ್ಲಿನ ಸೊಸೈಟಿ ಆಫೀಸ್ ಎಂದರೆ, ಗೌಡರ ಮನೆಯಲ್ಲಿ ಅಥವಾ ಜಾಗೀರ್ದಾರರ ಮನೆಯಲ್ಲಿ ಇರುವಂತಹ ಸಣ್ಣ ಕಪಾಟು ಆಗಿರುತ್ತದೆ. ಸೊಸೈಟಿ ಕಾರ್ಯದರ್ಶಿ ಯಾರಿರುತ್ತಾರೆಂದು ಗೊತ್ತಿರುವುದಿಲ್ಲ. ಈ ರೀತಿಯ ಸೊಸೈಟಿಗಳು ನಮ್ಮ ರಾಜ್ಯದಲ್ಲಿವೆ. ಇಂಥ ಸೊಸೈಟಿಗಳನ್ನೆಲ್ಲಾ ತೆಗೆದು, ಒಂದು ತಾಲ್ಲೂಕಿನಲ್ಲಿ ೧೦೦ ಹಳ್ಳಿಗಳಿದ್ದರೆ ಹತ್ತತ್ತು ಹಳ್ಳಿಗಳಿಗೆ ಒಂದೊಂದು ಸೊಸೈಟಿಗಳನ್ನು ಮಾಡಿ ಎಂದು ಸಲಹೆ ಮಾಡುತ್ತೇನೆ. ಏಕೆಂದರೆ, ರೈತರು ದಿನಾಲು ಏನು ಸಾಲ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಸಾಲ ಬೇಕಾದಾಗ ೮-೧೦ ಮೈಲಿ ಬಂದು ತೆಗೆದು ಕೊಂಡು ಹೋಗಬಹುದು. ಈ ರೀತಿ ಮಾಡಿದರೆ ಸರ್ವಹಿತದೃಷ್ಟಿಯಿಂದಲೂ ಅನುಕೂಲ ಆಗಬಹು ದೆಂದು ಹೇಳಬಯಸುತ್ತೇನೆ. ಈ ಇಲಾಖೆಯ ಅಧಿಕಾರಿಗಳು ಅಷ್ಟೊಂದು ದಕ್ಷತೆಯಿಂದ ಕೆಲಸ ಮಾಡುತ್ತಿಲ್ಲ ಹಳ್ಳಿಗಳಿಗೆ ಸರಿಯಾಗಿ ಹೋಗುತ್ತಿಲ್ಲ. ಅವರು ಸೊಸೈಟಿ ಸಾಲಗಳನ್ನು ಯಾವ ದಿವಸ ಬಿಡುಗಡೆ ಮಾಡುತ್ತಾರೆಂಬುದು ಗೊತ್ತಾಗುವುದಿಲ್ಲ. ಅವರು ಸೊಸೈಟಿ ಸಾಲವನ್ನು ಹಂಚುವುದಕ್ಕೆ ಇಂಥ ದಿವಸ ಹೋಗುತ್ತೇವೆಂದು ಹೇಳಿದರೆ ಅಂಥ ಸಂದರ್ಭಗಳಲ್ಲಿ ಮೇಲಾಧಿಕಾರಿಗಳು ಹೋಗಿ ಎಲ್ಲರಿಗೂ ಸರಿಯಾದ ರೀತಿಯಲ್ಲಿ ಸಾಲವನ್ನು ವಿತರಣೆ ಮಾಡಿಸುವುದಕ್ಕೆ ಅನುಕೂಲವಾಗುತ್ತದೆಂದು ಹೇಳಬಯಸು ತ್ತೇನೆ. ನಮ್ಮ ಬಿಜಾಪುರ ಜಿಲ್ಲೆಯಲ್ಲಿ ನಡೆದ ಪಂಪುಸೆಟ್ಟಿನ ಹಗರಣದ ಬಗ್ಗೆ ಹೇಳುವುದಾದರೆ, ಸಹಕಾರ ಇಲಾಖೆಯವರು ಎಷ್ಟೇ ಪ್ರಯತ್ನ ಪಟ್ಟರೂ ಕೂಡ ಒಂದು ಕೇಸೂ ಕೋರ್ಟಿಗೆ ಹೋಗಲಿಲ್ಲ ಮತ್ತು ಇನ್‌ವೆಸ್ಟಿಗೇಷನ್ ಕೂಡ ಆಗಲಿಲ್ಲ. ಇವತ್ತಿನ ದಿವಸ ಅಲ್ಲಿನ ರೈತರು ಮನೆ ಮಾರುಗಳನ್ನು ಮಾರಾಟ ಮಾಡಿ ಸಾಲ ಕಟ್ಟುವ ಪರಿಸ್ಥಿತಿ ಬಂದಿದೆ. ಈ ಬಗ್ಗೆ ಉಚ್ಚ ಅಧಿಕಾರಿಗಳಿಗೆ ದೂರುಗಳು ಬಂದಿದೆ. ಆದರೂ ಕೂಡ ಅವರು ಯಾವ ಕ್ರಮವನ್ನು ಕೈಗೊಂಡ ಹಾಗೆ ಕಾಣುವುದಿಲ್ಲ. ಆದ್ದರಿಂದ, ಈ ಬಗ್ಗೆ ಸರ್ಕಾರ ತೀವ್ರ ಗಮನ ಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಎಲ್ಲೆಲ್ಲಿ ರಸ್ತೆಯ ಒಂದು

ಅನುಕೂಲತೆ ಇದೆ, ಎಲ್ಲಿ ಸೊಸೈಟಿಯ ಷೇರು ಹಣ ಹೆಚ್ಚು ಇದೆ, ಎಲ್ಲಿ ಜನಸಂಖ್ಯೆ ಜಾಸ್ತಿ ಇದೆ ಅಂಥ ಕಡೆ ಸೊಸೈಟಿಗಳನ್ನು ಮಾಡುವುದು ಬಿಟ್ಟು ಎಲ್ಲೆಲ್ಲೋ ಸೊಸೈಟಿಗಳನ್ನು ಮಾಡಿದ್ದಾರೆ. ಉದಾಹರಣೆಗೆ ಗಣಿಯಾರದಲ್ಲಿ ಹೆಚ್ಚು ಮಂದಿ ಷೇರುದಾರರಿದ್ದರೂ ಕೂಡ ಅಲ್ಲಿ ಸೊಸೈಟಿ ಮಾಡದೆ ಹಿಕ್ಕಣಗುತ್ತಿಯಲ್ಲಿ ಮಾಡಲಾಗಿದೆ. ಎಲ್ಲೇ ಸೊಸೈಟಿಗಳನ್ನು ಮಾಡುವಾಗಲಾದರೂ ಅಲ್ಲಿ ಅಧಿಕಾರಿಗಳು ಹಸ್ತಕ್ಷೇಪ ಮಾಡುವುದಕ್ಕೆ ಅವಕಾಶ ಕೊಡಬಾರದೆಂದು ಹೇಳಬಯಸುತ್ತೇನೆ. ಈ ಇಲಾಖೆಯಲ್ಲಿರತಕ್ಕ ಡೆಪ್ಯೂಟಿ ರಿಜಿಸ್ಟ್ರಾರ್‌ರವರ ಕಛೇರಿಯಲ್ಲಿ ಕಾಯಿದೆ, ಕಾನೂನು ತಿಳುವಳಿಕೆ ಮಟ್ಟ ಸ್ವಲ್ಪ ಕಡಿಮೆ ಎಂದರೆ ತಪ್ಪಾಗಲಾರದು. ಡೆಪ್ಯೂಟಿ ರಿಜಿಸ್ಟ್ರಾರ್‌ಗಳಿಗೂ ಕೂಡ ಈ ಕೋ-ಆಪರೇಟಿವ್ ಆಕ್ಟಿನ ಸಂಪೂರ್ಣ ಜ್ಞಾನ ಇರುವುದಿಲ್ಲ. ಈ ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಅಮೆಂಡ್‌ಮೆಂಟ್ ಆಗುವಾಗ ಎಷ್ಟೋ ತೊಂದರೆಗೆ ಒಳಪಡುತ್ತದೆ. ಆದ್ದರಿಂದ, ಇದಕ್ಕೆಲ್ಲ ಒಬ್ಬರು ಅನುಭವಿಕ ವಕೀಲರನ್ನು ಪಾರ್ಟ್‌ಟೈಂ ಸಲಹೆಗಾರರನ್ನಾಗಿ ನೇಮಿಸಿಕೊಂಡು ಅವರಿಗೆ ಸ್ವಲ್ಪ ಗೌರವ ಧನವನ್ನು ಕೊಟ್ಟು ಅವರ ಸಲಹೆ ಪಡೆದುಕೊಳ್ಳುವುದು ಒಳ್ಳೆಯದೆಂದು ನನ್ನ ಸಲಹೆ.

ಶ್ರೀ ಬಿ.ಎ. ಮೊಹಿದ್ದೀನ್.—ವಕೀಲರುಗಳಿಗೆ ಕೋರ್ಟಿನಲ್ಲಿ ಕೆಲಸ ಇಲ್ಲವೆಂದು ಈ ಸಲಹೆ ಕೊಡುತ್ತಿದ್ದೀರಾ ?

ಶ್ರೀ ಎಂ.ಹೆಚ್. ಬೆಕಿನಾಳ್ಕರ್.—ನಾವು ಸಮಾಜವಾದಿ ಸಮಾಜದಲ್ಲಿರುವಾಗ ವಕೀಲರು ಕೂಡ ಸಮಾಜದ ಅಂಗವೆಂದು ಇಟ್ಟುಕೊಂಡು ಅವರು ಮಾಡುವ ಸೇವೆ ಒಳ್ಳೆಯ ಸೇವೆ ಎಂದು ಭಾವಿಸಬೇಕು.

ಶ್ರೀ ಬಿ.ಎ. ಮೊಹಿದ್ದೀನ್.—ಹಾಗಾದರೆ, ಅವರು ಬೇಗ ಕೆಟ್ಟು ಹೋಗುತ್ತಾರೆ.

ಶ್ರೀ ಎಂ.ಹೆಚ್. ಬೆಕ್ಕಿನಾಳ್ಕರ್.—ನಾನು ಕೂಡ 30 ವರ್ಷ ಕಾಲ ವಕೀಲ ಕೆಲಸ ಮಾಡಿದ್ದೇನೆ ಆದರೆ ಆ ರೀತಿ ಮಾಡಿಲ್ಲ. ಸರ್ವೇ ಸಾಧಾರಣವಾಗಿ, ಸಹಕಾರಿ ಇಲಾಖೆಯು ಸುಧಾರಣೆ ಹೊಂದಲಿ ಎಂಬ ಉದ್ದೇಶದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಸಹಕಾರಿ ಕ್ಷೇತ್ರದಲ್ಲಿ ಯಾವುದೇ ಪಕ್ಷದ ರಾಜಕೀಯ ಜನರಿದ್ದರೂ ಕೂಡ ಹಸ್ತಕ್ಷೇಪವಾಗುತ್ತದೆಂಬ ಪ್ರತೀತಿ ಇದೆ. ಈ ಮಾತನ್ನು ಎರಡೂ ಕಡೆಯ ಮಾನ್ಯ ಸದಸ್ಯರುಗಳು ಹೇಳಿದ್ದಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸಹಕಾರಿ ಕ್ಷೇತ್ರವನ್ನು ಬಿಟ್ಟರೆ ಅವರಿಗೆ ಬೇರೆ ಏನು ಇದೆ?

ಶ್ರೀ ಎಂ.ಹೆಚ್. ಬೆಕಿನಾಳ್ಕರ್.—ಇವತ್ತಿನ ದಿವಸ ಕಾಲ ಬದಲಾಗಿದೆ. ಹಿಂದೆ ದೊಡ್ಡ ಕುರ್ಚಿ ಮೇಲೆ ಕುಳಿತರೆ ಓಟು ಹಾಕುತ್ತಿದ್ದರು. ಆದರೆ ಇಂದು ಜನರ ಜೊತೆಯಲ್ಲಿರತಕ್ಕ ಸಂಪರ್ಕ ನೋಡಿ ಮತ ಚಲಾಯಿಸುತ್ತಾರೆ. ಸೊಸೈಟಿಯ ಅಧ್ಯಕ್ಷನಾದ ಮಾತ್ರಕ್ಕೆ ಯಾರೂ ಆತನಿಗೆ ಮತ ಚಲಾಯಿಸುವುದಿಲ್ಲ. ಅದಕ್ಕೋಸ್ಕರ, ಯಾವುದೇ ಪಕ್ಷಕ್ಕೆ ಸೇರಿದ ಸದಸ್ಯರಿಗೂ ಸಹಕಾರಿ ರಂಗದಲ್ಲಿ ಸ್ಥಾನ ಇಲ್ಲ ಎಂದು ಕಾಯಿದೆ ಮಾಡಬೇಕೆಂಬ ಸೂಚನೆ ಕೊಡಬಯಸುತ್ತೇನೆ. ಕೋ-ಆಪರೇಟೀವ್ ಅರ್ಬನ್ ಬ್ಯಾಂಕುಗಳು ಏನಿವೆ ಅಲ್ಲಿ ಕ್ಲೀಯರೆನ್ಸ್ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾದರೆ ಸಾಲಗಾರರು ನೋಂದಾಯಿಸಬೇಕೆಂಬುದಾಗಿದೆ. ಹೀಗೆ ನೋಂದಾಯಿಸುವಾಗ ಅವರಿಗೆ 300 ರೂಪಾಯಿಗಳವರೆಗೆ ಖರ್ಚು ಬರುತ್ತದೆ. ಈ ದೃಷ್ಟಿಯಿಂದ, ಕಾಯಿದೆಯಲ್ಲಿ ಮಾರ್ಪಾಡು ಮಾಡಿ ಬಡ ರೈತರಿಗೆ (ಸಾಲಗಾರರಿಗೆ) ತೊಂದರೆಯಾಗದಂತೆ ಬ್ಯಾಂಕುಗಳಲ್ಲಿ ಸಾಲ ಬಾಕಿ ಇಲ್ಲ ಎಂದು ಕ್ಲಿಯರೆನ್ಸ್ ಸರ್ಟಿಫಿಕೇಟ್ ಕೊಟ್ಟರೆ ಸಾಕು, ಅದಕೋಸ್ಕರವಾಗಿ ನೋಂದಾಯಿಸಬೇಕಾಗಿಲ್ಲವೆಂದು ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಮಾನ್ಯ ಬೊಮ್ಮಾಯಿಯವರು ಮಾತನಾಡುತ್ತಾ ಮಾನ್ಯ ಮಂತ್ರಿಗಳ ಭಾವ ಬಿನ್ನಿ ಏಜೆಂಟ್ ಆಗಿದ್ದಾರೆ ಎಂದು ಹೇಳಿದರು.

ಶ್ರೀ ಎಸ್.ಆರ್. ಬೊಮ್ಮಾಯಿ.—ಇಲ್ಲ, ಇಲ್ಲ, ನಾನು ಹೇಳಿಲ್ಲ.

ಶ್ರೀ ಎಂ.ಹೆಚ್. ಬೆಕಿನಾಳ್ಕರ್.—ಒಟ್ಟಿನಲ್ಲಿ ಈ ಮನೆಯಲ್ಲಿ ಆ ವಿಚಾರ ಬಂತು. ಅಂಥದ್ದೇನಾದರೂ ಇದ್ದರೆ ಅದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹೆಚ್.ಡಿ. ದೇವೇಗೌಡ. (ಹೊಳೇನರಸೀಪುರ) — ಅಧ್ಯಕ್ಷರೇ, ಈ ಸಹಕಾರ ಇಲಾಖೆಯ ಬಗ್ಗೆ ಮಾತನಾಡಬೇಕೆಂದು ನಾನು ಸಿದ್ಧತೆ ಮಾಡಿಕೊಂಡು ಬಂದಿಲ್ಲ. ಮಾನ್ಯ ನಾಣಯ್ಯನವರು

ಮಾತನಾಡುತ್ತಾ, ಸಹಕಾರ ಇಲಾಖೆ ಕೆಲಸ ಮಾಡುತ್ತಿರುವ ಬಗ್ಗೆ ದೇವೇಗೌಡರು ಒಂದು ರೀತಿಯಾದ ತಪ್ಪು ಅಭಿಪ್ರಾಯ ಇಟ್ಟುಕೊಂಡಿದ್ದಾರೆಂದು ಹೇಳಿದರು. ಕಾರಣ, ನಾನು ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ಅಧ್ಯಕ್ಷನಾಗಿ ಒಂದೆರಡು ವರದಿಗಳನ್ನು ಕೊಟ್ಟಿ ಅದರ ಆಧಾರದ ಮೇಲೆ ಅವರ ಆ ರೀತಿ ಹೇಳಿರಬಹುದು.

ಶ್ರೀ ಎಂ.ಸಿ. ನಾಣಯ್ಯ.—ನಾನು ತಪ್ಪು ಮನೋಭಾವನೆಯಿಂದ ಹೇಳಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ಅದರ ಬಗ್ಗೆ ಈಗ ವಾದ ಬೇಡ. ಈ ಸಂದರ್ಭದಲ್ಲಿ ನಾನು ೨-೩ ಪ್ರಮುಖವಾದ ವಿಚಾರಗಳನ್ನು ಮಾತ್ರ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಈ ಒಂದು ಇಲಾಖೆಯ ಆಡಳಿತ ಏನಿದೆ ಅವನ್ನು ಸರಿಪಡಿಸುವುದಕ್ಕೆ ಸಂಬಂಧಪಟ್ಟ ಸಚಿವರು ಶ್ರಮ ಪಡಬೇಕಾಗುತ್ತದೆ. ಅದಕ್ಕೆ ಯಾವ ಕಾರಣಗಳಿಂದ ದೋಷ ಬಂದಿದೆ ಎಂಬುದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ, ಸಾಕಷ್ಟು ಶ್ರಮಪಡಬೇಕಾಗುತ್ತದೆಂಬ ಮಾತನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಅದರಲ್ಲಿಯೂ ವ್ಯವಸಾಯವನ್ನೇ ಅವಲಂಬಿಸಿರತಕ್ಕ ಜನರು ಯಾರಿದ್ದಾರೆ ಅವರಿಗೆ, ಈ ಸಹಕಾರ ಇಲಾಖೆ ಸರಿಯಾಗಿ ಕೆಲಸ ಮಾಡದಿದ್ದರೆ ವರವಾಗಿ ಪರಿಣಮಿಸುವುದಕ್ಕೆ ಬದಲಾಗಿ ಶಾಪವಾಗಿ ಪರಿಣಮಿಸುತ್ತದೆಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

ಇನ್ನು ಮುಂದೆ ರೈತರಿಗೆ ಯಾವುದೇ ರೂಪದಲ್ಲಿ ಖಾಸಗೀ ಸಾಲ ಸಿಗುವುದಿಲ್ಲ. ಏಕೆಂದರೆ ಖಾಸಗಿ ಜನರು ಸಾಲ ಕೊಡುವುದಿಲ್ಲ. ಆದ್ದರಿಂದ, ಈ ಬಗ್ಗೆ ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಇಲಾಖೆಯನ್ನು ಟೋನ್ ಅಪ್ ಮಾಡುವುದಕ್ಕೆ ಹೆಚ್ಚು ಶ್ರಮ ತೆಗೆದುಕೊಳ್ಳಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಹಿಂದಿನ ಮುಖ್ಯ ಮಂತ್ರಿಗಳು ಶಿವಮೊಗ್ಗದಲ್ಲಿ ಭಾಷಣ ಮಾಡುತ್ತಾ, ಸಹಕಾರ ಇಲಾಖೆಯಲ್ಲಿ ಇರತಕ್ಕ ಖದೀಮರುಗಳನ್ನೆಲ್ಲಾ ಹಿಡಿದು ಮಿಸಾದಲ್ಲಿ ಬಲಿ ಹಾಕುತ್ತೇವೆ ಎಂದು ಹೇಳಿದ್ದರು. ಈಗಿನ ಮುಖ್ಯಮಂತ್ರಿಗಳೂ ಅವರುಗಳನ್ನೂ ಬಲಿ ಹಾಕುತ್ತೇವೆಂದು ಸ್ವಲ್ಪ ಗಡುಸಾಗಿಯೇ ಹೇಳಿದ್ದಾರೆ.

ಶ್ರೀ ಆರ್. ಗುಂಡೂರಾವ್.—ನಾನು ಎಲ್ಲಿ ಹೇಳಿದೆ ?

ಶ್ರೀ ಹೆಚ್.ಡಿ. ದೇವೇಗೌಡ.—ತಾವು ತುಮಕೂರಿನಲ್ಲಿ ಭಾಷಣ ಮಾಡಿರುವುದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಮತ್ತೊಂದು ಕಡೆ ಭಾಷಣ ಮಾಡುವಾಗ ನಾನು ಮುಖ್ಯ ಮಂತ್ರಿಯಾಗಿ ಉಳಿಯಬೇಕಾಗಿದ್ದರೆ ೧೩೬ ಜನ ಎಂ.ಎಲ್.ಎ. ಗಳನ್ನು ಉಳಿಸಿಕೊಳ್ಳಬೇಕಾಗುತ್ತದೆ ಎಂದು ಹೇಳಿದ್ದೀರಿ.

ಶ್ರೀ ಆರ್. ಗುಂಡೂರಾವ್.—ನಾನು ಆ ರೀತಿ ಹೇಳಿರುವುದು ಜ್ಞಾಪಕವಿಲ್ಲ. ಒಂದು ವೇಳೆ ಹೇಳಿದ್ದರೂ ಯಾವುದೋ ಕಾಂಟೆಕ್ಸ್ಟ್‌ನಲ್ಲಿ ಹೇಳಿರಬಹುದು.

ಶ್ರೀ ಜೆ.ಹೆಚ್. ಪಟೇಲ್.—ಹಿಂದೆ ಕೆಲವರನ್ನು ಮೀಸಾದಲ್ಲಿ ಒಳಗೆ ಹಾಕಿದರು. ನಾನೂ ಮತ್ತು ದೇವೇಗೌಡರೂ ಜೈಲಿನಲ್ಲಿ ಇದ್ದೆವು. ಮಾನ್ಯ ದೇವೇಗೌಡರಿಗೆ ಸಂಬಂಧ ಇದೆಯೋ ಇಲ್ಲವೋ ಗೊತ್ತಿಲ್ಲ ನನಗೂ ಸೊಸೈಟಿಗಂತೂ ಸಂಬಂಧ ಇಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ನಾನೂ ಸೊಸೈಟಿಯಲ್ಲಿ ಕೆಲಸ ಮಾಡಿದ್ದೇನೆ. ಮಾನ್ಯ ಜೆ.ಹೆಚ್.ಪಟೇಲರಿಗೆ ಅದರ ಅನುಭವ ಇದೆಯೋ ಇಲ್ಲವೋ ಗೊತ್ತಿಲ್ಲ. ಬರೀ ಭಾಷಣ ಹೊಡೆಯುವ ಅನುಭವ ಮಾತ್ರ ಇದ್ದರೆ ಅದರಿಂದ ಏನೂ ಪ್ರಯೋಜನವಿಲ್ಲ. ನಾನು ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡಿದ್ದೇನೆ. ನಿಮ್ಮ ನಾಯಕರು ದೇವೇಗೌಡರನ್ನು ಹಿಡಿಯುವುದಕ್ಕೆ ಆಗುತ್ತದೇನೋ ಎಂದು ಹುಡುಕಿ ನೋಡಿದರು ಆದರೆ ಅವರ ಕೈಯಲ್ಲಿ ಆಗಲಿಲ್ಲ. ಆದ್ದರಿಂದ ಈ ವಿಷಯದ ಬಗ್ಗೆ ಹೆಚ್ಚು ವಾದವಿವಾದ ಬೇಡ, ಇಲ್ಲಿಗೇ ನಿಲ್ಲಿಸುವುದು ಒಳ್ಳೆಯದು. ನಾನು ಇಲಾಖೆಯಲ್ಲಿ ಎಲ್ಲವೂ ಸರಿಯಾಗಿಲ್ಲ ಎಂದು ಹೇಳಲಿಲ್ಲ ಕೆಲವು ಕಡೆ ಸರಿಯಾಗಿರಬಹುದು. ಆದರೆ ಬಹಳ ಕಡೆ ಖದೀಮರೇ ಇದ್ದಾರೆ. ಅವರನ್ನು ಬಲಿ ಹಾಕಬೇಕಾದ್ದು ಸರ್ಕಾರದ ಜವಾಬ್ದಾರಿ. ಇದು ಕೇವಲ ಒಂದು ರಾಜಕೀಯ ಪಕ್ಷಕ್ಕೇ ಸೀಮಿತವಾಗಿಲ್ಲ. ಆದರೆ ಯಾವುದಾದರೂ ನಿರ್ಣಯ ತೆಗೆದುಕೊಳ್ಳಬೇಕಾದರೆ ರಾಜಕೀಯ ಪ್ರಭಾವ ಬೀರುವ ಆಳುವ ಪಕ್ಷದವರ ಮಾತಿಗೆ ಪುರಸ್ಕಾರ ದೊರೆಯುತ್ತದೆ. ನಾನು. ಈ ಕಡೆ ಕುಳಿತಿರುವವರೆಲ್ಲಾ ಸರಿಯಾಗಿದ್ದಾರೆ, ಆ ಕಡೆ ಕುಳಿತಿರುವವರೆಲ್ಲಾ ಸರಿಯಿಲ್ಲ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಎಲ್ಲಾ ಕಡೆ ಅಂಥ ಜನ

ಇರುತ್ತಾರೆ. ಮೊನ್ನೆ ಮಂಡ್ಯದಲ್ಲಿ ಸಕ್ಕರೆ ಮಾರುವ ಕಾಳಸಂತೆ ವ್ಯಾಪಾರಿಯನ್ನು ಬಂಧಿಸಿದರು ಎಂದು ಪತ್ರಿಕೆಯಲ್ಲಿ ಓದಿದೆ. ಈ ತರಹ ಎಷ್ಟು ಜನ ಬೇಕು ? ಎಲ್ಲಾ ಕಡೆ ಇದ್ದಾರೆ. ನಾವು ಮೊದಲು ಸಹಕಾರ ಇಲಾಖೆಯನ್ನು ಚುರುಕುಗೊಳಿಸಬೇಕಾಗಿದೆ. ಇದಕ್ಕೆ ನಾವು ಹೆಚ್ಚು ಶ್ರಮ ವಹಿಸಬೇಕಾಗುತ್ತದೆ ಎಂದು ಮಾತ್ರ ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸದಸ್ಯರಾದ ನಾಣಯ್ಯನವರು ಮಾತನಾಡುತ್ತಾ. ದೇವೇಗೌಡರು ಸಣ್ಣಪುಟ್ಟ ವಿಷಯಗಳಿಗೆಲ್ಲಾ ಕಹಿಯಾಗಿ ಮಾತನಾಡುತ್ತಾರೆ ಎಂದು ಹೇಳುತ್ತಿದ್ದರು. ನಾನು ಏತಕ್ಕೆ ಆ ರೀತಿ ಮಾತನಾಡುತ್ತೇನೆ ಎಂಬುದನ್ನು ಅವರು ತಿಳಿದುಕೊಳ್ಳಬೇಕು. ನಮ್ಮ ಸರ್ಕಾರದಲ್ಲಿ ಹಣ ನಷ್ಟವಾಗುತ್ತಿದ್ದರೆ, ಪೋಲಾಗುತ್ತಿದ್ದರೆ ನೋಡಿಕೊಂಡು ಹೇಗೆ ಸುಮ್ಮನೆ ಕುಳಿತಿರುವುದಕ್ಕಾಗುತ್ತದೆ ? ಅದನ್ನು ಕೇಳುವುದು ತಪ್ಪೇ ? ೧೯೭೬-೭೭ರ ಆಡಿಟ್ ರಿಪೋರ್ಟನ್ನು ನೋಡಿದರೆ ಗೊತ್ತಾಗುತ್ತದೆ ೪೧ ಸರ್ಕಲ್‌ಗಳಲ್ಲಿ ೪೪೦ ಸಹಕಾರೀ ಸಂಸ್ಥೆಗಳಿದ್ದು ಸರ್ಕಾರ ಷೇರ್ ಕ್ಯಾಪಿಟಲ್ ರೂಪದಲ್ಲಿ ೩೦೬ ೭೫ ಲಕ್ಷ ರೂಪಾಯಿಗಳನ್ನು ಹೂಡಿದ್ದರೆ ಎಲ್ಲಾ ಸಂಸ್ಥೆಗಳೂ ನಷ್ಟದಲ್ಲಿ ಕೆಲಸ ಮಾಡುತ್ತವೆಂದು ವರದಿಯಲ್ಲಿ ಹೇಳಿದ್ದಾರೆ. ೧೯೭೩-೭೪ರಲ್ಲಿ ೧೨೪.೫೮ ಲಕ್ಷ ರೂಪಾಯಿ, ೧೯೭೪-೭೫ರಲ್ಲಿ ೧೩೬.೫೬ ಲಕ್ಷ ರೂಪಾಯಿ. ಮತ್ತು ೧೯೭೫-೭೬ರಲ್ಲಿ ೧೨೪.೮೮ ಲಕ್ಷ ರೂಪಾಯಿ ಹಣ ಮೇಲ್ಕಂಡ ಸಂಸ್ಥೆಗಳಲ್ಲಿ ನಷ್ಟವಾಗಿದೆ ಎಂದು ವರದಿಯಲ್ಲಿ ಹೇಳಿದ್ದಾರೆ. ಇಲ್ಲಿ ಬಂಡವಾಳ ಹೂಡಿರುವವರು ಯಾರು ? ಸರ್ಕಾರ ಹೂಡಿದೆ. ಸರ್ಕಾರ ಹೂಡಿದೆ ಎಂದರೆ ಅದು ನಮ್ಮ ದುಡ್ಡು. ಇದೇ ರೀತಿ ಅನೇಕ ಸಂಸ್ಥೆಗಳಲ್ಲಿ ಸರ್ಕಾರ ಹೂಡಿರುವ ಬಂಡವಾಳಗಳು ಕರಗಿ ಹೋಗುತ್ತಿದೆ. ಆದ್ದರಿಂದ ಸರ್ಕಾರ ಈ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಾಲ ವಿತರಣೆ ವ್ಯವಸ್ಥೆಯಲ್ಲಿ ಸರಿಯಾದ ಮಾರ್ಪಾಟು ಮಾಡಬೇಕಾಗುತ್ತದೆ. ಎಲ್ಲಾ ಸಹಕಾರ ಸಂಸ್ಥೆಗಳಲ್ಲಿ ಸರಿಯಾದ ರೀತಿಯಲ್ಲಿ ಸಾಲ ವಿತರಣೆ ವ್ಯವಸ್ಥೆ ಇಲ್ಲ. ಉದಾಹರಣೆಗೆ ಹೇಳುವುದಾದರೆ ನನ್ನ ತಾಲ್ಲೂಕಿನಲ್ಲಿ ಸುಮಾರು ಎರಡು ಹೋಬಳಿಗಳನ್ನು ವಾಣಿಜ್ಯ ಬ್ಯಾಂಕಿಗೆ ಅಟ್ಯಾಚ್ ಮಾಡಿದ್ದಾರೆ. ಒಂದು ಹೋಬಳಿಗೆ ಡಿ ಸಿ.ಸಿ. ಬ್ಯಾಂಕಿನವರು ಸಾಲ ವಿತರಣೆ ಮಾಡುತ್ತಾರೆ. ಅವರು ಹಾಕತಕ್ಕ ಬಡ್ಡಿಗೂ ಇವರು ಹಾಕತಕ್ಕ ಬಡ್ಡಿಗೂ ಒಂದೂವರೆ ಪರ್ಸೆಂಟ್ ವ್ಯತ್ಯಾಸ ಇದೆ. ಏರಿಯಾ ಅಲಾಟ್ ಮಾಡುವಾಗ ರೈತರನ್ನು ಕೇಳಿ ಮಾಡಿಲ್ಲ. ಅವರೇ ಅಲಾಟ್ ಮಾಡಿದ್ದಾರೆ ಎರಡು ಸಂಸ್ಥೆಗಳಲ್ಲಿ ಸಮನ್ವಯವಾದ ಏಕರೂಪವಾದ ವ್ಯವಸ್ಥೆ ಇಲ್ಲ. ಈ ರೀತಿಯ ಪರಿಸ್ಥಿತಿ ರಾಜ್ಯದ ಎಲ್ಲಾ ಕಡೆ ಇದೆ. ವಾಣಿಜ್ಯ ಬ್ಯಾಂಕುಗಳಿಂದ ಯಾರು ಸಾಲತೆಗೆದುಕೊಳ್ಳುತ್ತಾರೋ ಆ ಜನ ಒಂದೂವರೆ ಪರ್ಸೆಂಟ್ ಹೆಚ್ಚು ಬಡ್ಡಿಯನ್ನು ಯಾವ ತಪ್ಪಿಗೋಸ್ಕರ ಕೊಡಬೇಕು? ಈ ರೀತಿಯ ಪರಿಸ್ಥಿತಿ ಎಲ್ಲಾಕಡೆ ಇದೆ. ಈ ಬಗ್ಗೆ ೫-೧೦ ನಿಮಿಷದಲ್ಲಿ ಚರ್ಚೆಮಾಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ ಸ್ವಲ್ಪ ತಲೆ ಕೆಡಿಸಿಕೊಳ್ಳಬೇಕಾಗುತ್ತದೆ. ಹಿಂದೆ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ದೇವರಾಜ ಅರಸ್ ಅವರು ಒಂದು ಕಡೆ ಭಾಷಣ ಮಾಡುವಾಗ ರಿಸರ್ವ್ ಬ್ಯಾಂಕ್ ಕೊಡತಕ್ಕ ಸಾಲಕ್ಕೂ ಬಾರೋಯರ್‌ಗೆ ಹಾಕತಕ್ಕ ಬಡ್ಡಿಗೂ ನಾಲ್ಕೂವರೆ ಪರ್ಸೆಂಟ್ ಬಡ್ಡಿ ಕಡಿಮೆ ಮಾಡುವುದಕ್ಕೆ ಸಾಧ್ಯವಿದೆಯೋ ಎಂಬುದನ್ನು ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದರು ಆ ರೀತಿಯಾಗಿ ಮಾಡುವುದಕ್ಕೆ ಏಕೆ ಸಾಧ್ಯವಾಗಲಿಲ್ಲ ಎಂಬುದನ್ನು ತಾವೇ ಯೋಚನೆ ಮಾಡಿ 'Three tire System' ಮಾಡಬೇಕೆಂದು ಮಾನ್ಯ ನಾಣಯ್ಯನವರು ಹೇಳಿದರು. ಆದರೆ ಅದು ಬೇಕಾಗಿಲ್ಲ. ನೇರವಾಗಿ ರೈತ ಕಮರ್ಷಿಯಲ್ ಬ್ಯಾಂಕಿನಿಂದ ಅಥವಾ ಡಿ ಸಿ.ಸಿ. ಬ್ಯಾಂಕಿನಿಂದ ಸಾಲ ಪಡೆಯತಕ್ಕ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಿಲ್ಲವೆ ? ನಾನು ಮುಖ್ಯ ಮಂತ್ರಿಗಳ ಜೊತೆ ಸಮಾಲೋಚನೆ ಮಾಡುವಾಗ ಈ ಮಾತನ್ನು ಹೇಳಿದೆ. ಅಧಿಕಾರಿಗಳು ಇದನ್ನು ಒಪ್ಪಬಹುದು, ಒಪ್ಪದೇ ಇರಬಹುದು. ನಾನು ರೈತನಾಗಿ ನನ್ನ ಅನುಭವನ್ನು ಹೇಳುತ್ತೇನೆ. ಪ್ರತಿಯೊಬ್ಬ ರೈತನಿಗೂ ಪಟ್ಟಾ ಕೊಡಬೇಕೆಂದು ನಿರ್ಣಯ ಮಾಡಿದ್ದೀರಿ. ಹಿಂದಿನ ಕಂದಾಯ ಮಂತ್ರಿಗಳಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಪ್ರತಿಯೊಬ್ಬರಿಗೂ ಪಟ್ಟಾ ಕೊಡುತ್ತೇವೆಂದು ಭಾಷಣ ಮಾಡಿದರು. ೧೦ ಎಕರೆ ಭೂಮಿ ಇದ್ದರೆ ಮಾರ್ಕೆಟ್ ವ್ಯಾಲ್ಯೂ ೨ ಲಕ್ಷ ರೂಪಾಯಿ ಆದರೆ ಪಟ್ಟಾದಲ್ಲಿ ಒಂದು ಕಡೆ ಮಾರ್ಕೆಟ್ ವ್ಯಾಲ್ಯೂ ಹಾಕಿ ಇನ್ನೊಂದು ಕಡೆ ಬಾರೋಯಿಂಗ್ ಕೆಪಾಸಿಟಿ ಹಾಕಿ. ಮಾರ್ಕೆಟ್ ವ್ಯಾಲ್ಯೂ ಹಾಕಿ ಬಾರೋಯಿಂಗ್ ಕೆಪಾಸಿಟಿ ಇಷ್ಟು ಎಂದು ಲಿಮಿಟ್ ಮಾಡಬಹುದು. ಆ ರೀತಿ ಪಟ್ಟಾದಲ್ಲಿ ಹಾಕಿದರೆ ಅದನ್ನು ರೈತ ಬ್ಯಾಂಕ್ ಮುಂದೆ ತೆಗೆದು ಕೊಂಡು ಹೋಗಿ ಕೊಟ್ಟರೆ ಅವರು ಸಾಲ ಕೊಡುತ್ತಾರೆ. ಉದಾಹರಣೆಗೆ ಕಬ್ಬು ಹಾಕಬೇಕಾದರೆ ಅವನು ಎಷ್ಟು ಎಕರೆಗೆ ಹಾಕುತ್ತಾನೆ ಅದರ ಖರ್ಚು ಎಷ್ಟು ಬೀಳುತ್ತದೆ ಎಂಬುದರ ಬಗ್ಗೆ ಲೆಕ್ಕಾಚಾರ ಮಾಡಲು ಒಂದು ಟೇಬಲ್ ಇದೆ. ಆ ಪ್ರಕಾರ ಲೆಕ್ಕ ಹಾಕಿ ಡಿಕ್ಲರೇಷನ್ ಫಾರಂ ಭರ್ತಿ ಮಾಡಿ, ರೈತ ಆ ಫಾರಂಅನ್ನು ಬ್ಯಾಂಕ್ ಮ್ಯಾನೇಜರ್‌ಗೆ ಕೊಟ್ಟರೆ ಬಾರೋಯಿಂಗ್ ಕೆಪಾಸಿಟಿ

೩ ಸಾವಿರ ರೂಪಾಯಿ ಇದ್ದರೆ ಅಷ್ಟು ಹಣವನ್ನು ಮ್ಯಾನೇಜರ್ ಸ್ಯಾಂಕ್ಷನ್ ಮಾಡುತ್ತಾರೆ. ಎರಡು ಡಿಕ್ಲರೇಷನ್ ಫಾರಂಗಳನ್ನು ಕೊಡುವಂತೆ ಮಾಡಿ, ಒಂದು ಫಾರಂ ಅನ್ನು ಬ್ಯಾಂಕಿನಲ್ಲಿಟ್ಟುಕೊಂಡು ಇನ್ನೊಂದು ಫಾರಂ ಅನ್ನು ಕೃಷಿ ಇಲಾಖೆಗೆ ಕಳುಹಿಸುವ ವ್ಯವಸ್ಥೆ ಇರಬೇಕು. ಒಂದು ವೇಳೆ ಏನಾದರೂ ಯಾರಾದರೂ ದುರುಪಯೋಗ ಮಾಡಿದರೆ ಅವನನ್ನು ಕಾನೂನಿಕ ಚೌಕಟ್ಟಿನಲ್ಲಿ ಶಿಕ್ಷೆ ಮಾಡಬಹುದು. ಅದಕ್ಕೆ ಬೇಕಾದರೆ ಶಾಸನ ಮಾಡೋಣ. ಅದಕ್ಕೇನು ಮಧ್ಯವರ್ತಿ ಜನರು ಬೇಕಾಗಿಲ್ಲ. ಬ್ಯಾಂಕಿನಲ್ಲಿ ಒಡವೆ ಇಟ್ಟರೆ ಹಣ ತೆಗೆದುಕೊಳ್ಳಬಹುದು. ಆದರೆ ಅದೇ ರೀತಿ ಭೂಮಿಗೆ ಬೆಲೆ ಇಲ್ಲ ಆದ್ದರಿಂದ ಭೂಮಿ ಎಷ್ಟಿದೆ ನೋಡಿ ಮಾರ್ಕೆಟ್ ವ್ಯಾಲ್ಯೂ ಫಿಕ್ಸ್ ಮಾಡಿ ಬಾರೋಯಿಂಗ್ ಕೆಪಾಸಿಟಿ ಫಿಕ್ಸ್ ಮಾಡಿ.........

ಶ್ರೀ ಬಿ. ಭಾಸ್ಕರನಾಯ್ಡು.—ಸ್ವಾಮಿ ೬ ಗಂಟೆ ಆಯಿತು. ನಾಳೆ ಮಾತನಾಡಲಿ.

ಅಧ್ಯಕ್ಷರು. ಇಲ್ಲ, ಮುಗಿಸಿಬಿಡಲಿ.

೭-೦೦ ಪಿ. ಎಂ.

ಶ್ರೀ ಹೆಚ್. ಡಿ. ದೇವೇಗೌಡ.—ನಮ್ಮ ಅನುಭವದ ಮೇಲೆ ದೋಷಗಳನ್ನು ತಿದ್ದುವುದಕ್ಕೆ ಪ್ರಯತ್ನ ಮಾಡಬೇಕು. 'Two tier system' ಮಾಡಿ. Three-four tier system ಬೇಡ. ನಾವೆಲ್ಲ ಕುಳಿತು ಚರ್ಚೆ ಮಾಡೋಣ. ರೈತನು ನೇರವಾಗಿ ಬ್ಯಾಂಕಿಗೆ ಹೋಗಿ ಸಾಲ ತೆಗೆದುಕೊಳ್ಳುವ ವ್ಯವಸ್ಥೆ ಇರಬೇಕು. ವಾಣಿಜ್ಯ ಬ್ಯಾಂಕುಗಳಿಂದ ಸಾಲ ತೆಗೆದುಕೊಳ್ಳುವಾಗ ಶೇಕಡ ಇಂತಿಷ್ಟು ಮರು ಪಾವತಿಯಾದರೆ ಸಾಲ ಕೊಡುವ ವ್ಯವಸ್ಥೆ ಇದೆ. ಆದರೆ, ಜಿಲ್ಲಾ ಕೇಂದ್ರ ಬ್ಯಾಂಕುಗಳಲ್ಲಿ ಮತ್ತು ಪ್ರಾಥಮಿಕ ಸಂಘಗಳಲ್ಲಿ ಶೇಕಡ ೬೦-೭೦ರಷ್ಟು ಸಾಲ ಮರುಪಾವತಿಯಾಗುತ್ತಿದ್ದರೂ borrowing capacity ಕಳೆದುಕೊಳ್ಳುವುದರಿಂದ ಸಾಲ ಸಿಗುವುದಿಲ್ಲ, ಇದೇನು ಹೊಸದಲ್ಲ. ಸರ್ಕಾರ ಇದರ ಬಗ್ಗೆ ಆಳವಾಗಿ ಅಭ್ಯಾಸ ಮಾಡಬೇಕಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ರೈತರಿಗೆ ಸಾಲ ಕೊಡುವ ಪದ್ಧತಿ ಬದಲಾವಣೆಯಾಗಬೇಕೆಂದು ನಾವು ಹಲವಾರು ಸಲ ಈ ಸಭೆಯಲ್ಲಿ ಚರ್ಚೆ ಮಾಡಿದ್ದೇವೆ. ಇದಕ್ಕೆ ಸರ್ಕಾರ ಕೂಡ ಒಪ್ಪಿಕೊಂಡಿದೆ. 'Credit card system introduce ಮಾಡಬೇಕಾಗಿದೆ. ರೈತನಿಗೆ ಆತನ ಬಳಿಯಿರುವ ಜಮೀನಿನ ಆಧಾರದ ಮೇಲೆ, ಅಂದರೆ, ಹತ್ತು ಎಕರೆಗೆ ಇಷ್ಟು ಅಥವ ೨೦ ಎಕರೆಗೆ ಇಷ್ಟು ಎಂದು ಸಾಲ ಕೊಡುವ ವ್ಯವಸ್ಥೆಯಾಗಬೇಕು. ಕಾರ್ಡು ಆಧಾರದ ಮೇಲೆ ರೈತ ಸಾಲ ತೆಗೆದುಕೊಂಡು ಮಾಲು ಮಾರಾಟವಾದ ಮೇಲೆ ಬಂದ ಹಣದಿಂದ ಅದನ್ನು ಜಮಾ ಮಾಡುವಂತೆ ಮಾಡಿದರೆ ರೈತನು ಸಹಕಾರ ಸಂಘಗಳ ಅಥವಾ ಅಧಿಕಾರಿಗಳ ಬೆನ್ನತ್ತುವ ಅವಶ್ಯವಿರುವುದಿಲ್ಲ. ರೈತನ ಆಸ್ತಿಯ ಬಗ್ಗೆ records of righ ತರಿಸಿಕೊಂಡು, 'credit card system' introduce ಮಾಡಲಾಗುವುದೆಂದು ಸರ್ಕಾರ ಹಿಂದೆ ಭರವಸೆ ಕೊಟ್ಟಿತ್ತು. ಆದುದರಿಂದ, ಈ ಪದ್ಧತಿಯನ್ನು ದಯವಿಟ್ಟು ಜಾಗ್ರತೆ ಜಾರಿಗೆ ತನ್ನಿ ಎಂದು ಹೇಳುತ್ತೇನೆ.

ಶ್ರೀ. ಹೆಚ್. ಡಿ. ದೇವೇಗೌಡ.—ಅದನ್ನು ಬೇಕಾದರೆ 'Pass-book system' ಎಂದು ಕರೆಯಬಹುದು. ಅದರ ಬಗ್ಗೆ ಅಧಿಕಾರಿಗಳೊಡನೆ ಕುಳಿತು ವಿವರವಾಗಿ ಚರ್ಚೆ ಮಾಡೋಣ. ಇಂತಹ ಪದ್ಧತಿಗಳನ್ನು ಜಾರಿಗೊಳಿಸುವಾಗ ಕೆಲವು ಅಡ್ಡಿ ಅಡಚಣೆಗಳು ಬರುತ್ತವೆ. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ಇದನ್ನು ಸುಲಭೀಕರಣ ಮಾಡುವುದಕ್ಕೆ ಸಾಧ್ಯವಿದೆ. ಎಲ್ಲ ರೈತರೂ ಸಾಲಕ್ಕಾಗಿ ಅರ್ಜಿ ಹಾಕಿದರೆ. ಈ ಪದ್ಧತಿಯಲ್ಲಿ ಸಾಲ ಹಂಚಲು ಸುಮಾರು ನೂರು ಕೋಟಿ ರೂಪಾಯಿಗಳಾದರೂ ಬೇಕಾಗುತ್ತದೆ. ಆದುದರಿಂದ, ಇದು ಸಾಧ್ಯವಿಲ್ಲವೆಂದು ಹೇಳುವುದಾದರೆ, ರೈತರಿಗೆ ಸಾಲ ಕೊಡುವ ವಿಚಾರದಲ್ಲಿ 30% co-operative sector ನಲ್ಲಿ ಕವರ್ ಆಗುತ್ತಿದೆ. ಇದನ್ನು ತಾವು ನೋಡಬೇಕು. ಕಳೆದ ವರ್ಷದ ಆಧಾರದ ಮೇಲೆ ಸುಮಾರು ಅರವತ್ತು ಕೋಟಿ ರೂಪಾಯಿಗಳ ಸಾಲ ಹಂಚಿದರೆ ಮತ್ತು borrowing c pacity ಅನ್ನು ೨೫ ಪರ್ಸೆಂಟ್‌ಗೆ ಲಿಮಿಟ್ ಮಾಡಿದರೆ ಆಗ ನಿಮಗೆ ಸಾಲ ಕೊಡುವ ಶಕ್ತಿ ಬರುತ್ತದೆ. ಈ ಸಲಹೆಯನ್ನು ನಾನು ಸರ್ಕಾರದ ಮುಂದಿಡುತ್ತಿದ್ದೇನೆ. ಇದನ್ನು ಜಾರಿಗೆ ತಂದರೆ ಬಡ್ಡಿ ದರ ವಿಧಿಸುವುದರಲ್ಲಿರುವ three tier system ಅನ್ನು ಕೂಡ ಕಡಿಮೆ ಮಾಡುವುದಕ್ಕೆ ಸಾಧ್ಯವಿದೆ.

ಇನ್ನು, ಸಹಕಾರ ಸಂಘಗಳನ್ನು ಏನು ಪುನರ್ಸಂಘಟನೆ ಮಾಡಿದ್ದಾರೆ ಅದನ್ನು ಒಳ್ಳೆಯ ಉದ್ದೇಶದಿಂದ ಮಾಡಿರಬಹುದು. ಆ ವಾದ ವಿವಾದಕ್ಕೆ ನಾನು ಈಗ ಹೋಗುವುದಿಲ್ಲ. ಆದರೆ, ಈ ಪುನರ್ ಸಂಘಟನೆಯಿಂದ ಯಾವುದೇ ನಿರೀಕ್ಷಿತ ಲಾಭ ಬಂದಿಲ್ಲ; ಪ್ರತಿಫಲ ಸಿಕ್ಕಿಲ್ಲ.

ಶ್ರೀ ಎಂ. ಸಿ. ಬಸಪ್ಪ.—ಬರೀ ರಾಜಕೀಯವಾಯಿತು.

ಶ್ರೀ ಹೆಚ್. ಡಿ. ದೇವೇಗೌಡ.—ಆ ರೀತಿ ಮಾಡಿದ್ದರಿಂದ ಸಮಾಧಾನವಾಯಿತೆಂದು ತಿಳಿದುಕೊಂಡರು. ಆದರೆ, ನಿಜವಾಗಲೂ ಸಮಾಧಾನವಾಗಿಲ್ಲ. ಕೈ ಸುಟ್ಟುಕೊಂಡು ಮನೆಗೆ ಹೋದರು. ಕಳೆದ ಇಪ್ಪತ್ತು-ಮೂವತ್ತು ವರ್ಷಗಳಿಂದ ಚೆನ್ನಾಗಿ ಕೆಲಸ ಮಾಡಿ, ಹತ್ತಾರು ಲಕ್ಷ ರೂಪಾಯಿಗಳ ವ್ಯವಹಾರ ಮಾಡುತ್ತಿದ್ದ ಮತ್ತು ಕಛೇರಿ ಹಾಗೂ ದಾಸ್ತಾನು ಮಳಿಗೆ ಹೊಂದಿದ್ದ ಸಹಕಾರ ಸಂಘವನ್ನು ಮೊನ್ನೆ ದಿವಸ ರಿಜಿಸ್ಟರ್ ಆದ ಸಂಘವೊಂದಕ್ಕೆ tag-on ಮಾಡಿದ್ದಾರೆ. ಆದುದರಿಂದ, ದಯವಿಟ್ಟು ಇಂತಹ ಕಡೆಗಳಲ್ಲಿ ಮರು ಪುನರ್‌ಸಂಘಟನೆ ಮಾಡಿ ಚೆನ್ನಾಗಿ ನಡೆಯುತ್ತಿರುವ ಸಂಘಗಳಿಗೆ ಉತ್ತೇಜನ ಕೊಡಿ. ಕನಿಷ್ಠ ಪಂಚಾಯತಿಗೊಂದು ಸಹಕಾರ ಸಂಘವಿರಬೇಕು. ಸೀಮೆ ಎಣ್ಣೆ, ಸಕ್ಕರೆ ಮ ಂತಹ ಅಗತ್ಯ ವಸ್ತುಗಳನ್ನು ಹಂಚುವುದಕ್ಕಾಗಿ ಎಪ್ಪತ್ತು ಲಕ್ಷ ಪಡಿತರ ಚೀಟಿಗಳನ್ನು ಮುದ್ರಿಸಿ ಎಲ್ಲ ಊರುಗಳಿಗೂ ಹಂಚಲಾಗುವುದೆಂದು ಮಾನ್ಯ ಆಹಾರ ಸಚಿವರು ತಿಳಿಸಿದ್ದಾರೆ. ಇದನ್ನು ಮಾಡುವುದಕ್ಕೆ ಹೊರಟ ಮೇಲೆ ಪ್ರತಿಯೊಂದು ಪಂಚಾಯತಿಯಲ್ಲೂ ಒಂದೊಂದು ಸಂಘವಿದ್ದರೆ, ಗ್ರಾಮಾಂತರ ಪ್ರದೇಶಗಳ ಜನರು ಈ ಯೋಜನೆಯ ಲಾಭ ಪಡೆಯುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ, ಹೆಚ್ಚು ಕಾಲ ವಿಳಂಬ ಮಾಡದೆ, ಎಲ್ಲ ಗ್ರಾಮ ಪಂಚಾಯತಿಗಳಲ್ಲೂ ಒಂದೊಂದು ಸಂಘವಿರುವ ಹಾಗೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು, ಕ್ರಮಪಡಿಸಿದ ಮಾರುಕಟ್ಟೆಗಳ ಬಗ್ಗೆ ಒಂದು ಸಮಿತಿಯನ್ನು ಮಾಡಲಾಗುವುದೆಂದು ಕಳೆದ ವರ್ಷ ಹೇಳಲಾಗಿತ್ತು. ಅವುಗಳ ವ್ಯವಸ್ಥೆ ಬಗ್ಗೆ ನಾವು ಕಟುವಾದ ನಿಲುವನ್ನು ತಾಳಿದ ಸಂದರ್ಭದಲ್ಲಿ ಹಿಂದಿನ ಮುಖ್ಯ ಮಂತ್ರಿಗಳು ಈ ರೀತಿ ಹೇಳಿದ್ದರು. ಆದರೆ, ಅವರು ಸಮಿತಿಯನ್ನು ಮಾಡಲಿಲ್ಲ. ಏಕೆ ಮಾಡಲಿಲ್ಲವೆನ್ನುವುದು ನಮಗೆ ಗೊತ್ತಾಗಲಿಲ್ಲ. ಅವರಿಗೆ ಬಹುಶಃ ಕಾಲ ಸಿಕ್ಕಲಿಲ್ಲವೋ ಏನೋ. ಮಾನ್ಯ ಜಕನೂರ್ ಅವರು ಈ ಸಭೆಯಲ್ಲಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳೂ ಇಲ್ಲಿದ್ದಾರೆ. ತಾವು ಆ ಜಾಗದಲ್ಲಿ ಕುಳಿತಂಥ ಸಂದರ್ಭದಲ್ಲಿ ನೂರಾರು ಸಮಸ್ಯೆಗಳು ಮತ್ತು ಒತ್ತಡಗಳು ಬರುತ್ತವೆ. ಅಧಿಕಾರಿಗಳು ಹೇಳುವುದನ್ನು ಕೇಳುವುದರ ಜೊತೆಗೆ ನಾವು ಹೇಳುವುದನ್ನೂ ಸ್ವಲ್ಪ ಕೇಳಿ. ಅಧಿಕಾರಿಗಳು ಐ.ಎ.ಎಸ್. ಓದಿಕೊಂಡು ಬಂದಿರಬಹುದು. ಆದರೆ, ನಾವು ಹಳ್ಳಿಯ ಐ.ಎ.ಎಸ್. ಅನ್ನು ಓದಿಕೊಂಡು ಬಂದಿದ್ದೇವೆ. ರಾಜ್ಯದಲ್ಲಿ ಅನೇಕ ಕಡೆ ಕ್ರಮಪಡಿಸಿದ ಮಾರುಕಟ್ಟೆಗಳನ್ನು ನಿರ್ಮಿಸಲಾಗಿದೆ. ಆ ರೀತಿ ಮಾರುಕಟ್ಟೆಗಳನ್ನು ನಿರ್ಮಿಸುವ ಮೊದಲು ಸರ್ವೆ ಮಾಡಲಾಗಿದೆಯೆ? ಎಷ್ಟು ರೀತಿಯ ಆಹಾರ ಪದಾರ್ಥಗಳು ಬರುತ್ತವೆ ಮತ್ತು ಯಾವ ಪ್ರಮಾಣದಲ್ಲಿ ಬರುತ್ತವೆ ಎನ್ನುವುದರ ಬಗ್ಗೆ ಸಮೀಕ್ಷೆ ಮಾಡಲಾಗಿದೆಯೆ? ಕೆಲವು ಕ್ರಮಪಡಿಸಿದ ಮಾರುಕಟ್ಟೆ ಕಟ್ಟಡಗಳಲ್ಲಿ ಕತ್ತೆಗಳು ಹೋಗಿ ನಿಲ್ಲುತ್ತಿವೆ.

ಶ್ರೀ ಕೆ. ಪ್ರಭಾಕರ್.—ಅವುಗಳಿಗಾದರೂ ಉಪಯೋಗವಾಯಿತಲ್ಲ!

ಶ್ರೀ ಹೆಚ್. ಡಿ. ದೇವೇಗೌಡ.—ಕೆಲವು ಮಾರುಕಟ್ಟೆಗಳಲ್ಲಿ ಭಿಕ್ಷುಕರು ವಾಸ ಮಾಡುತ್ತಿದ್ದಾರೆ, ಮಾನ್ಯ ಬಸಪ್ಪನವರ ಜಿಲ್ಲೆಯ ಕೆ.ಆರ್. ನಗರದಲ್ಲಿ ಕಟ್ಟಿರುವ ಮಾರುಕಟ್ಟೆಗೆ ಕಳೆದ ಆರೇಳು ವರ್ಷಗಳಿಂದ ಒಂದು ಕ್ವಿಂಟಾಲ್ ಅಕ್ಕಿ ಕೂಡ ಹೋಗಿಲ್ಲ, ಹಣಕಾಸು ಸಂಸ್ಥೆಗಳಿಂದ ಯಾವುದೋ ದುಡ್ಡು ಸಿಗುತ್ತದೆಂದು ಈ ರೀತಿ ಅಪವ್ಯಯ ಮಾಡಬೇಡಿ. ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಖರ್ಚು ಮಾಡಿ. ಮಾರುಕಟ್ಟೆ ಕಟ್ಟಡಗಳನ್ನು ಕಟ್ಟಿಸುವ ಮುನ್ನ ಸಮೀಕ್ಷೆ ನಡೆಸಿರಿ; ಯೋಚನೆ ಮಾಡಿರಿ.

ಶ್ರೀ ಎಂ. ಸಿ. ಬಸಪ್ಪ.—ಮೈಸೂರು ಜಿಲ್ಲೆಯ ಕೆ. ಆರ್. ನಗರ, ಚಾಮರಾಜನಗರ ಮತ್ತು ನಂಜನಗೂಡಿನಲ್ಲಿರುವ ಮಾರುಕಟ್ಟೆ ಸಮಿತಿಗಳೆಲ್ಲ ಒಂದೇ. ಅಲ್ಲಿರುವ ಕಟ್ಟಡಗಳಲ್ಲಿ ಕತ್ತೆಗಳು ಬಂದು ನಿಲ್ಲುತ್ತವೆ. ಮೈಸೂರು ನಗರದಲ್ಲಿರುವ ಕ್ರಮಪಡಿಸಿದ ಮಾರುಕಟ್ಟೆ ಒಂದು ಮಾತ್ರ ಪರವಾಗಿಲ್ಲ.

ಶ್ರೀ. ಹೆಚ್. ಡಿ. ದೇವೇಗೌಡ.—ಹೀಗಾದರೆ, ಏತಕ್ಕೆ ಹಣ ಖರ್ಚು ಮಾಡಬೇಕು ? ಮಾರುಕಟ್ಟೆ ಶುಲ್ಕವೆಲ್ಲ ಸರ್ಕಾರಿ ಅಧಿಕಾರಿಗಳು ಮತ್ತು ಅಲ್ಲಿರುವ ಅಧಿಕಾರೇತರ ಕೈಗೆ ಹೋಗುತ್ತಿದೆ ಎಂದು ಮಾನ್ಯ ಚೌಡಯ್ಯನವರು ಹೇಳುತ್ತಿದ್ದರು. ಅವರು ಹೇಳಿದ್ದರಲ್ಲಿ ನೂರಕ್ಕೆ ನೂರು ಪಾಲು ಸತ್ಯವಿದೆ. ನನ್ನ ಊರನ್ನೇ ಉದಾಹರಣೆ ಕೊಟ್ಟು ಹೇಳುವುದಾದರೆ, ಅಲ್ಲಿ ಹದಿನಾಲ್ಕು ಎಕರೆ ತರೀ ಜಮೀನನ್ನು ಸ್ವಾಧೀನ

ಮಾಡಿಕೊಳ್ಳಬೇಕೆಂದು ನೋಟಿಫಿಕೇಷನ್ ಮಾಡಿದ್ದಾರೆ. ಅಲ್ಲಿ ಏತಕ್ಕೆ ಮಾಡಬೇಕು? ಅಲ್ಲಿ ಬದನೆಕಾಯಿ ಮತ್ತು ಟಿಮೊಟೋ ಹಣ್ಣುಗಳನ್ನು ಮಾರುತ್ತಿದ್ದಾರೆ; ಇನ್ನೇನೂ ಇಲ್ಲ ಹೇಮಾವತಿ ನಾಲೆ ಆದಮೇಲೆ ಸ್ವಲ್ಪ ಭತ್ತ ಬರಬಹುದು. ಅಂದರೆ ಆ ಭತ್ತವನ್ನೆಲ್ಲ ಕ್ರಮಪಡಿಸಿದ ಮಾರುಕಟ್ಟೆಗೇ ತರುತ್ತಾರೇನು? ಎಲ್ಲ ಮಿಲ್ಲಿಗೆ ತೆಗೆದುಕೊಂಡು ಹೋಗುತ್ತಾರೆ. ಅಲ್ಲಿ ಒಬ್ಬ ಕ್ಲರ್ಕ್ ಇದ್ದಾನೆ. ಅವನೂ ಮತ್ತು ಅದರ ಛೇರ್ಮನ್–ಇಬ್ಬರೂ ಒಂದಾಗಿದ್ದಾರೆ. ಅವನು ಮಿಲ್ ಹತ್ತಿರ ಹೋಗಿ ರೈತರ ಗಾಡಿಗಳಿಂದ ಕಡಾಣೆಯನ್ನು ಕಿತ್ತುಕೊಂಡು ಬಂದು ಬಿಡುತ್ತಾನೆ. ರೈತರು ಅವನನ್ನು ಹುಡಿಕಿಕೊಂಡು ಬಂದು, ಐವತ್ತೋ ಅಥವಾ ನೂರೋ ಅವನ ಕೈಗೆ ಕೊಟ್ಟು, ಕಡಾಣಿಯನ್ನು ಪಡೆದುಕೊಂಡು ಹೋಗುತ್ತಾರೆ. ಆ ಗುಮಾಸ್ತನ ಬಳಿ ಇಂದು ಸುಮಾರು ಎರಡು ಲಕ್ಷ ರೂಪಾಯಿನಷ್ಟು ಆಸ್ತಿ ಇದೆ. ಎಸ್.ಎಸ್.ಎಲ್.ಸಿ. ಓದಿದ ಹುಡುಗ ಅಷ್ಟು ಮಾಡಿದ್ದಾನೆ. ಇದೆಲ್ಲಾ ಏತಕ್ಕೋಸ್ಕರ ಮಾಡಬೇಕು ? ನಮಗೂ ಸ್ವಲ್ಪ ಅನುಭವ ಇದೆ. ಅನುಭವನ್ನು ಮಾರ್ಪಾಡು ಮಾಡತಕ್ಕ ಶಕ್ತಿ ಇಲ್ಲದೇ ಇದ್ದರೆ ರಾಜಕಾರಣದಲ್ಲಿ ಏತಕ್ಕೆ ಇರಬೇಕು ಎಂದು ನನಗಂತೂ ಅರ್ಥವಾಗುವುದಿಲ್ಲ. ಇದರ ಬಗ್ಗೆ ಅಧಿಕಾರಿಗಳನ್ನು ಸ್ವಲ್ಪ ದೂರ ಇಡಿ. ಅಧಿಕಾರಿಗಳು ಹೇಳಿದ್ದನ್ನು ಕೇಳಬೇಡಿ, ಅವರೇನು ಬೃಹಸ್ಪತಿಗಳಲ್ಲ. ರೆಗ್ಯೂಲೇಟೆಡ್ ಮಾರುಕಟ್ಟೆ ಮುಖಾಂತರ ರೈತನಿಗೆ ನ್ಯಾಯ ಬೆಲೆ ಕೊಡಿಸುತ್ತೇವೆಂದು ಹೇಳಿದಿರಿ; ಯಾವ ಅಧಿಕಾರಿ ನ್ಯಾಯ ಬೆಲೆ ಕೊಡಿಸಿದ್ದಾನೆ ? ದಳ್ಳಾಳಿಗಳ ಕಾಟವನ್ನು ತಪ್ಪಿಸಿದ್ದಾರೆಯೆ ? ಇಲ್ಲ, ಹರಾಜು ಹಾಕಿದಾಗ ಅಧಿಕಾರಿಗಳು ಕೂಡ ಅವರ ಜೊತೆಯಲ್ಲಿ ಶಾಮೀಲು ಆಗುತ್ತಾರೆ.

In your Annual Report it is stated that 44 markets are going to be taken up for development under the World Bank project at a cost of 8 Million Dollars. I do not know how far you are going to succeed. Further, you have stated that a total amount provided under the Project for development of 44 markets is Rs. 1113.316 lakhs Rs. 573.0020 lakhs for infrastructural developmental works and Rs. 35,00,000 is made for the year 1979–80...

ದುಡ್ಡನ್ನು ಖರ್ಚು ಮಾಡುವುದಕ್ಕೆ ಮೊದಲು ಸ್ವಲ್ಪ ಯೋಚನೆ ಮಾಡಬೇಕು ? ಎಲ್ಲಿ ಖರ್ಚು ಮಾಡಬೇಕೋ ಅಲ್ಲಿ ಮಾಡಿ, ಅನಾವಶ್ಯಕವಾಗಿ ವೆಚ್ಚ ಮಾಡುವುದಕ್ಕೆ ಹೋಗಬೇಡಿ. ಪುಗಸಟ್ಟೆ ದುಡ್ಡು ಕೊಡುತ್ತಿಲ್ಲ, ಸಾಲ ತಂದು ಕೊಡುತ್ತಿರುವುದು. ಮಾರುಕಟ್ಟೆಗಳ ಅವಶ್ಯಕತೆ ಎಲ್ಲೆಲ್ಲಿ ಇದೆ ಎನ್ನುವ ಬಗ್ಗೆ ನಿಮ್ಮ ಅಧಿಕಾರಿಗಳು ಸರ್ವೇ ಮಾಡಿದ್ದಾರೆಯೆ ಎಂದು ಈ ಸಂದರ್ಭದಲ್ಲಿ ಕೇಳುತ್ತೇನೆ. ಅನಾವಶ್ಯಕವಾಗಿ ಕೈ ಹಾಕುವುದಕ್ಕೆ ಹೋಗುವುದು ಬೇಡವೆಂದು ಸೂಕ್ಷ್ಮವಾಗಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ೨೭೩ ರೂರಲ್ ಗೋಡೌನುಗಳನ್ನು ಮಾಡುತ್ತೇವೆಂದು ಹೇಳಿದ್ದಿರಿ ಆದರೆ ಇದುವರೆವಿಗೂ ಕೆಲಸ ಪ್ರಾರಂಭ ಮಾಡಿಲ್ಲ. ೧೯೭೨–೭೩ರಲ್ಲಿ ಅನೌನ್ಸ್ ಮಾಡಿದರೂ ಏತಕ್ಕೆ ಇನ್ನು ಮಾಡಲಿಲ್ಲ? ಕೊಡಗು ಜಿಲ್ಲೆಯಲ್ಲಿ "ಕುಸಬಲಕ್ಕಿ" ಮಾಡುವ ಸಂಸ್ಥೆ ಇದೆ. ಇವತ್ತಿನ ದಿವಸ, ಆ ಸಂಸ್ಥೆಗೆ ಇರತಕ್ಕ ಷರತ್ತುಗಳನ್ನು ವಯಲೇಟ್ ಮಾಡಿ ೫ ಲಕ್ಷದ ೭೫,೦೦೦ ರೂಪಾಯಿಗಳನ್ನು ರಿಲೀಸ್ ಮಾಡಿದ್ದಾರೆ. ಆ ಸಂಸ್ಥೆ ಕುಶಾಲನಗರದಲ್ಲಿದೆ. ಅದಕ್ಕೆ ಮಿಷನರಿ ಬೇಕಾಗಿಲ್ಲ. ಏಕೆಂದರೆ ಯೂಸ್ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಈ ಮಾತನ್ನು ಎ.ಜಿ.ಯವರು ಹೇಳಿದ್ದಾರೆ.

I will just read an important observation made bythe A.G.—

"The entire assistance was, however, released by the department (March 1976) in one lump even before the society had placed firm orders for the machinery and collected the additional capital. The scheme remained incomplete and the society informed (March 1978) the department that it had decided to abandon it due to lack of funds; it could collect Rs. 0.09 lakh only as additional capital; machines (value: Rs. 3.47 lakhs) purchased during 1977 were lying

idle as the civil works had not been started. The society sought (March 1978) permission for disposal of the idle machinery. No decision has been taken by Government so far.

ಇದು ಒಂದು ಪ್ರಕರಣ ಹೇಳಿದೆ. ಈ ರೀತಿಯಾದ ಹಲವಾರು ಪ್ರಕರಣಗಳು ಇವೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಲೆಕ್ಕಾಚಾರ ಮಾಡಿಸಿದ್ದೇವೆ. ಇಲಾಖೆಯನ್ನು ಟೋನ್ ಅಪ್ ಮಾಡತಕ್ಕ ವಿಚಾರವನ್ನು ತಿಳಿಸಿದ್ದೇವೆ. ರೈತರಿಗೆ ಸಾಲ ಸಿಗುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಸಮಿತಿಯನ್ನು ಮಾಡುತ್ತೇವೆಂದು ಹೇಳಿದ್ದರು, ಅದನ್ನು ಇನ್ನೂ ಮಾಡಿಲ್ಲ. ತಾವು ಎಲ್ಲರ ಬಗ್ಗೆಯೂ ಔದಾರ್ಯ ತೋರಿಸುತ್ತೀರಿ. ರೈತರ ಬಗ್ಗೆ ಕೂಡ ಔದಾರ್ಯ ತೋರಿಸಬೇಕೆಂದು ಹೇಳುತ್ತೇನೆ. ರೈತರಿಗೆ ಸಾಲಗಳು ಸುಲಭ ರೀತಿಯಲ್ಲಿ ದೊರೆಯಲು ವ್ಯವಸ್ಥೆ ಮಾಡುವ ಬಗ್ಗೆ ಅಧಿಕಾರಿಗಳು ಮತ್ತು ರಾಜಕೀಯ ಮುಖಂಡರು ಕೂತು ಚರ್ಚೆ ಮಾಡಿದರೆ ಸಾಧ್ಯವಾಗುತ್ತದೆ. ಇದನ್ನು ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ಎಲ್. ಶಿವಪ್ಪ (ತಿಪಟೂರು).—ಮಾನ್ಯ ಅಧ್ಯಕ್ಷರೇ, ಸಹಕಾರ ಇಲಾಖೆ ಮತ್ತು ಮಾರುಕಟ್ಟೆ ಇಲಾಖೆಯ ಬೇಡಿಕೆಗಳ ಬಗ್ಗೆ ಮಾತನಾಡುತ್ತಾ ಸರ್ಕಾರಕ್ಕೆ ಈ ಸದನದ ಮೂಲಕ ಕೆಲವು ಸಲಹೆಗಳನ್ನು ಕೊಡಲು ಪ್ರಯತ್ನ ಮಾಡುತ್ತೇನೆ. ಸುಮಾರು ೪ ವರ್ಷಗಳ ಕೆಳಗೆ ಅಮಾಲ್ಗಮೇಷನ್ ಮಾಡಿದ್ದನ್ನು ನಾನಾ ರೂಪದಲ್ಲಿ ಮಾನ್ಯ ಸದಸ್ಯರುಗಳನೇಕರು ಹೇಳಿದ್ದಾರೆ. ಉತ್ತಮವಾಗಿ ಕೆಲಸ ಮಾಡತಕ್ಕ ಸೊಸೈಟಿಯನ್ನು ಕೆಲಸ ಮಾಡದೇ ಇರತಕ್ಕ ಸೊಸೈಟಿಯ ಜೊತೆಗೆ ಸೇರಿಸಿದ್ದು; ಕೆಲಸ ಮಾಡದೇ ಇರತಕ್ಕ ಸೊಸೈಟಿಯೂ ಕೂಡ ಒಳ್ಳೆಯ ಕೆಲಸ ಮಾಡಬೇಕೆಂಬ ದೃಷ್ಟಿಯಿಂದ ಎಂದು ನನ್ನ ಅಭಿಪ್ರಾಯ. ೧೦೦ಕ್ಕೆ ೧೦೦ ಸೊಸೈಟಿಗಳು ನಿಲ್ಲುವಂತ ಕಾಲದಲ್ಲಿ ಸೊಸೈಟಿಗಳು ಉಳಿಯಬೇಕೆಂಬ ದೃಷ್ಟಿಯಿಂದ ಇದನ್ನು ಮಾಡಲಾಯಿತು. ರಾಜಕಾರಣ ಒಂದೆರಡು ಕಡೆ ಆಗಿರಬಹುದು, ಇಲ್ಲವೆಂದು ನಾನು ಹೇಳುವುದಿಲ್ಲ, ರಾಜಕೀಯ ಚಟ ಇರತಕ್ಕವರು ಕೆಲವರು ಮಾಡಿರಬಹುದು. ಸಾಮಾನ್ಯವಾಗಿ ಒಂದು ಸೊಸೈಟಿಗೆ ಎರಡು ಲಕ್ಷ ರೂಪಾಯಿ ಸಾಲ ವಿತರಣೆ ಮಾಡತಕ್ಕ ಶಕ್ತಿ ಇರಬೇಕು. ಖಾಯಂ ನೌಕರರು ಇರಬೇಕು. ಕನಿಷ್ಠ ಪಕ್ಷ ೨ನೇ ದರ್ಜೆ ಗುಮಾಸ್ತರ ಸಂಬಳವನ್ನು ಸೊಸೈಟಿಯಲ್ಲಿ ಕೆಲಸ ಮಾಡತಕ್ಕವರಿಗೆ ಕೊಡಬೇಕು.

೨–೩೦ ಪಿ.ಎಂ.

ಅಧ್ಯಕ್ಷರೆ. ತುಮಕೂರು ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕಿನಿಂದ ನನ್ನನ್ನು ತೆಗೆದಿರುವ ಬಗ್ಗೆ ಮಾನ್ಯ ಶಿವನಂಜಪ್ಪನವರು ಹೇಳಿದ್ದಾರೆ. ಮಾನ್ಯ ಸದಸ್ಯರು ಸಹಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡಿಕೊಂಡು ಬರಲಿಲ್ಲವೆಂದು ಕಾಣುತ್ತದೆ. ನಾವು ಅಭಿವೃದ್ಧಿ ಕಾರ್ಯಗಳನ್ನು ಮಾಡಿದವರು. ಒಂದು ಸಂಸ್ಥೆಯಲ್ಲಿ ೬ ವರ್ಷ ಕಾಲ ಅಧ್ಯಕ್ಷರಾಗಿದ್ದವರನ್ನು ಸರ್ಕಾರದವರು ತೆಗೆದುಹಾಕಿದ್ದಾರೆ. ಇವೊತ್ತು ಒಬ್ಬ ಮಂತ್ರಿ ೧೬ ವರ್ಷ ಇರಬಹುದು. ಪ್ರಧಾನಿಯವರು ೧೫ ವರ್ಷ ಇರಬಹುದು. ಶಾಸಕರು ೩೦ ವರ್ಷ ಇರಬಹುದು. ಆದರೆ ಇದಕ್ಕೆ ಏತಕ್ಕೆ ಅಡ್ಡಿ ಹಾಕಬೇಕು ಅಂತ ನಾನು ಸ್ಟೇ ಮಾಡಿಸಿದ್ದೇನೆ.

ಶ್ರೀ ಎಂ. ಸಿ. ನಾನಯ್ಯ.—ಸ್ವಾಮಿ, ಸರ್ಕಾರ ೬ ವರ್ಷ ಅಂತ ಒಂದು ಕಾಯಿದೆ ಮಾಡಿದ ಮೇಲೆ ಬಿಟ್ಟುಬಿಡುವುದು ಒಳ್ಳೆಯದು. ಅವರ ಕೈಯಿಂದ ಏತಕ್ಕೆ ಡಿಸ್‌ಮಿಸ್ ಮಾಡಿಸಿಕೊಳ್ಳಬೇಕು?

ಶ್ರೀ ವಿ. ಎಲ್. ಶಿವಪ್ಪ.—ಅಧ್ಯಕ್ಷರೆ, ಯಾರು ಪ್ರಾಮಾಣಿಕರಾಗಿ ಇರುತ್ತಾರೆ ಅವರು ಪ್ರತಿಭಟನೆ ಮಾಡಬೇಕಾಗುತ್ತದೆ. ಇಲ್ಲದೇ ಹೋಗಿದ್ದರೆ ಇಲಾಖಾ ಅಧಿಕಾರಿಗಳು ಸುಮ್ಮನೆ ಬಿಡುತ್ತಿದ್ದರೇನು? ನಾನು ೧೯೬೭ರಲ್ಲಿ ಕಾಂಗ್ರೆಸ್ಸಿಗೆ ರಾಜಿನಾಮೆ ಕೊಟ್ಟು ಪಿ.ಎಸ್.ಪಿ. ಯಲ್ಲಿ ಇದ್ದಾಗ ಆಗಿನ ಸರ್ಕಾರದ ವೀರೇಂದ್ರ ಪಾಟೀಲರು ನನ್ನ ಮೇಲೆ ತನಿಖೆ ಮಾಡಿಸಿದರು.

ಶ್ರೀ ಜಿ. ಎಸ್. ಶಿವನಂಜಪ್ಪ.—ಅಧ್ಯಕ್ಷರೆ, ನಾನು ಮಾನ್ಯ ಸದಸ್ಯರಾದ ಶಿವಪ್ಪನವರ ಮೇಲೆ ಯಾವ ಚಾರ್ಜಸ್ ಮಾಡಲಿಲ್ಲ.

ಶ್ರೀ ವಿ. ಎಲ್. ಶಿವಪ್ಪ.—ಅಧ್ಯಕ್ಷರೆ, ಬಹಳ ಸಂತೋಷ. ಮಾನ್ಯ ಸದಸ್ಯರು ನನ್ನ ಮೇಲೆ ಚಾರ್ಜ್ ಮಾಡಿ ಹೇಳಿದ ಹಾಗೆ ಆಯಿತು, ಅದಕ್ಕೋಸ್ಕರ ಹೇಳಿದೆ. ಇವೊತ್ತು ಸಹಕಾರಿ ಇಲಾಖೆ ಬಹಳ ಪ್ರಾಮುಖ್ಯವಾದ ಇಲಾಖೆ, ಅಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಇವೊತ್ತು ಆಕಸ್ಮಿಕವಾಗಿ ರಾಜಕಾರಣದಲ್ಲಿ ಇದ್ದ ಕೆಲವರು ಗೊತ್ತಿಲ್ಲದೆ ಸದಸ್ಯರಾಗಿ ಬರುವುದು ಇದೆ. ಅವರಿಗೆ ಅನೇಕ ಜಾಗಗಳನ್ನು ಹಿಡಿಯುವುದಕ್ಕೆ ಅವಕಾಶ ಇರುತ್ತದೆ. ಸಹಕಾರಿ ಇಲಾಖೆಯಲ್ಲಿ ಯಾರು ಯಾರು ಕೆಲಸ ಮಾಡಿದ್ದಾರೆ ಅವರೆಲ್ಲರೂ ನಾಯಕರೇ ಆಗಿದ್ದಾರೆ. ಇಲ್ಲಿ ಸುಮಾರು ೯೦ ಭಾಗ ಸಹಕಾರಿ ಇಲಾಖೆಯಲ್ಲಿ ಕೆಲಸ ಮಾಡಿರತಕ್ಕವರೇ ಇದ್ದಾರೆ. ಅವರಿಗೆ ಅದೇ ಪಾಠಶಾಲೆ, ಅದೇ ಅವರಿಗೆ ಯೂನಿವರ್ಸಿಟಿ. ಅಲ್ಲಿ ಮೋಸ ಮಾಡುತ್ತಾರೆ ಅಂದರೆ, ಮೋಸ ಮಾಡತಕ್ಕವರು ಎಲ್ಲಾ ಜಾಗದಲ್ಲಿಯೂ ಮೋಸ ಮಾಡುತ್ತಾರೆ. ಅವರಿಗೆ ಮೋಸ ಮಾಡುವುದು ಒಂದು ಗೊತ್ತಿದ್ದರೆ ಸಾಕು. ಅಧ್ಯಕ್ಷರೆ, ಇವೊತ್ತು ಸಹಕಾರಿ ಇಲಾಖೆ ಬಹಳ ಪ್ರಾಮುಖ್ಯವಾದಂಥ ಇಲಾಖೆ. ನೂರಕ್ಕೆ ಎಂಭತ್ತು ಭಾಗ ಜನ ರೈತರು ಏನು ಕಷ್ಟ ಪಡುತ್ತಿದ್ದಾರೆ ಅವರಿಗೆ ಸಹಾಯ ಮಾಡತಕ್ಕದ್ದು ಈ ಇಲಾಖೆಯ ಕರ್ತವ್ಯ. ಜನರನ್ನು ಬಹಳ ಹತ್ತಿರ ಎಳೆದುಕೊಳ್ಳಬೇಕು ಎಂಬ ಆಸೆಯಿಂದ ಋಣ ಪರಿಹಾರ ಶಾಸನ ಮಾಡಿದ್ದೀರಿ. ಮೊದಲು ೨,೪೦೦ ರೂಪಾಯಿ ವರಮಾನ ಇರತಕ್ಕವರಿಗೆ ಮಾಡಿದ್ದೀರಿ, ಈಗ ಅದನ್ನು ೪,೮೦೦ ರೂಪಾಯಿ ವರಮಾನ ಬರತಕ್ಕವರಿಗೆ ಅಂತ ಮಾಡಿದ್ದೀರಿ. ಇದರಿಂದ ಏನಾಗಿದೆ ಎಂದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಬಡ ರೈತರಿಗೆ ಒಂದು ಕಾಸೂ ಸಾಲ ಸಿಕ್ಕುತ್ತಿಲ್ಲ. ಅವರ ಮನೆಗಳಲ್ಲಿ ಮದುವೆ ಮುಂಜಿ ಆಯಿತು ಅಂದರೆ ಅವರಿಗೆ ಒಂದು ಕಾಸೂ ಕೊಡುವವರು ಇಲ್ಲ. ಈ ಶಾಸನದ ಪರಿಣಾಮ ಏನಾಗಿದೆ? ಇವೊತ್ತು ನಾವು ರೈತರಿಗೆ ಸರಿಯಾದ ರೀತಿಯಲ್ಲಿ ಹಣ ಒದಗಿಸದೇ ಹೋದರೆ, ಯಾವ ಪುಣ್ಯ ಕಟ್ಟಿಕೊಳ್ಳಬೇಕು ಅಂತ ನಾವು ಇದನ್ನು ಮಾಡಿದ್ದೇವೆಯೋ ಅಷ್ಟೇ ಪಾಪವನ್ನು ನಾವು ಕಟ್ಟಿಕೊಳ್ಳಬೇಕಾಗುತ್ತದೆ. ಇವೊತ್ತು ರೈತರು ಬಹಳ ಕಷ್ಟದಲ್ಲಿದ್ದಾರೆ. ನಾವು ಅವರಿಗೆ ಬೆಳೆ ಸಾಲ ಒದಗಿಸುತ್ತೇವೆ. ಆದರೆ, ಅವನ ಮನೆಯಲ್ಲಿ ಮದುವೆ ಆದರೆ ಯಾವ ಸಾಲ ಕೊಡುತ್ತೇವೆ? ಅದೇ ಕೈಗಾರಿಕೆ ಮಾಡುವ ಜನರಿಗೆ ಕೋಟಿಗಟ್ಟಲೆ ಹಣ ಕೊಡುತ್ತೇವೆ. ಎಲೆಕ್ಟ್ರಿಸಿಟಿ ರಿಯಾಯ್ತಿ ಕೊಡುತ್ತೇವೆ, ಸಬ್ಸಿಡಿ ಕೊಡುತ್ತೇವೆ. ಅದೇ ಸಹಕಾರಿ ಇಲಾಖೆಯಲ್ಲಿ ಒಬ್ಬ ರೈತರಿಗೆ ಎಷ್ಟು ಹಣ ಕೊಡುತ್ತೇವೆ? ೫೦೦ ರೂಪಾಯಿ ಸಾಲ ಕೊಟ್ಟರೆ ಅವನು ಎಲ್ಲಿ ಮೋಸ ಮಾಡುತ್ತಾನೋ ಅಂತ ಮನೆ ಜಫ್ತಿ ಮಾಡುತ್ತಾರೆ. ಅವನಿಗೆ ಕೊಡತಕ್ಕ ಅಸಲಿಗಿಂತಲೂ ಬಡ್ಡಿ ಜಾಸ್ತಿ ತೆಗೆದುಕೊಳ್ಳುವ ಪರಿಸ್ಥಿತಿ ಇದೆ. ಇವೊತ್ತು ಎಷ್ಟು ಸಾಲ ಕೊಟ್ಟಿದ್ದೇವೆ? ೫೦ ಕೋಟಿ ರೂಪಾಯಿ ಸಾಲ ಕೊಟ್ಟಿರಬಹುದು. ಗ್ರಾಮಾಂತರ ಪ್ರದೇಶದಲ್ಲಿ ಸುಮಾರು ೨ ಕೋಟಿ ಜನರು ವ್ಯವಸಾಯದಲ್ಲೇ ಜೀವನ ಮಾಡತಕ್ಕವರು ಇದ್ದಾರೆ. ಈಗ ನಮ್ಮಲ್ಲಿ ಒಂದು ಕಾನೂನನ್ನು ತಂದು ಒಬ್ಬರಿಗೆ ೧೦ ಎಕರೆ ಮೇಲೆ ಇರಬಾರದು ಅಂತ ಸೀಲಿಂಗ್ ಮಾಡಿದ್ದೇವೆ. ಸಮಾಜವಾದ ಮಾಡಿದ್ದೇವೆ. ಈ ದೇಶದಲ್ಲಿರತಕ್ಕ ಜನರಿಗೆ ೧೦ ಎಕರೆ ಮೇಲೆ ಇರಬಾರದು, ಹೆಚ್ಚು ಇದ್ದರೆ ಅದು ಸರ್ಕಾರಕ್ಕೆ ಬಂದು ಹಂಚಿಕೆಯಾಗಬೇಕು ಅಂತ ಇದೆ. ಇವೊತ್ತು ಕಮ್ಯುನಿಸ್ಟ್ ದೇಶಗಳಲ್ಲಿ ಕೂಡ ಇಂತಹ ಶಾಸನವನ್ನು ಮಾಡಿಲ್ಲ. ವೆಸ್ಟ್ ಬೆಂಗಾಲ್‌ನಲ್ಲಿ ಹದಿನೇಳೂವರೆ ಎಕರೆ ಸ್ಟಾಂಡರ್ಡ್ ಇದೆ. ಇಲ್ಲಿ ಅದಕ್ಕಿಂತಲೂ ದೂರ ಹೋಗಿ ೧೦ ಎಕರೆ ಮಾಡಿದ್ದೇವೆ ಮಾನ್ಯ ಬಸವಲಿಂಗಪ್ಪನವರು ಏನು ಮಾಡಿದರು ಎಂದರೆ, ಬರೀ ದೊಡ್ಡ ದೊಡ್ಡ ಸಾಹುಕಾರರನ್ನೇ ನೋಡಿದರು, ತಿಪಟೂರಿನಲ್ಲಿ ಅಂಗಡಿ ಇಟ್ಟಿರುವವರು, ಬೆಂಗಳೂರಿನಲ್ಲಿ ಅಂಗಡಿ ಇಟ್ಟಿರುವವರು, ಯಾರಿಗೆ ಕಾರು ಇದೆ—ಬರೀ ಇವರನ್ನೇ ನೋಡಿಬಿಟ್ಟರು. ಇವೊತ್ತು ನಿಜವಾದ ರೈತರು ಯಾರು ಇದ್ದಾನೆ, ಅವನು, ಅವನ ಹೆಂಡತಿ, ಇಬ್ಬರು ಕೆಲಸ ಮಾಡಿದರೂ ಹೊಟ್ಟೆ ತುಂಬುವುದಿಲ್ಲ. ಅವರು ಇನ್ನೊಬ್ಬರ ಹತ್ತಿರ ಹೋಗಿ ಸಾಲ ಕೇಳಲೇ ಬೇಕು. ಇವೊತ್ತು ೧೦ ಎಕರೆಯಲ್ಲಿ ಎಷ್ಟು ಭತ್ತ ಬರುತ್ತದೆ, ಅವನಿಗೆ ಕಡೆಗೆ ಎಷ್ಟು ಉಳಿಯುತ್ತದೆ ಅದನ್ನೆಲ್ಲಾ ವಿಚಾರ ಮಾಡಿದ್ದೀರಾ? ಬರೀ ಭಾಷಣ ಮಾಡಿದ್ದು ಮಾಡಿದ್ದೆ. ಇವೊತ್ತು ಈ ಇಲಾಖೆಯಲ್ಲಿ ೧೩ ಪರ್ಸೆಂಟ್ ಜನರಿಗೆ ಮಾತ್ರ ಸಾಲ ಕೊಟ್ಟಿದ್ದೇವೆ. ಇನ್ನುಳಿದ ೮೭ ಪರ್ಸೆಂಟ್ ಜನರಿಗೆ ಸಾಲ ಕೊಟ್ಟಿಲ್ಲ. ಇನ್ನು ಕನ್‌ವರ್ಷನ್ ಲೋನ್ ಎಂದು ಕೊಡುತ್ತಾರೆ. ಆ ಸಾಲ ತೀರಿಸಲಿಕ್ಕೆ ಮೂರು ವರ್ಷ ಮಿತಿ ಇರುತ್ತದೆ, ಅಷ್ಟರಲ್ಲಿ ಕೊಡಬೇಕು. ಅವರಿಗೆ ಮದುವೆ ಮುಂಜಿಗಳಿಗೆ ಸಾಲ ಕೊಡುವುದಿಲ್ಲ, ಮನೆಗಳನ್ನು ಕಟ್ಟಿಸಲಿಕ್ಕೆ ಸಾಲ ಕೊಡುವುದಿಲ್ಲ. ಅವರಿಗೆ ಬರೀ ಭಾಷಣ ಕೇಳಿಕೊಂಡು ತುಟಿಗೆ ತುಪ್ಪ ಸವರಿದ ಹಾಗೆ ಆಗಿದೆ. ಇವೊತ್ತು ರೈತ ವರ್ಗದಿಂದ ಯಾರೂ ಚುನಾವಣೆಗೆ ನಿಂತುಕೊಳ್ಳುವುದಕ್ಕೆ ಆಗುವುದಿಲ್ಲ. ಮಾನ್ಯ ಬಸವಲಿಂಗಪ್ಪನಂಥವರು ಚುನಾವಣೆಗೆ ನಿಂತುಕೊಳ್ಳಬಹುದು, ಸಾವಿರಾರು ರೂಪಾಯಿ ಬಾಡಿಗೆ ಬರತಕ್ಕವರು ಚುನಾವಣೆಗೆ ನಿಂತುಕೊಳ್ಳಬಹುದು,

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ನನಗೆ ಏತಕ್ಕೆ ಗಂಟೆ ಬೀಳುತ್ತೀರಾ?

ಶ್ರೀ ವಿ. ಎಲ್. ಶಿವಪ್ಪ.—ಮಾನ್ಯ ಬಸವಲಿಂಗಪ್ಪನವರಿಗೆ ರೈತಾಪಿ ಜನರ ಕಷ್ಟ ಹೇಳುತ್ತಿದ್ದೇನೆ. ಇವೊತ್ತು ಲಕ್ಷಾಂತರ ರೂಪಾಯಿ ಸಂಪಾದಿಸತಕ್ಕವರಿಗೆ ಸೀಲಿಂಗ್ ಇಲ್ಲ. ಆದರೆ ಈ ರೈತಾಪಿ ಜನರಿಗೆ ಏತಕ್ಕೆ ಸೀಲಿಂಗ್ ಬೇಕು? ಇವೊತ್ತು ಕಾಫಿ ಪ್ಲಾಂಟರ್ಸ್‌ಗೆ ಸೀಲಿಂಗ್ ಇದೆಯೇ? ಅವರಿಗೆ ಎಷ್ಟು ಜಮೀನು ಇದೆ ಅದನ್ನು ಸರ್ವೆ ಮಾಡಿಸಲಿಕ್ಕೆ ನಿಮಗೆ ಶಕ್ತಿ ಇದೆಯೇ? ಕಾಫಿ ಪ್ಲಾಂಟರ್ಸ್ ಬಹಳ ದೊಡ್ಡವರು. ಅವರ ವಿಚಾರಕ್ಕೆ ತಾವು ಹೋಗುವುದಿಲ್ಲ. ಇವೊತ್ತು ಮೈದಾನ ಪ್ರದೇಶದಲ್ಲಿರತಕ್ಕವರಿಗೆ ಸೀಲಿಂಗ್ ಮಾಡಿದ್ದೀರಾ? ನಾವು ಭೂ ಸುಧಾರಣೆ ಮಾಡಿದ್ದೇವೆ ಅಂತ ಹೆಗ್ಗಳಿಕೆ ಹೇಳಿಕೊಂಡಿದ್ದೂ ಹೇಳಿಕೊಂಡಿದ್ದೆ. ಈಗ ಈ ಜನರ ಕಷ್ಟ ಸುಖ ವಿಮರ್ಶೆ ಮಾಡಲಿಕ್ಕೆ ಇದೊಂದೆ ಇಲಾಖೆ ಇರುವುದು. ಈಗ ತಾವು ಈ ಇಲಾಖೆಯನ್ನು ವಹಿಸಿಕೊಂಡಿದ್ದೀರಿ. ತಾವು ಮಾಡಬೇಕಾದ್ದು ಇಷ್ಟೇ. ಪ್ರತಿಯೊಂದು ಜಿಲ್ಲೆಯಸೊಸೈಟಿಗಳನ್ನು, ಡಿಸ್ಟ್ರಿಕ್ಟ್ ಬ್ಯಾಂಕುಗಳನ್ನು ರೆವ್ಯೂ ಮಾಡಬೇಕು. ಈ ರೀತಿ ರೆವ್ಯೂ ಮಾಡತಕ್ಕ ಕಾಲದಲ್ಲಿ ಕೆಲವು ವ್ಯಕ್ತಿಗಳು ಸಿಕ್ಕುತ್ತಾರೆ. ಯಾರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ ಅವರನ್ನು ಗುರುತುಮಾಡುವ ಸನ್ನಿವೇಶ ಸಿಕ್ಕುತ್ತದೆ. ನಾನು ಹಿಂದೆ ಡಿಸ್ಟ್ರಿಕ್ಟ್ ಬ್ಯಾಂಕ್ ಸಿಲ್ವರ್ ಜ್ಯುಬಿಲಿ ಮಾಡಬೇಕೆಂದುಪ್ರಯತ್ನ ಮಾಡಿದ್ದೆ. ಆಗ ಒಂದು ಗುಂಪಿನವರು ಇಲ್ಲಿಗೆ ಬಂದು ಏನು ಒಂದು ಪ್ರಚಾರ ಮಾಡಿದರು ಎಂದರೆ, ನೀವು ಅಲ್ಲಿಗೆ ಹೋಗಬೇಡಿ, ಅಲ್ಲಿ ಲಕ್ಷಾಂತರ ರೂಪಾಯಿ ಮೋಸ ಮಾಡಿದ್ದಾರೆ, ನೀವು ಅಲ್ಲಿಗೆ ಹೋದರೆ ಗೌರವ ಬರುವುದಿಲ್ಲ ಎಂದು.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶಿವಪ್ಪನವರು ಬಹಳ ಸ್ವಾರಸ್ಯವಾಗಿ ಮಾತನಾಡುತ್ತಿದ್ದಾರೆ. ಅದನ್ನು ಕೇಳತಕ್ಕಂತಹ ಮನಸ್ಸು ಇದೆ. ಆದರೆ, ಈಗ ಆರೂವರೆ ಗಂಟೆ ಆಗಿರುವುದರಿಂದ ಅವರು ಮತ್ತೆ ನಾಳೆ ಏತಕ್ಕೆ ಪ್ರಾರಂಭ ಮಾಡಬಾರದು?

ಶ್ರೀ ಆರ್. ಗುಂಡೂರಾವ್.—ನಿನ್ನೆ ತೀರ್ಮಾನ ಮಾಡಿದ ಪ್ರಕಾರ ಟೈಮು ಸಿಗುವುದಿಲ್ಲ. ಈ ತಿಂಗಳ ೨೯ರೊಳಗೆ ಎಲ್ಲ ಬೇಡಿಕೆಗಳು ಚರ್ಚೆಯಾಗಬೇಕಾಗಿವೆ. ಆದ್ದರಿಂದ ಮಾನ್ಯ ಸದಸ್ಯರಾದ ಶ್ರೀಮಾನ್ ವಿ.ಎಲ್. ಶಿವಪ್ಪನವರು ಅವರ ಭಾಷಣ ಮುಗಿಸುವವರೆಗೂ ಕುಳಿತುಕೊಳ್ಳೋಣ. ಮತ್ತೆ ಮಾನ್ಯ ಬಸವಲಿಂಗಪ್ಪನವರಿಗೂ ವಿಷಯ ಗೊತ್ತಿದೆ. ಆದರೂ ಅವರು ಸುಮ್ಮನೆ ಹೇಳುತ್ತಿದ್ದಾರೆ.

ಶ್ರೀ ಎಚ್.ಡಿ. ದೇವೇಗೌಡ.—ಮನೆಗೆ ಹೋಗಬೇಕೆಂದು ನೆಪ ಹೇಳಿದರೆ ಬಹಳ ಕಷ್ಟವಾಗುತ್ತದೆ, ನಾವೇನೋ ಕುಳಿತುಕೊಂಡು ಕೇಳುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾಳೆ ಗಮನ ಸೆಳೆಯುವ ಸೂಚನೆ ತೆಗೆಯಿರಿ. ಆದರೆ ಪ್ರಶ್ನೋತ್ತರ ವೇಳೆ ಮಾತ್ರ ಇರಬೇಕು. ಆಮೇಲೆ ನನಗೆ ೧೫ ನಿಮಿಷ ಸಮಯ ಕೊಟ್ಟರೆ ಸಾಕು ಮುಗಿಸಿಬಿಡುತ್ತೇನೆ. ಜಾಸ್ತಿ ಸಮಯ ತೆಗೆದುಕೊಳ್ಳುವುದಿಲ್ಲ.

ಶ್ರೀ ಎಚ್.ಡಿ. ದೇವೇಗೌಡ.—೨-೩ ಜನ ಮಾತನಾಡುವವರು ಇದ್ದಾರೆ. ಆದ್ದರಿಂದ ಅರ್ಧ ಗಂಟೆ ಹೆಚ್ಚಿಗೆ ಸಮಯ ಕುಳಿತುಕೊಂಡು ಮುಗಿಸೋಣ.

ಶ್ರೀ ವಿ.ಎಲ್. ಶಿವಪ್ಪ.—ಈಗ ಇರತಕ್ಕಂತಹ ಪ್ರಶ್ನೆ ಏನಿದೆ ಎಂದರೆ, ಕೈಗಾರಿಕೆಗಳಿಗೆ ಕೋಟಿಗಟ್ಟಲೆ ಸಬ್‌ಸಿಡಿ ಕೊಡುತ್ತೀರಿ, ಮತ್ತು ಅವರು ಉಪಯೋಗ ಮಾಡುವ ಕರೆಂಟ್‌ಗೆ ಹಾಕತಕ್ಕ ಚಾರ್ಜಸ್ ಕಡಿಮೆ. ಆದರೆ ನಮ್ಮ ರೈತರಿಗೆ ಕೊಟ್ಟಿರತಕ್ಕಂತಹ ಐ.ಪಿ. ಸೆಟ್ಟನ್ನು ವಿದ್ಯುಚ್ಛಕ್ತಿಯ ಸಹಾಯದಿಂದ ಉಪಯೋಗ ಮಾಡಿದರೆ ಅವರು ಉಪಯೋಗ ಮಾಡತಕ್ಕಂತಹ ವಿದ್ಯುಚ್ಛಕ್ತಿಯ ದರವನ್ನು ಪ್ರತಿ ಯೂನಿಟ್‌ಗೆ ೩೦ ಪೈಸೆಯಂತೆ ಕೊಡಬೇಕು ಆದರೂ ಅವನಿಗೆ ಲಿಮಿಟೆಡ್ ಆಗಿ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುತ್ತೀರಿ. ಆದರೆ ಅದೇ ಇಂಡಸ್ಟ್ರಿಯನ್ನು ಪ್ರಾರಂಭ ಮಾಡಿದರೆ ಅವರಿಗೆ ಎಲ್ಲ ಅನುಕೂಲಗಳನ್ನೂ ಒದಗಿಸಿಕೊಡುತ್ತೀರಿ. ಆದರೆ ರೈತರಿಗೆ ಏನು ಮಾಡಿಕೊಟ್ಟಿದ್ದೀರಿ ? ರೈತರಿಗೆ ಏನು ರಿಯಾಯಿತಿ ಕೊಟ್ಟಿದ್ದೀರಿ ? ಮದ್ರಾಸ್‌ನಲ್ಲಿ ೫೦ ಕೋಟಿ ರೂಪಾಯಿಗಳನ್ನು ರೈತರು ಕೊಡಬೇಕಾದುದನ್ನು ಅಲ್ಲಿನ ಸರ್ಕಾರ ವಜಾ ಮಾಡಿದೆ. ಅದೇ ರೀತಿ ಇಲ್ಲಿ ಕೂಡ ವಜಾ ಮಾಡಿ ಎಂಬುದಾಗಿ ನಾನು ಕೇಳುವುದಿಲ್ಲ. ಈಗ ಹಳ್ಳಿಗಳ ಕಡೆ ಏನಾಗಿದೆ ಎಂದರೆ ಅವರ ಪರಿಸ್ಥಿತಿ ಚೆನ್ನಾಗಿ ಇಲ್ಲ. ರೈತನು ತೆಗೆದುಕೊಂಡಂತಹ ಸಾಲವನ್ನು ೫-೬ ವರ್ಷಗಳಲ್ಲಿ ವಾಪಸ್ಸು ಕೊಡಬೇಕೆಂದು ಇರುತ್ತದೆ. ಕೊಡದಿದ್ದರೆ, ಜಪ್ತಿ ಮಾಡುವ ಅಧಿಕಾರವನ್ನು ಡೆಪ್ಯುಟಿ ರಿಜಿಸ್ಟ್ರಾರ್‌ರವರಿಗೆ ಕೊಟ್ಟಿದ್ದೀರಿ. ಇದಕ್ಕೆ ಕಾನೂನಿನಲ್ಲೂ ಅವಕಾಶ ಮಾಡಿಕೊಟ್ಟಿರುವುದು ನಿಜ. ಆದರೆ ಪರಿಸ್ಥಿತಿ ಏನಾಗಿದೆ ಎಂದರೆ, ಸಾಲ

ತೆಗೆದುಕೊಂಡಿದ್ದವನು ತನ್ನ ಮನೆಯಲ್ಲಿ ಮದುವೆ ಮಾಡುತ್ತಿರುವ ದಿವಸವೇ ಅವನ ಮನೆ ಜಪ್ತಿ ಮಾಡುತ್ತಾರೆ. ಇದೇ ರೀತಿ, ಅವರ ಮನೆಯಲ್ಲಿ ಇನ್ನೇನಾದರೂ ಸಮಾರಂಭಗಳು ನಡೆಯುವ ದಿವಸವೆ ಹೋಗಿ ಅವರ ಮನೆಯನ್ನು ಜಪ್ತಿ ಮಾಡುತ್ತಾರೆ. ಈ ಹಿಂಸೆ ಅಷ್ಟಿಷ್ಟು ಎಂಬುದಾಗಿ ಹೇಳುವುದಕ್ಕಾಗುವುದಿಲ್ಲ. ಬಡ ರೈತರಿಗೆ ಕೊಡತಕ್ಕ ಹಿಂಸೆ ಹೇಳತೀರದು, ಇಲ್ಲಿ ಬರತಕ್ಕ ಸಮಸ್ಯೆ ಮಾರ್ಜಿನಲ್ ಫಾರ್ಮರ್ಸ್ ಮತ್ತು ಸ್ಮಾಲ್ ಫಾರ್ಮರ್ಸ್‌ದ್ದು. ಬಿಗ್ ಫಾರ್ಮರ್ಸ್ ಪ್ರಶ್ನೆ ಬರುವುದೇ ಇಲ್ಲ. ಏಕೆಂದರೆ, ೧೦ ಎಕರೆ ಮೇಲೆ ಯಾರೂ ಭೂಮಿಯನ್ನು ಇಟ್ಟುಕೊಳ್ಳುವ ಹಾಗೆ ಇಲ್ಲ. ರೈತರಿಗೆ ಕೊಡತಕ್ಕಂತಹ ಸಾಲದ ಮೇಲೆ ಬಡ್ಡಿಯನ್ನು ಸೋಡಿ ರೂಪದಲ್ಲಿ ಕೊಡಬೇಕಾಗಿದೆ. ಯಾರಿಗೆ ಕೊಡುವುದಕ್ಕೆ ಶಕ್ತಿ ಇದೆ, ಅಂತಹವರಿಂದ ನಿರ್ದಾಕ್ಷಿಣ್ಯವಾಗಿ ವಸೂಲ್ಮಾಡಿ ಕೆಲವೊಂದು ಸಮಯದಲ್ಲಿ ಏನು ಮಾಡುತ್ತಾರೆಂದರೆ, ಉದಾಹರಣೆಗೆ ಷಾರ್ಟ್ ಟರ್ಮ್ ಲೋನ್ ಮೀಡಿಯಂ ಟರ್ಮ್ ಲೋನ್‌ಎಂಬುದಾಗಿ ಇದೆ; ಷಾರ್ಟ್ ಟರ್ಮ್ ಲೋನನ್ನು ಲಾಂಗ್ ಟರ್ಮ್ ಲೋನ್ ಆಗಿ ಪರಿವರ್ತನೆ ಮಾಡುವುದರಿಂದ ಅವನು ತನ್ನ ಷಾರ್ಟ್ ಟರ್ಮ್ ಲೋನನ್ನೂ ಕಟ್ಟುವುದಕ್ಕಾಗುವುದಿಲ್ಲ. ಹಾಗೂ ಕನ್‌ವರ್ಷನ್ ಆದ ಲಾಂಗ್ ಟರ್ಮ್ ಲೋನನ್ನೂ ಕಟ್ಟುವುದಕ್ಕಾಗುವುದಿಲ್ಲ. ಇದರಿಂದ ರೈತರಿಗೆ ಬಹಳ ಕಷ್ಟವಾಗಿದೆ. ಶ್ರೀಮಾನ್ ಶಿವನಂಜಪ್ಪನವರು ಮಾತನಾಡುತ್ತಾ ಬಹಳ ಅವಮಾನ ಮಾಡಿದರು. ಸೆಕ್ಷನ್ ೨೯(ಸಿ) ಮತ್ತು ೨೯(ಡಿ) ಈ ಎರಡನ್ನೂ ಡಿಲೀಟ್ ಮಾಡದಿದ್ದರೆ, ನಾವು ಮರ್ಯಾದೆಯಿಂದ ಕೆಲಸ ಮಾಡುವುದಕ್ಕಾಗುವುದಿಲ್ಲ. ಹೀಗಾದರೆ ಆ ಒಂದು ಸಂಸ್ಥೆಯಲ್ಲಿ ಡೈರಕ್ಟರ್ ಆಗಿ ಕೆಲಸ ಮಾಡತಕ್ಕಂತಹದ್ದು, ಅಫೆಕ್ಸ್ ಬ್ಯಾಂಕಿನಲ್ಲಿ ಡೈರೆಕ್ಟರ್ ಆಗಿ ಕೆಲಸ ಮಾಡತಕ್ಕಂತಹದ್ದು ಅಥವಾ ಜಿಲ್ಲಾ ಬ್ಯಾಂಕುಗಳಲ್ಲಿ ಡೈರೆಕ್ಟರ್ ಆಗಿ ಅಥವಾ ಅಧ್ಯಕ್ಷರಾಗಿ ಕೆಲಸ ಮಾಡತಕ್ಕಂತಹದ್ದು ಬಹಳ ಕಷ್ಟವಾಗುತ್ತದೆ. ಮತ್ತೆ ೩ ವರ್ಷಗಳಿಗೆ ಒಮ್ಮೆ ಚುನಾವಣೆಯಾಗಬೇಕೆಂದು ಇದೆ, ಆದರೆ ನನ್ನ ಅಭಿಪ್ರಾಯವೇನೆಂದರೆ ಪ್ರತಿ ವರ್ಷವೂ ಚುನಾವಣೆಯಾಗಬೇಕು. ಆದರೆ ಇದರಿಂದ ಸ್ವಲ್ಪ ತೊಂದರೆಯಾಗುತ್ತದೆ. ಆದ್ದರಿಂದ ಪ್ರತಿ ಮೂರು ವರ್ಷಕ್ಕೆ ಒಂದು ಸಾರಿ ಚುನಾವಣೆಯಾದರೆ ಸೊಸೈಟಿ ಚೆನ್ನಾಗಿ ಕೆಲಸ ಮಾಡುತ್ತದೆ. ಮತ್ತು ಜನರಿಗೂ ತಿಳುವಳಿಕೆ ಬರುತ್ತದೆ. ನಮ್ಮ ಜಿಲ್ಲೆಯಲ್ಲಿ ಅರೇಕಾ ಮಾರ್ಕೆಟಿಂಗ್ ಸೊಸೈಟಿ ಅಂತ ಇದೆ. ಆ ಸೊಸೈಟಿಯಲ್ಲಿ ೬-೭ ಲಕ್ಷ ರೂಪಾಯಿಗಳಷ್ಟು ದುಡ್ಡು ಹೋಯಿತು. ಅದನ್ನು ಯಾರೂ ಕೇಳಲೇ ಇಲ್ಲ. ಮತ್ತೆ ಅದೇ ರೀತಿ ಇನ್ನೊಂದು ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಅಂತ ಇತ್ತು. ಈಗ ಅದು ಅಸ್ತಿತ್ವದಲ್ಲಿಲ್ಲ. ಆ ಸೊಸೈಟಿಯಲ್ಲಿ ೭-೮ ಲಕ್ಷ ರೂಪಾಯಿಗಳಷ್ಟು ಹಣ ಹೋಯಿತು. ಅದನ್ನೂ ಕೂಡ ಯಾರೂ ಕೇಳಲೇ ಇಲ್ಲ. ಈ ಎರಡು ಸೊಸೈಟಿಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ನಮ್ಮ ಜಿಲ್ಲೆಯಲ್ಲಿ ಉಳಿದ ಎಲ್ಲ ಸಹಕಾರ ಸಂಘಗಳೂ ಕೆಲಸ ಮಾಡಲೇ ಇಲ್ಲ ಅಂತ ಹೇಳಿದರೆ ಹೇಗೆ ? ಮಧುಗಿರಿ, ಶಿರಾ ಈ ಎರಡು ತಾಲ್ಲೂಕುಗಳಲ್ಲಿ ಕಳೆದ ನಾಲ್ಕು ವರ್ಷಗಳಿಂದ ಮಳೆ ಬಾರದೆ ಅಲ್ಲಿ ಕೊಟ್ಟಂತಹ ಸಾಲಗಳನ್ನು ಇದುವರೆಗೂ ವಸೂಲಿ ಮಾಡಿಲ್ಲ; ಬಹಳ ಸುಸ್ತಿಯಾಗಿವೆ. ಒಂದು ಕೋಟಿ ರೂಪಾಯಿಗಳಿಗಿಂತ ಮೇಲ್ಪಟ್ಟು ಹಣ ವಸೂಲಾಗಬೇಕಾಗಿದೆ. ಅದೊಂದನ್ನು ಬಿಟ್ಟರೆ ನಮ್ಮ ಜಿಲ್ಲೆಯಲ್ಲಿ ಸಹಕಾರಿ ಚಳುವಳಿ (ಪದ್ಧತಿ) ಚೆನ್ನಾಗಿ ನಡೆಯುತ್ತಿದೆ. ಮತ್ತೆ ಇಲಾಖೆಯ ಅಧಿಕಾರಿಗಳಿಗೂ ಕೂಡ ಹೆಚ್ಚು ಹೆಚ್ಚು ಜವಾಬ್ದಾರಿಯನ್ನು ಕೊಡಬೇಕು. ಜಿಲ್ಲೆಗಳಲ್ಲಿರತಕ್ಕಂತಹ ಡೆಪ್ಯುಟಿ ರಿಜಿಸ್ಟ್ರಾರ್ ಹಾಗೂ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಮೂರು ತಿಂಗಳೊಳಗೆ ಯಾವ ಯಾವ ಸೊಸೈಟಿಯಲ್ಲಿ ಹಣ ದುರುಪಯೋಗವಾಗಿದೆ ಎಂಬುದನ್ನು ಪತ್ತೆ ಮಾಡಿ, ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳದೇ ಹೋದರೆ ನಾವು ಕೆಲಸ ಮಾಡುವುದು ಬಹಳ ಕಷ್ಟವಾಗುತ್ತದೆ. ಈಗ ಇರತಕ್ಕಂತಹ ಪದ್ಧತಿ ಏನಿದೆ ಎಂದರೆ, ಯಾವನೋ ಒಬ್ಬ ಅಧಿಕಾರಿ, ಯಾವುದೋ ಒಂದು ಸೊಸೈಟಿಯಲ್ಲಿ ಹಣ ಪೋಲಾಗಿರುವುದನ್ನು ಪತ್ತೆ ಮಾಡಿದರೆ, ಅವನು ರಿಟೈರ್ ಆದರೂ ಕೂಡ ಆ ಸೊಸೈಟಿಯಿಂದ ಪೋಲಾದಂತಹ ಹಣವನ್ನು ವಸೂಲು ಮಾಡಿರುವುದಿಲ್ಲ.

ಇವತ್ತಿನ ದಿವಸ ಸಹಕಾರ ಇಲಾಖೆಯನ್ನು ಬಹಳ ದೊಡ್ಡದನ್ನಾಗಿ ಮಾಡಿದ್ದೇವೆ. ಅದರಲ್ಲಿ ಎಷ್ಟು ಜನ ಜಾಯಿಂಟ್ ರಿಜಿಸ್ಟ್ರಾರ್‌ಗಳು ಇದ್ದಾರೆ. ಮತ್ತೆ ಎಷ್ಟು ಜನ ಅಡಿಷನ್ ರಿಜಿಸ್ಟ್ರಾರ್‌ಗಳು ಇದ್ದಾರೆ ಅವರಿಗೆ ನಾವು ಸಾಕಷ್ಟು ಸೌಕರ್ಯಗಳನ್ನು ಒದಗಿಸಿಕೊಟ್ಟು ಅವರುಗಳು ಸರಿಯಾಗಿ ಕೆಲಸ ಮಾಡಲಿಲ್ಲ ಅಂದರೆ ಹೇಗೆ ? ಅವರುಗಳು ಆಗಿಂದಾಗ್ಗೆ ಸೊಸೈಟಿಗಳನ್ನು ಇನ್‌ಸ್ಪೆಕ್ಷನ್ ಮಾಡಬೇಕು. ಯಾವ ಯಾವ ಸೊಸೈಟಿಗಳಲ್ಲಿ ಎಷ್ಟೆಷ್ಟು ಹಣ ದುರುಪಯೋಗವಾಗಿದೆ ಎಂಬುದನ್ನು ಕಂಡು ಹಿಡಿದು, ತಕ್ಷಣ ಅದರ ಮೇಲೆ ಕ್ರಮ ತೆಗೆದುಕೊಂಡು ಆ ಹಣವನ್ನು ವಸೂಲು ಮಾಡುವಂತಹ ಜವಾಬ್ದಾರಿಯನ್ನು ಜಿಲ್ಲಾ ರಿಜಿಸ್ಟ್ರಾರ್‌ರವರಿಗೂ ಹಾಗೂ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಿಗೂ ವಹಿಸಿದರೆ ಅವರು

ಗಳು ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಕೆಲಸ ಮಾಡುತ್ತಾರೆ. ಅದನ್ನು ಮಾಡದಿದ್ದರೆ ಅವರಿಗೆ ನಾವು ಬರೀ ಸೌಕರ್ಯಗಳನ್ನು ಒದಗಿಸಿಕೊಡುವುದರಲ್ಲಿ ಅರ್ಥವಿಲ್ಲ. ಸರಿಯಾಗಿ ಕೆಲಸ ಮಾಡಿದಂತಹವರಿಗೆ ಇಂಟೆನ್ಸೀವ್ ಬೆನಿಫಿಟ್‌ನ್ನು ಕೊಡುವಂತಹ ವ್ಯವಸ್ಥೆಯನ್ನು ಕಾನೂನಿನಲ್ಲಿ ಅಳವಡಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಪ್ರತಿಯೊಂದು ಜಿಲ್ಲೆಗಳಲ್ಲಿರತಕ್ಕಂತಹ ಸೊಸೈಟಿಗಳನ್ನು ಆಗಿಂದಾಗ್ಗೆ ಇನ್ಸ್‌ಪೆಕ್ಷನ್ ಮಾಡಬೇಕು. ಆ ರೀತಿ ಆಗಿಂದಾಗ್ಗೆ ಇನ್ಸ್‌ಪೆಕ್ಷನ್ ಮಾಡಿದಾಗ ಮಾತ್ರ ಯಾವ ಯಾವ ಸೊಸೈಟಿಗಳಲ್ಲಿ ಹಣ ದುರುಪಯೋಗವಾಗಿದೆ ಎಂಬುದು ಇಲಾಖೆಗೆ ಗೊತ್ತಾಗುತ್ತದೆ. ಇಲ್ಲದಿದ್ದರೆ ಅದು ಗೊತ್ತೇ ಆಗುವುದಿಲ್ಲ. ಆಗಿಂದಾಗ್ಗೆ ರಿವ್ಯೂ ಮಾಡಬೇಕು. ಈ ರೀತಿ ಸಹಕಾರ ರಂಗದಲ್ಲಿ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮತ್ತೊಮ್ಮೆ ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಂಡು, ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂತಹ ತಮಗೆ ವಂದಿಸಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ನಾನು ಕೆಲವು ಸೂಚನೆಗಳನ್ನು ಸರ್ಕಾರಕ್ಕೆ ಕೊಡಬೇಕೆಂದಿದ್ದೇನೆ. ನಾನು ನಿನ್ನೆ ಊರಿಗೆ ಹೋಗಿದ್ದರಿಂದ ಇವತ್ತು ಸಹಕಾರ ಇಲಾಖೆಯ ಬೇಡಿಕೆ ಇದೆ ಎಂಬುದು ನನಗೆ ಗೊತ್ತಾಗಲಿಲ್ಲ. ಮೊದಲೇ ಗೊತ್ತಿದ್ದರೆ ಚನ್ನಾಗಿರುತ್ತಿತ್ತು. ಏಕೆಂದರೆ, ಈ ಸಹಕಾರ ಇಲಾಖೆಯ ವಿಚಾರವಾಗಿ ಹೆಚ್ಚು ಮಾತನಾಡುವಂತಹ ಇಚ್ಛೆ ನನಗಿತ್ತು. ಆದರೆ ಈಗ ಸಮಯದ ಅಭಾವ ಇರುವುದರಿಂದ ಕೆಲವು ವಿಚಾರಗಳನ್ನು ಮಾತ್ರ ಹೇಳಬಯಸುತ್ತೇನೆ. ಪುನಃ ಪುನಃ ಹೇಳುವುದೇನೆಂದರೆ, ನಮ್ಮ ರಾಷ್ಟ್ರದ ಆರ್ಥಿಕ ಸ್ಥಿತಿ ಉನ್ನತಿಯಾಗಬೇಕಾದರೆ ಸಹಕಾರ ಚಳುವಳಿ ಯಶಸ್ವಿಯಾಗಬೇಕು ಎನ್ನುವ ಮಾತನ್ನು ಹೇಳುತ್ತಿದ್ದೇನೆ.

ಇವತ್ತು ಈ ಸಹಕಾರ ಚಳುವಳಿ ನಮ್ಮ ಜನತೆಯ ಪ್ರತಿಯೊಂದು ರಂಗದಲ್ಲೂ ಇದೆ. ಅದು ಒಕ್ಕಲುತನ ಇರಬಹುದು, ಉದ್ದಿಮೆ ಇರಬಹುದು, ವಿವಿಧ ರಂಗದಲ್ಲಿ ಶಿಕ್ಷಣ ಕೊಡತಕ್ಕಂತಹ ಸಂಸ್ಥೆ ಇರಬಹುದು. ಹೀಗೆ ನಾನಾ ತರಹದ ಸಹಕಾರ ಸಂಘ ಸಂಸ್ಥೆಗಳು ಇವೆ. ಈ ಸಹಕಾರ ಇಲಾಖೆ ಎಷ್ಟು ಚೆನ್ನಾಗಿ ಕೆಲಸ ನೋಡುತ್ತದೊ ಎಷ್ಟು ಚುರುಕಾಗಿ ಕೆಲಸ ಮಾಡುತ್ತದೋ ಅದರ ಮೇಲೆ ಈ ರಾಜ್ಯದ ಜನತೆಯ ಆರ್ಥಿಕ ಉನ್ನತಿ ಅವಲಂಬನೆ ಯಾಗಿರುತ್ತದೆ. ಆದುದರಿಂದ ಈ ಕಡೆಗೆ ಹೆಚ್ಚು ಆಸಕ್ತಿ ವಹಿಸುವುದು ಅತಿ ಸೂಕ್ತ ಎಂಬುದಾಗಿ ನಾನು ತಿಳಿದುಕೊಂಡಿದ್ದೇನೆ. ಅದಕ್ಕಾಗಿ ಮಾನ್ಯ ಸಹಕಾರ ಸಚಿವರು ಒಂದು ಮಹತ್ವವಾದ ಪಾತ್ರವನ್ನು ರಾಜ್ಯದ ಅಭಿವೃದ್ಧಿ ಕಾರ್ಯದಲ್ಲಿ ವಹಿಸಬೇಕಾಗಿದೆ. ಆ ಸಂದರ್ಭದಲ್ಲಿ, ಅವರು ಅಷ್ಟೇ ಎಚ್ಚರವನ್ನು ವಹಿಸಬೇಕಾಗಿದೆ. ಅವರು ಎಚ್ಚರಿಕೆಯನ್ನು ವಹಿಸದಿದ್ದರೆ ವಿಫಲರಾಗುತ್ತಾರೆ. ಇವತ್ತಿನ ದಿವಸ ಸರ್ಕಾರಿ ಸಂಸ್ಥೆಗಳ ಬಗ್ಗೆ ಸರ್ಕಾರಿ ಆಡಳಿತದ ಬಗ್ಗೆ ಅನೇಕ ಟೀಕೆಗಳನ್ನು ನಾವು ಕೇಳುತ್ತಿದ್ದೇವೆ ಒಳ್ಳೆಯ, ಸಂಸ್ಥೆಗಳೂ ಇವೆ, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಹೆಚ್ಚಿನ ಸಂಸ್ಥೆಗಳ ಆಡಳಿತ ಚೆನ್ನಾಗಿಲ್ಲ. ಅದಕ್ಕೆ ಕಾರಣರು ಯಾರು, ಕಾರಣ ಏನು ಎನ್ನುವ ಚರ್ಚೆಗೆ ನಾನು ಹೋಗುವುದಿಲ್ಲ. ಇವತ್ತು, ಸಹಕಾರ ಕ್ಷೇತ್ರದಲ್ಲಿ ಮುಖ್ಯವಾದ ಬದಲಾವಣೆಯನ್ನು ತ್ವರಿತಗತಿಯಿಂದ ತಂದಿರತಕ್ಕದ್ದು ಎಂದರೆ, ಸಹಕಾರ ಸಂಸ್ಥೆಗಳ ಒಂದು ಆಡಿಟ್ ಪದ್ಧತಿ. ನನಗೆ ಗೊತ್ತಿರುವಹಾಗೆ ಅನೇಕ ವರ್ಷಗಳ ಕಾಲದಿಂದ ಚರ್ಚೆ ಆದಮೇಲೆ ಈ ಆಡಿಟ್ ಡಿಪಾರ್ಟ್‌ಮೆಂಟನ್ನು ಬೇರ್ಪಡಿಸಿದ್ದೀರಿ. ಬರೀ ಬೇರ್ಪಡಿಸಿದರೆ ಕಾರ್ಯ ಆಗುವುದಿಲ್ಲ. ಚಿಕ್ಕ ಮತ್ತು ದೊಡ್ಡ ಸಂಸ್ಥೆಗಳ ಆಡಿಟ್ ವರ್ಷದ ಅಂತ್ಯದಲ್ಲಿ ಮುಗಿಯಬೇಕು. ಆಡಿಟ್ ರಿಪೋರ್ಟ್ ಸಿದ್ಧವಾದ ಮೇಲೆ ಅದನ್ನು ನೋಡಿ ತಪ್ಪಿತಸ್ಥರ ಮೇಲೆ ಉಗ್ರ ಕ್ರಮವನ್ನು ಕೈಗೊಳ್ಳುವುದಕ್ಕೆ ಅವಕಾಶವಿದೆ; ಅದನ್ನು ಮಾಡಬೇಕು. ಈ ದಿನ ಎಷ್ಟೋ ಸಹಕಾರಿ ಸಂಸ್ಥೆಗಳಲ್ಲಿ ಎಂದರೆ ಸುಮಾರು ೫೦ ಪರ್ಸೆಂಟ್ ಸಂಸ್ಥೆಗಳಲ್ಲಿ ಕಳೆದ ೫ ಅಥವಾ ೬ ವರ್ಷಗಳಿಂದ ಆಡಿಟ್ ಆಗಿಲ್ಲದಿರುವುದನ್ನು ಕಾಣುತ್ತಿದ್ದೇವೆ. ಕಂಪನಿಗಳಲ್ಲಿ ಆಡಿಟ್ ಡಿಪಾರ್ಟ್‌ಮೆಂಟಿನ ಅಧಿಕಾರಿಗಳು ಇಂಡಿಪೆಂಡೆಂಟಾಗಿ ಸರಿಯಾಗಿ ಆಡಿಟ್ ಮಾಡಿ ಕಂಪನಿಯ ಆನ್ಯುಯಲ್ ರಿಪೋರ್ಟ್‌ನ್ನು ಕೊಡಬೇಕಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಆಡಿಟ್ ಅಧಿಕಾರಿಗಳು ಸತತವಾಗಿ ಒಳ್ಳೆಯ ಶ್ರಮ ವಹಿಸಿ ತಮ್ಮ ಕೆಲಸವನ್ನು ಮಾಡಿದ್ದಾರೆ. ಕೆಲವು ಸಂಸ್ಥೆಗಳಲ್ಲಿ ಆಡಿಟ್ ಆಗದೇ ಅಲ್ಲಿನ ಹಣ ದುರುಪಯೋಗವಾಗಿ ಕೊನೆಯಲ್ಲಿ ೫ ವರ್ಷಕ್ಕೋ ೬ ವರ್ಷಕ್ಕೋ ಆಡಿಟ್ ಆಗಿ ಕಾರ್ಯಕ್ರಮ ತೆಗೆದುಕೊಳ್ಳುವ ಹೊತ್ತಿಗೆ, ದುರುಪಯೋಗವಾಗಿ ೫ ವರ್ಷ ೧೦ ವರ್ಷ ಕಳೆದಿರುತ್ತದೆ. ಆ ವೇಳೆಗೆ ಅಧಿಕಾರದಲ್ಲಿ ಇದ್ದವರು ಹೋಗಿರುತ್ತಾರೆ. ಒಂದು ವೇಳೆ ಅಧಿಕಾರಿಗಳು ಇದ್ದರೂ ಕೂಡ ಡೈರೆಕ್ಟರ್ಸ್ ಹಾಗೂ ಛೇರ್ಮನ್ಸ್ ಹೋಗಿರುತ್ತಾರೆ. ಆಗ ಯಾರ ಮೇಲೆ ಕಾರ್ಯಕ್ರಮ ಕೈಗೊಳ್ಳುವುದು? ಯಾರ ಮೇಲೂ ಕ್ರಮ ಕೈಗೊಳ್ಳುವುದಕ್ಕಾಗುವುದಿಲ್ಲ.

ಇನ್ನು ಎರಡನೆಯದಾಗಿ ಕೆಲವು ಸಹಕಾರಿ ಸಂಸ್ಥೆಗಳಲ್ಲಿ ೫ ಲಕ್ಷಕ್ಕಿಂತಲೂ ಹೆಚ್ಚು ಸರ್ಕಾರದ ಷೇರ್ ಕ್ಯಾಪಿಟಲ್ ಇದೆ ಎಂಬುದು ತಿಳಿದುಬಂದಿದೆ. ಗ್ಯಾರಂಟಿ ರೂಪದಲ್ಲಿ ಹಾಗೂ ಷೇರ್ ರೂಪದಲ್ಲಿ ೫೦ ಲಕ್ಷ. ೮೦ ಲಕ್ಷ ರೂಪಾಯಿ ಹಾಗೂ ಒಂದು ಕೋಟಿ ರೂಪಾಯಿಗಳವರೆವಿಗೂ ಕೆಲವು ಸಂಸೆಗಳಿಗೆ ಕೊಡಲಾಗಿದೆ. ಯಾವ ಸಂಸ್ಥೆಯಲ್ಲಿ ೩ ಕೋಟಿ ೪ ಕೋಟಿ ಬಂಡವಾಳ ಇದೆ, (ಬ್ಯಾಂಕ್‌ಗಳ ಮುಖಾಂತರ, ಶೇರ್ ಮುಖಾಂತರ) ಅಂತ ಸಂಸ್ಥೆಯ ಅಧಿಕಾರ ಡೈರೆಕ್ಟರ್ ಹಾಗೂ ಛೇರ್ಮನ್ ಮೇಲೆ ಇರುತ್ತದೆ. ಅಲ್ಲಿ ಹಣದ ದುರುಪಯೋಗವಾದರೆ ಹಣದ ಅಪವ್ಯಯವಾದರೆ ಆ ಜವಾಬ್ದಾರಿಯನ್ನು ತಾವು ಯಾರ ಮೇಲೂ ಫಿಕ್ಸ್ ಮಾಡುವುದಕ್ಕೆ ಆಗುವುದಿಲ್ಲ. ಅನೇಕ ಜನರು ಮಂತ್ರಿಗಳಾಗುವುದಕ್ಕಿಂತಲೂ ಮುಖ್ಯಮಂತ್ರಿಗಳಾಗುವುದಕ್ಕಿಂತಲೂ ದೊಡ್ಡದೊಡ್ಡ ಸಹಕಾರಿ ಸಂಘಗಳಲ್ಲಿ ಅಧ್ಯಕ್ಷರಾಗುವುದಕ್ಕೆ ಇಷ್ಟಪಡುತ್ತಾರೆ. ಇದಕ್ಕಿಂತಲೂ ಅದು ಲಾಭದಾಯಕವೆಂದು ತಿಳಿದುಕೊಂಡಿದ್ದಾರೆ. ಅವರ ಒಂದು ಖರ್ಚು ಏನು? ಈ ರೀತಿಯ ಒಂದು ವರ್ಗವೇ ಉದಯವಾಗಿದೆ ಅಂದರೆ ಸಹಕಾರಿ ಕೊ-ಅಪರೇಟಿವ್ ಕ್ಯಾಪಿಟಲಿಸ್ಟ್ ಎಂಬ ವರ್ಗ ಉದಯವಾಗಿದೆ ಇವರು ಸ್ವಂತ ಹಣವನ್ನು ಹಾಕಿರುವುದಿಲ್ಲ. ಸಾಹುಕಾರಿಗಳಾದರೆ ಮಾತ್ರ ಹಣವನ್ನು ತೊಡಗಿಸಿರುತ್ತಾರೆ ಅಂಥವರಿಗೆ ಲಾಭ ಮತ್ತು ನಷ್ಟದ ಒಂದು ಚಿಂತೆ ಇರುತ್ತದೆ. ಆದರೆ ಮೊದಲು ಹೇಳಿದ ವರ್ಗದವರಿಗೆ ಲಾಭ ನಷ್ಟದ ಚಿಂತೆ ಇರುವುದಿಲ್ಲ. ಏಕೆಂದರೆ, ಅವರು ಸ್ವಂತ ಬಂಡವಾಳವನ್ನು ಹಾಕದೇ ಎಲ್ಲ ರೀತಿಯ ಸೌಕರ್ಯಗಳನ್ನು, ಲಾಭಗಳನ್ನು, ಸುಖಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಆದುದರಿಂದ ಇಲ್ಲಿ ಹೆಸರನ್ನು ಹೇಳುವ ಅವಶ್ಯಕತೆ ಇಲ್ಲ. ಅವರ ವಿಮಾನದಲ್ಲಿಯ ಓಡಾಟವೇನು? ಅವರ ಟಿ.ಎ.ಡಿ.ಎ. ಏನು? ನಾನು ಇವತ್ತು ಚಿಕ್ಕಪುಟ್ಟ ಸಂಸ್ಥೆಗಳ ಬಗ್ಗೆ, ಗ್ರಾಮಾಂತರ ಪ್ರದೇಶದಲ್ಲಿ ಇರುವ ಸೊಸೈಟಿಗಳ ಬಗ್ಗೆ ಹೇಳುತ್ತಾ ಇಲ್ಲ. ದೊಡ್ಡ ದೊಡ್ಡ ಸಹಕಾರಿ ಸಂಸ್ಥೆಗಳು ಏನಿವೆ ಅವುಗಳ ಬಗ್ಗೆ ಹೇಳುತ್ತಿದ್ದೇನೆ. ನಾನು ಹೇಳತಕ್ಕದ್ದನ್ನು ಸಹಕಾರಿ ಮಂತ್ರಿಗಳು ಒಪ್ಪುತ್ತಾರೆಂದು ತಿಳಿದುಕೊಂಡಿದ್ದೇನೆ. ಇಲ್ಲಿ ಡೈರೆಕ್ಟರುಗಳಿಗೆ ರೆಸ್ಪಾನ್ಸಿಬಿಲಿಟಿಯನ್ನು ಫಿಕ್ಸ್ ಮಾಡಬೇಕು. ಕಂಪೆನಿ ಡೈರೆಕ್ಟರ್ಸ್ ಯಾವ ರೀತಿ ಸ್ವಂತ ಆಸ್ತಿಯನ್ನು ಬರೆದು ಕೊಡಬೇಕಾಗುತ್ತದೋ, ಯಾವ ರೀತಿ ಅವರಲ್ಲಿ ಜವಾಬ್ದಾರಿ ಇರುತ್ತದೋ ಆ ರೀತಿ ಇವರಿಗೂ ರೆಸ್ಪಾನ್ಸಿಬಿಲಿಟಿಯನ್ನು ಫಿಕ್ಸ್ ಮಾಡಬೇಕು. ಆಗ ಡೈರೆಕ್ಟರುಗಳಾಗಿ ಯಾರಿಗೆ ಜನಸೇವೆಯಲ್ಲಿ, ಸಹಕಾರಿ ಚಳುವಳಿಯಲ್ಲಿ ವಿಶ್ವಾಸ ಇರುತ್ತದೆ ಅಂತಹವರು ಮುಂದೆ ಬಂದಾಗ ಅಂತಹ ಸಹಕಾರಿ ಸಂಸ್ಥೆಗಳ ಡೈರೆಕ್ಟರುಗಳ ಮೇಲೆ ಜವಾಬ್ದಾರಿಯನ್ನು ವಹಿಸಬೇಕು. ಈಗ ಯಾವುದೇ ಒಂದು ಅವಶ್ಯಕವಿಲ್ಲದಂತಹ ಸಂಸ್ಥೆಗಳೂ ಸಹಾ ಇವೆ. ಅವರು ಪರ್ಚೇಸ್ ಮಾಡಲು ಬಾಂಬೆಗೆ ಹೋಗುತ್ತಾರೆ ಸ್ಟಡಿ ಮಾಡಲು ಡೆಲ್ಲಿಗೆ ಹೋಗುತ್ತಾರೆ; ಅದೂ ಸಂಸ್ಥೆಯ ಹಣದಿಂದ. ಈ ರೀತಿ ಕೋಟ್ಯಾಂತರ ರೂಪಾಯಿ ಹಣ ಪೋಲಾಗುತ್ತದೆ. ಇದಕ್ಕೆ ಏನಾದರೂ ಒಂದು ಕಡಿವಾಣ ಇದೆಯೇ? ಇದಕ್ಕೆ ಒಂದು ಅಮೆಂಡ್‌ಮೆಂಟ್ ತರದಿದ್ದರೆ ಸಹಕಾರಿ ಸಂಸ್ಥೆಗಳು ಉದ್ಧಾರವಾಗುವುದಿಲ್ಲ. ೫ ಲಕ್ಷಕ್ಕಿಂತ ಮೇಲ್ಪಟ್ಟು ಸರ್ಕಾರಿ ಹಣ ಯಾವ ಸಂಸ್ಥೆಗಳಲ್ಲಿ ಇದೆ ಅಲ್ಲಿಯ ಡೈರೆಕ್ಟರುಗಳಿಗೆ ರೆಸ್ಪಾನ್ಸಿಬಿಲಿಟಿಯನ್ನು ಫಿಕ್ಸ್ ಮಾಡಬೇಕು. ಅದರ ಸ್ವಂತ ಆಸ್ತಿಯಿಂದ ಅವರು ದುರುಪಯೋಗದ ಹಣವನ್ನು ಕೊಡುವ ರೀತಿಯಲ್ಲಿ ರೆಸ್ಪಾನ್ಸಿಬಿಲಿಟಿಯನ್ನು ಫಿಕ್ಸ್ ಮಾಡಬೇಕು. ಇಲ್ಲದಿದ್ದರೆ ದುಡ್ಡು ತಿಂದು ತಪ್ಪಿಸಿ ಕೊಂಡು ಬಿಡುತ್ತಾರೆ. ವರ್ಷಗಳು ಉರುಳಿ ಬಿಟ್ಟರೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಈಗ ಜನ ಮಂತ್ರಿಗಳಾಗುವುದಕ್ಕಿಂತ, ಮುಖ್ಯ ಮಂತ್ರಿಗಳಾಗುವುದಕ್ಕಿಂತ ಉದ್ಯಮಗಳಲ್ಲಿ ಅಧ್ಯಕ್ಷರಾಗುವುದಕ್ಕೆ ಇಷ್ಟಪಡುತ್ತಾರೆ. ಜವಾಬ್ದಾರಿ ಇಲ್ಲದೆ, ಉತ್ತರ ಕೊಡುವ ಹೊಣೆ ಇಲ್ಲದೆ. ಎಲ್ಲ ಸುಖಗಳನ್ನು ಅಲ್ಲಿ ಅನುಭವಿಸಬಹುದು. ಈ ರೀತಿಯ ಸಾಹುಕಾರಿ ಸಹಕಾರಿ ಸಂಸ್ಥೆಗಳ ಮೇಲೆ ಅಮೆಂಡ್‌ಮೆಂಟ್ ತರುವುದು ಒಳ್ಳೆಯದು. The Directors must be made responsible for losses. Regarding annual audit, the responsibility may be fixed on the Chairman and Official members including Directors. ಆದರೆ ಕಂಪೆನಿ ಆಕ್ಟಿನಲ್ಲಿ ಆ ರೀತಿ ಇಲ್ಲ. ಕಂಪೆನಿಯ ಲಾಭ ಮತ್ತು ಲುಕ್ಸಾನಿಗೂ ಅವರು ಜವಾಬ್ದಾರರಾಗುತ್ತಾರೆ, ಅದನ್ನು ವಿಸ್ತಾರವಾಗಿ ಹೇಳಲು ಈಗ ಸಮಯವಿಲ್ಲ.

SRI R. GUNDU RAO.—Any other suggestions from the hon. Members, we will be happy to receive them. we will see that your suggestions are taken up well.

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್ನು ಮುಂದುವರಿಸಿ ಹೇಳುವುದಾದರೆ, ರೈತರಿಗೆ ಸಾಲ ಕೊಡುವುದಕ್ಕೆ ಕಾರ್ಡ್ ಸಿಸ್ಟಮ್ ಅನ್ನು ಇಂಟ್ರಡ್ಯೂಸ್ ಮಾಡಬೇಕು ಎಂದು ನಾನು ಆಗಲೇ ಹೇಳಿದ್ದೇನೆ. ಇದರಿಂದ ರೈತರಿಗೆ ಅಗತ್ಯತೆ ತೊಂದರೆ ಹೋಗುತ್ತದೆ. ಇನ್ನು ಗೊಬ್ಬರದ ವಿಚಾರದಲ್ಲಿ ಹೇಳುವುದಾದರೆ, ಒಮ್ಮೆ ಗೊಬ್ಬರದ ಬೆಲೆ ಜಾಸ್ತಿಯಾದಾಗ ರೇಟು ಹೆಚ್ಚಾಯಿತಲ್ಲ ಎಂದು ಒಂದೇ ದಿನದಲ್ಲಿ ಹಳೇ ರೇಟಿಗೇ ಸಹಕಾರಿ ಸಂಸ್ಥೆಗಳವರು ಗೊಬ್ಬರವನ್ನು ಮಾರಾಟ ಮಾಡಿದರು. ಈ ದರ ಜಾಸ್ತಿಯಾದಾಗ ಹಿಂದಿನ ದಿವಸ ಎಷ್ಟು ಸ್ಟಾಕ್ ಇತ್ತು ? ಆ ಹಿಂದೆ ಎಷ್ಟು ಸ್ಟಾಕ್ ಇತ್ತು ಹಾಗೂ ಎಷ್ಟು ಮಾರಾಟ ಮಾಡಲಾಗಿದೆ ? ಯಾವ ದರದಲ್ಲಿ ಮಾರಾಟ ಮಾಡಲಾಗಿದೆ ಎಂಬುದನ್ನು ತಿಳಿದು ಕೊಳ್ಳಲಾಯಿತೆ ? ಹಿಂದೆ ಒಂದು ಸಲ ನಾನು ಮತ್ತು ದೇವೇಗೌಡರು ಈ ಗೊಬ್ಬರದ ಕಥೆಯನ್ನೇ ಬರೆದಿದ್ದೇವೆ. ಸ್ಕೂಟರ್ ಮೇಲೆ ಸೈಕಲ್ ಮೇಲೆ ಮದ್ರಾಸಿನಿಂದ ಬೆಂಗಳೂರಿಗೆ ಗೊಬ್ಬರವನ್ನು ತಂದ ಕಥೆ ಇದೆ, ಅದು ಬೇರೆ, ಆದರೆ ಈಗ ಯಾವ ಯಾವ ಸಹಕಾರಿ ಸಂಸ್ಥೆಗಳಲ್ಲಿ ಎಷ್ಟೆಷ್ಟು ಸ್ಟಾಕ್ ಇತ್ತು, ಎಷ್ಟು ಮಾರಾಟವಾಗಿದೆ, ಅವರು ಎಂದು ಹಣವನ್ನು ಡಿಪಾಸಿಟ್ ಮಾಡಿದ್ದಾರೆ ಎಂಬ ಬಗ್ಗೆ ಅಂಕಿಅಂಶಗಳನ್ನು ಕೊಡಿ. ಸಹಕಾರಿ ಸಂಸ್ಥೆಗಳು ಯಾವ ರೀತಿ ನಡೆಯುತ್ತಿವೆ ಎಂಬುದಕ್ಕೆ ಇದು ಒಂದೇ ಉದಾಹರಣೆ ಸಾಕು. ಸಹಕಾರ ಸಂಘಗಳಲ್ಲಿ ಹಣ ಎಲ್ಲಿ ಹೋಗುತ್ತದೆ ಎನ್ನುವುದಕ್ಕೆ ಗೊಬ್ಬರದ ಒಂದು ಉದಾಹರಣೆ ಕೊಡುತ್ತೇನೆ. ಯಾವುದೇ ಮಾರಾಟ ಮಾಡಬೇಕಾದರೂ ಮಾರ್ಕೆಟ್ ಸಂಸ್ಥೆಯ ಮುಖಾಂತರ ಮಾಡಬೇಕಾಗಿರುತ್ತದೆ. ಅದು ಕರ್ನಾಟಕದಲ್ಲಿ ಎಲ್ಲೆಲ್ಲಿ ಬ್ರಾಂಚ್ ತೆಗೆದಿರುತ್ತದೆ ಅಲ್ಲೆಲ್ಲ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ವಿತರಣೆ ಮಾಡಬೇಕೇ ವಿನಃ ಕ್ಯಾಷ್ ಮೂಲಕ ವಿತರಣೆ ಮಾಡತಕ್ಕಂಥದಲ್ಲ. ದಯವಿಟ್ಟು ಮಾನ್ಯ ಮಂತ್ರಿಗಳು ಇದನ್ನು ತಿಳಿಯಬೇಕು. ಭಾನುವಾರ ದರ ಜಾಸ್ತಿಯಾಗಿದ್ದರೆ, ಸೋಮವಾರವೇ ಪೂರಾ ಗೊಬ್ಬರವೆಲ್ಲ ವಿತರಣೆಯಾಗಿದೆಯೆಂಬುದು ಮಾನ್ಯ ಮಂತ್ರಿಗಳಿಗೂ ಗೊತ್ತಿರಬಹುದು.

SRI M. C. NANAIAH.—If there are any lapses, let the Hon. Member bring it to the notice of the Government.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಯಾವುದೇ ಒಂದು ಸಂಸ್ಥೆಯ ಮೇಲೆ ಆಪಾದನೆ ಮಾಡುತ್ತಾ ಇಲ್ಲ. ನನ್ನ ಗಮನಕ್ಕೆ ಬಂದ ವಿಚಾರವನ್ನು ಹೇಳುತ್ತಾ ಇದ್ದೇನೆ. ಒಂದು ತಿಂಗಳು ಗೊಬ್ಬರ ಮಾರಾಟವೇ ಆಗದಿದ್ದುದು ಒಂದೇ ದಿವಸದಲ್ಲಿ ೧೦ ಲಕ್ಷ ರೂಪಾಯಿಗಳ ಮಾರಾಟವಾಗಿದೆ. ಅದು ಡ್ರಾಫ್ಟ್ ಮೂಲಕವೇ ಆಗಲಿ, ಬೇರೆ ಯಾವುದರ ಮೂಲಕವೇ ಆಗಲಿ, ಅದರಿಂದ ಏನು ಅರ್ಥವಾಗುತ್ತದೆ ? ಒಂದು ವಾರದಿಂದ ವ್ಯಾಪಾರವಿಲ್ಲ, ಎರಡು ವಾರದಿಂದ ವ್ಯಾಪಾರವಿರಲಿಲ್ಲ, ಒಂದೇ ದಿವಸದಲ್ಲಿ ಲಕ್ಷಾಂತರ ರೂಪಾಯಿಗಳ ಮಾರಾಟ ಮಾಡಿರುತ್ತಾರೆಂದರೆ ಅದರ ಅರ್ಥವನ್ನು ತಾವು ಹೇಳಬೇಕು. ಯಾವುದೇ ವಸ್ತುವಾಗಲಿ, ಅದು ಸೊಸೈಟಿ ಮುಖೇನ ರಿಲೀಸ್ ಆಗಬೇಕು ಎನ್ನುವ ನಿಯಮ ಇದೆ. ಇದನ್ನು ಏತಕ್ಕೆ ಒತ್ತಿ ಒತ್ತಿ ಹೇಳುತ್ತಿದ್ದೇನೆ ಎಂದರೆ ಸಹಕಾರಿ ಸಂಸ್ಥೆಗಳು ಇರುವುದು ರೈತರಿಗೆ ಸಹಕಾರ ಮಾಡುವುದಕ್ಕೆ. ಆದರೆ ಈ ಸಂಸ್ಥೆಗಳಲ್ಲಿ ಈ ರೀತಿಯಾದ ವ್ಯವಹಾರ ನಡೆದರೆ ಮುಂದೆ ರೈತನ ಗತಿ ಏನಾಗಬೇಕು ?

ಮತ್ತೊಂದು ವಿಷಯ ಏನೆಂದರೆ, ಸೊಸೈಟಿಗಳಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗುತ್ತದೆಂಬುದು ಮಾನ್ಯ ಸಚಿವರಿಗೂ ಚೆನ್ನಾಗಿ ತಿಳಿದಿರುತ್ತದೆ. ಇದನ್ನು ತಡೆಗಟ್ಟಬೇಕೆಂದರೆ ಕಾಲಕಾಲಕ್ಕೆ ಸೊಸೈಟಿಗಳ ಆಡಿಟ್ ಆಗಬೇಕು. ಮತ್ತು ಆಡಿಟ್ ರಿಪೋರ್ಟನ್ನು ಕೊಡಬೇಕು ಆದರೆ ಈ ಸೊಸೈಟಿಗಳಲ್ಲಿ ೮ ವರ್ಷಗಳಾದರೂ ಆಡಿಟ್ ಆಗಿರುವುದಿಲ್ಲ ಕೂಡಲೇ ಇದರ ಬಗ್ಗೆ ಆಕ್ಷನ್ ತೆಗೆದುಕೊಳ್ಳಬೇಕು. ನಿಮ್ಮ ಆಡಿಟರ್‌ಗಳು ಮೂರು ವರ್ಷ ಇದ್ದು ಆಡಿಟ್ ರಿಪೋರ್ಟ್ ಕೊಡದೆ ಹೋಗಿಬಿಡುತ್ತಾರೆ, ಹಾಗೆಯೆ ಮುಂದೆ ಬಂದವರು ಕೂಡ ಆಡಿಟ್ ರಿಪೋರ್ಟ್ ಕೊಡುವುದಿಲ್ಲ. ಜನತಾ ಬಜಾರ್‌ಗಳು, ಸೊಸೈಟಿಗಳು ಲಿಕ್ವಿಡೇಟ್ ಆದರೂ ಆಡಿಟ್ ರಿಪೋರ್ಟ್ ಕೊಡುವುದಿಲ್ಲ. ೫೦ ಸಾವಿರ ರೂಪಾಯಿಗಳನ್ನು ಮಿಸ್ ಅಪ್ರೋಪ್ರಿಯೇಷನ್ ಆಗಿದ್ದರೂ, ಬೋರ್ಡ್ ಆಕ್ಷನ್ ತೆಗೆದುಕೊಂಡಿಲ್ಲ. ಇದರ ಬಗ್ಗೆ ಏನು ಹೇಳುತ್ತೀರಿ ? ನಿಮ್ಮ ಕೋ ಆಪರೇಟೀವ್ ಡಿಪಾರ್ಟ್‌ಮೆಂಟಿನಲ್ಲಿ ಜೀವಂತವಾಗಿ ಅನೇಕ ರೂಲ್‌ಗಳನ್ನು ಮಾಡಿಟ್ಟಿರುತ್ತೀರಿ. ಆದರೆ ಅವು ಇದ್ದರೂ ಅಸಮರ್ಥವಾಗಿರುತ್ತವೆ. ನಿಮ್ಮ ಅಧಿಕಾರಿಗಳು ಇದರ ಬಗ್ಗೆ ಪ್ರಶ್ನೆ ಮಾಡುವುದೇ ಇಲ್ಲ. ನೀವು ಒಬ್ಬ ಅಧಿಕಾರಿಯನ್ನು ಕೆಲವು ವರ್ಷಗಳ ಕಾಲ ಜನತಾ ಬಜಾರ್‌ಗೆ ಮೇನೇಜರ್ ಆಗಿ ಕಳುಹಿಸುತ್ತೀರಿ, ಅನಂತರ ಇಂಡಸ್ಟ್ರಿಯಲ್ ಸೆಕ್ರೆಟರಿಯಾಗಿ ಕಳುಹಿಸಿಬಿಡುತ್ತೀರಿ, ಹೀಗೆ ಒಂದೊಂದು ಕಡೆಗೆ ವರ್ಗಾಯಿಸುತ್ತಲೇ ಇರುತ್ತೀರಿ. ಕೋ ಆಪರೇಟಿವ್

ಡಿಪಾರ್ಟ್‌ಮೆಂಟಿನವರಿಗೆ ಟೆಕ್ಸ್‌ಟೈಲ್ ವಿಷಯ ಗೊತ್ತಿರುವುದಿಲ್ಲ. ಮ್ಯಾನೇಜಿಂಗ್ ಡೈರೆಕ್ಟರ್ ಆದವರು ಲಕ್ಷಾಂತರ ರೂಪಾಯಿಗಳಷ್ಟು ಬಟ್ಟೆಯನ್ನು ಖರೀದಿ ಮಾಡುತ್ತಾರೆ, ಲಕ್ಷಾಂತರ ರೂಪಾಯಿಗಳ ಹತ್ತಿಯನ್ನು ಖರೀದಿ ಮಾಡುತ್ತಾರೆ ಆದರೆ ಅವರಿಗೆ ಯಾವ ಬಟ್ಟೆ, ಯಾವ ಹತ್ತಿಯನ್ನು ಖರೀದಿ ಮಾಡಬೇಕೆಂಬುದು ಗೊತ್ತಿರುವುದಿಲ್ಲ. ಆದ್ದರಿಂದ ಈ ಒಂದು ಪ್ರಶ್ನೆ ಉದ್ಭವವಾಗಿರುವುದು ನನ್ನ ಅನುಭವವನ್ನು ಹೇಳುವುದಾದರೆ ಕೇಡರ್ ವೈಸ್ ಅಂದರೆ ಮಾರ್ಕೆಟಿಂಗ್, ಕನ್‌ಸ್ಯೂಮರ್ಸ್ ಕೋ ಆಪರೇಟೀವ್ ಸೊಸೈಟೀಸ್ ಇಂಡಸ್ಟ್ರಿಯಲ್ ಕೋ ಆಪರೇಟಿವ್ ಸೊಸೈಟೀಸ್‌ಗೆ ಎಕ್ಸ್‌ಪರ್ಟ್‌ಗಳನ್ನು ನೇಮಕ ಮಾಡಿದರೆ, ಅಲ್ಲಿ ಆಗತಕ್ಕಂಥ ಹಾನಿಯನ್ನು ತಪ್ಪಿಸಲು ಸಾಧ್ಯವಾಗುತ್ತದೆ. ಮೂರು ವರ್ಷಗಳಿಗೆ ಒಂದಾವರ್ತಿ ಅಸಿಸ್ಟೆಂಟ್ ರಿಜಿಸ್ಟ್ರಾರ್, ಡೆಪ್ಯೂಟಿ ರಿಜಿಸ್ಟ್ರಾರ್‌ಗಳು ವರ್ಗವಾಗಿ ಹೋಗಿ ಬಿಟ್ಟರೆ ಆ ಸಂಸ್ಥೆಯಲ್ಲಿ ಪಡೆದಂಥ ಅನುಭವ ಏನು ಪ್ರಯೋಜನಕ್ಕೆ ಬರುವುದಿಲ್ಲ. ಕೇಡರ್ ಸಿಸ್ಟಮ್ ಅಧಿಕಾರಿಗಳನ್ನು ಸಹಕಾರ ಸಂಸ್ಥೆಗಳಲ್ಲಿ ನೇಮಕ ಮಾಡುವುದರಿಂದ ಹಣದ ಅಪವ್ಯಯ, ದುರುಪಯೋಗ ಆಗತಕ್ಕಂಥದ್ದು ಕಡಿಮೆಯಾಗುತ್ತದೆ. ಹಣ ದುರುಪಯೋಗ ಮಾಡಿದಂಥ ಅಧಿಕಾರಿ ಯಾರೇ ಇರಲಿ ಅಂಥವರ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳತಕ್ಕಂಥ ತಿದ್ದುಪಡಿಯನ್ನು ತರಬೇಕು. ಇದು ಆಗದಿದ್ದರೆ ಬಹಳ ಕಷ್ಟವಾಗುತ್ತದೆ. ಸಹಕಾರಿ ಇಲಾಖೆಗಳಲ್ಲಿ ನಾಮಿನೇಷನ್ ಮಾಡತಕ್ಕಂಥದ್ದರ ಬಗ್ಗೆ ಹೇಳುವುದಾದರೆ, ಖಾಲಿ ಇರತಕ್ಕಂಥ ಜಾಗಕ್ಕೆ ಹೊಸದಾಗಿ ಬರುತ್ತಾರೆ. ಇದರಲ್ಲಿ ಎಷ್ಟರ ಮಟ್ಟಿನ ರಾಜಕೀಯ ನಡೆಯುತ್ತದೆಂದರೆ ಚುನಾವಣೆಯ ಹಿಂದಿನ ರಾತ್ರಿ ದೊಡ್ಡ ದೊಡ್ಡ ಜನರನ್ನು ನಾಮಿನೇಷನ್ ಮಾಡುತ್ತಾರೆ. ಅಲ್ಲದೆ ಒಂದೊಂದು ಸಲ ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದಾರೆಂದು ನಾಮಿನೇಷನ್ ಮಾಡುವಂಥ ಪದ್ಧತಿ ಇರುತ್ತದೆ. ಮಹಾರಾಷ್ಟ್ರ ಮತ್ತು ಗುಜರಾತಿನಲ್ಲಿ ಈ ರೀತಿಯಾಗಿ ನಾಮಿನೇಷನ್ ಮಾಡತಕ್ಕಂಥ ಪದ್ಧತಿ ಇಲ್ಲ. ಗುಜರಾತಿನಲ್ಲಿ ಬಹಳ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ನಮ್ಮ ಮಿತ್ರರಾದ ಕುರಿಯನ್‌ರವರು ಹೇಳಿದ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರು ಒಂದು ಡೈರಿ ಪ್ರಾಜೆಕ್ಟನ್ನು ನಡೆಸುತ್ತಿದ್ದಾರೆ. ಯಾವ ಪಕ್ಷವೇ ಬರಲಿ, ಯಾವ ಸರ್ಕಾರವೇ ಬರಲಿ ಯಾವ ಟ್ಯಾಕ್ಸ್ ಆಫೀಸರ್ ಬರಲಿ, ಈವತ್ತಿನವರೆಗೂ ಯಾರೂ ಯಾವ ವಿಧವಾದ ತೊಂದರೆಯನ್ನು ಕೊಟ್ಟಿಲ್ಲವೆಂದು ಹೇಳುತ್ತಾರೆ ಅಷ್ಟೊಂದು ಸ್ವತಂತ್ರವಾಗಿ ಆ ಡೈರಿ ನಡೆಯುತ್ತಾ ಇದೆ. ಫಿಲ್ ಪ್ರಿಡಮ್‌ನಿಂದ ನಡೆಯುತ್ತಾ ಇದೆ. ಅಲ್ಲಿ ಒಂದು ಹೈನುಗಾರಿಕೆಯನ್ನು ಹೊಸದಾಗಿಪ್ರಾರಂಭ ಮಾಡಲು ವರ್ಲ್ಡ್ ಬ್ಯಾಂಕಿನಿಂದ ಹಣ ಬರುತ್ತಾ ಇದೆ. ಆದ್ದರಿಂದ ಸಹಕಾರಿ ಸಂಘಗಳಿಗೆ, ಸಹಕಾರಿ ಸಂಸ್ಥೆಗಳಿಗೆ ಸ್ವತಂತ್ರವನ್ನು ಕೊಡಬೇಕು. ಎಲ್ಲಿ ದುರುಪಯೋಗ ನಡೆಯುತ್ತದೆ ಅಲ್ಲಿ ಶಿಕ್ಷೆಯನ್ನು ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಹೀಗೆ ಮಾಡುವುದರಿಂದ ಸಹಕಾರಿ ಚಳುವಳಿ ಯಾಗುವುದು ನಿಂತು ಜನತಾ ಚಳುವಳಿ ಆಗುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಈ ರೀತಿಯಾದ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಗಂಗಹನುಮಯ್ಯ (ಮಧುಗಿರಿ).—ಮಾನ್ಯ ಅಧ್ಯಕ್ಷರೇ ಸಹಕಾರ ಇಲಾಖೆಯ ಬೇಡಿಕೆಯನ್ನು ಸಮರ್ಥಿಸುತ್ತಾ ಒಂದೆರಡು ಮಾತುಗಳನ್ನು ಆಡಬಯಸುತ್ತೇನೆ. ಈಗಾಗಲೇ ಮಾನ್ಯ ಸದಸ್ಯರನೇಕರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ನಾನಾದರೂ ಕೂಡ ಒಂದೆರಡು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಹಾಲಿನ ಉತ್ಪಾದನಾ ಸಹಕಾರಿ ಸಂಘಗಳನ್ನು ತೆಗೆದುಕೊಂಡರೆ, ಅದರಲ್ಲಿ ಏನಾಗಿದೆ ಎಂದರೆ ಹರಿಜನ ಗಿರಿಜನರಲ್ಲಿ ಯಾರಾದರೂ ಒಂದು ಹಸುವನ್ನು ಇಟ್ಟುಕೊಂಡಿದ್ದರೆ ಆತನನ್ನು ಒಬ್ಬ ಸದಸ್ಯನನ್ನಾಗಿ ಮಾಡಿಕೊಳ್ಳಬೇಕೆಂದು ಹಿಂದೆ ಕಾನೂನು ಇತ್ತು ಆ ಕಾನೂನನ್ನು ಈವಾಗ ತೆಗೆದು ಬಿಟ್ಟಿರುತ್ತಾರೆ. ಎಷ್ಟೋ ಜನ ಹರಿಜನರು ತಮ್ಮ ಸ್ವಂತ ಹಣದಿಂದ ಹಸುವನ್ನು ಕೊಂಡು ಕೊಳ್ಳಲು ಸಾಧ್ಯವಿರುವುದಿಲ್ಲ. ಅಂಥವರು ಸಹಕಾರಿ ಸಂಘಗಳಲ್ಲಿ ಮೆಂಬರಾಗಬಹುದೆಂದರೆ ಎಷ್ಟು ಜನ ಮೆಂಬರಾಗಲು ಸಾಧ್ಯವಾಗುತ್ತದೆ ? ಇದು ಬಹಳ ಕಷ್ಟವಾದ ಸಮಸ್ಯೆಯಾಗುತ್ತದೆ. ಈ ಸಮಸ್ಯೆಯನ್ನು ಪರಿಹರಿಸಬೇಕಾದರೆ ಈವತ್ತು ಹರಿಜನ ರೈತರು ಯಾರು ಇರುತ್ತಾರೋ ಅವರ ಅಂಕಿ ಅಂಶಗಳನ್ನು ತೆಗೆದುಕೊಂಡು ಹಸುಗಳನ್ನು ಕೊಂಡು ಕೊಳ್ಳಲು ಹಣವನ್ನು ಕೊಟ್ಟು ಅವರನ್ನು ಸಹಕಾರಿ ಹಾಲು ಉತ್ಪಾದಕರ ಸಂಘಗಳಲ್ಲಿ ಮೆಂಬರ್ ಆಗುವಂತೆ ಮಾಡಬೇಕು. ನಮ್ಮ ಕರ್ನಾಟಕದ ಮುಖ್ಯ ಮಂತ್ರಿಗಳಾದ ಶ್ರೀ ಗುಂಡೂರಾಯರು ಇದಕ್ಕೆ ತಕ್ಕ ಏರ್ಪಾಡನ್ನು ಮಾಡುವಂತೆ ಸೂಚನೆ ನೀಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

೮ ಪಿ. ಎಂ.

ಮಾನ್ಯ ಸಭಾಧ್ಯಕ್ಷರೆ, ಸಹಕಾರ ಸಂಸ್ಥೆಗಳಲ್ಲಿ, ಸಕ್ಕರೆ ಕಾರ್ಖಾನೆಗಳಲ್ಲಿ, ಪಿ. ಎಲ್. ಡಿ. ಬ್ಯಾಂಕ್‍ಗಳಲ್ಲಿ, ಡಿ. ಸಿ. ಸಿ. ಬ್ಯಾಂಕ್‍ಗಳಲ್ಲಿ ಇನ್ನೂ ಮುಂತಾದ ಕಡೆಗಳಲ್ಲಿ ಹರಿಜನರನ್ನು ನಾಮಿನೇಟ್ ಮಾಡಬೇಕೆಂದಿದೆ. ಆದರೆ ಅಲ್ಲಿನ ವಾತಾವರಣ ಹೇಗಿದೆ ಎಂದರೆ, ಹರಿಜನರು ಎಂ. ಎಲ್. ಎ. ಚುನಾವಣೆಗೆ ನಿಂತು ಗೆದ್ದು ಬರಬಹುದು. ಆದರೆ ಈ ಬ್ಯಾಂಕ್‍ಗಳಲ್ಲಿ ಸಹಕಾರ ಸಂಘಗಳಲ್ಲಿ ನಡೆಯುತ್ತಕ್ಕ ಚುನಾವಣೆಗೆ ನಿಂತು ಗೆದ್ದು ಬರುವುದಕ್ಕಾಗುವುದಿಲ್ಲ; ಅಷ್ಟೊಂದು ಕಷ್ಟವಾಗಿದೆ. ಆದ್ದರಿಂದ ನಾನು ತಮಗೆ ಹೇಳುವುದೇನೆಂದರೆ, ಈ ಬ್ಯಾಂಕ್‍ಗಳಲ್ಲಿ ಹರಿಜನರಿಗೆ ಪ್ರಾತಿನಿಧ್ಯವನ್ನು ಕೊಡಬೇಕು ಎಂದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾನೂನಿಗೆ ತಿದ್ದುಪಡಿ ಮಾಡಿ, ಸಹಕಾರ ಸಂಸ್ಥೆಗಳಲ್ಲಿ, ಬ್ಯಾಂಕ್‍ಗಳಲ್ಲಿ ೩–೪ ಜನ ಹರಿಜನರನ್ನು ನಾಮಿನೇಟ್ ಮಾಡಬೇಕೆಂದು ಮಾಡಿರುವುದು ನನ್ನ ನೆನಪಿನಲ್ಲಿದೆ. Out of 15 there will be a Director belonging to SC.

ಶ್ರೀ ಗಂಗಹನುಮಯ್ಯ.—ನಮ್ಮ ಹರಿಜನರಲ್ಲಿ ಪೈಪೋಟಿ ಬರುತ್ತಿದೆ. ಇವತ್ತು ಹರಿಜನರ ಲಿಸ್ಟ್‌ನಲ್ಲಿ ಸೇರಿಸಿರತಕ್ಕ ಗಿರಿಜನರ ವಿಚಾರದಲ್ಲಿ ಹೇಳುವುದಾದರೆ, ಬಹಳ ಮಂದಿ ಗಿರಿಜನರು ತುಂಬಾ ಹಣವಂತರಿದ್ದಾರೆ. ಅವರಲ್ಲಿ ಬಡವರೇ ಇಲ್ಲ ಅವರು ಒಳ್ಳೆಯ ರಾಜಕಾರಣಿಗಳು ಮತ್ತು ಪ್ರಭಾವಶಾಲಿಗಳು ಆಗಿದ್ದಾರೆ. ಆದರೆ ಹರಿಜನರಲ್ಲಿ ಅಂಥ ಪ್ರಭಾವಶಾಲಿಗಳು ಯಾರೂ ಇಲ್ಲ. ಯಾರು ಹಣವಂತರು, ಪ್ರಭಾವಶಾಲಿಗಳು ಇರುತ್ತಾರೆ ಅಂಥವರು ಮಾತ್ರ ಚುನಾವಣೆಯಲ್ಲಿ ಗೆದ್ದು ಬರುತ್ತಾರೆ. ಇದರಿಂದಾಗಿ ಹರಿಜನರಿಗೆ ಇರುವ ಒಂದೊಂದು ಸ್ಥಾನವೂ ತಪ್ಪಿಹೋದಂತಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀಮಾನ್ ವಿ. ಎಲ್. ಶಿವಪ್ಪನವರು ಹೇಳಿದಂತೆ ಮಧುಗಿರಿ, ಸಿರಾ, ಪಾವಗಡ, ತಾಲೂಕುಗಳಲ್ಲಿ ಮಳೆ ಬೆಳೆ ಇಲ್ಲ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ, ಮತ್ತು ಸರ್ಕಾರವೂ ಕೂಡ ಒಪ್ಪಿಕೊಳ್ಳುತ್ತದೆ. ಆದರೆ ಅಲ್ಲಿ ರೈತರಿಗೆ ಪಿ. ಎಲ್. ಡಿ. ಬ್ಯಾಂಕ್ ಅಥವಾ ಬೇರೆ ಬ್ಯಾಂಕ್‍ಗಳವರು ಏನು ಸಾಲವನ್ನು ಕೊಟ್ಟಿದ್ದಾರೆ ಅದನ್ನು ನಿರ್ದಾಕ್ಷಿಣ್ಯವಾಗಿ ವಸೂಲ್ಮಾಡುತ್ತಿದ್ದಾರೆ. ಅವರ ಮನೆಗಳಲ್ಲಿ ಮದುವೆ ಆಗುತ್ತಿದ್ದ ಸಮಯದಲ್ಲೇ ಮನೆಯೊಳಗೆ ನುಗ್ಗಿ ಸಾಲವನ್ನು ವಸೂಲ್ಮಾಡುತ್ತಿದ್ದಾರೆ, ಇದು ಸರಿಯಲ್ಲ.

ಇಷ್ಟು ಮಾತುಗಳನ್ನು ಹೇಳಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಸವರಾಜ ಹೆಚ್. ಪಾಟೀಲ್ (ಹುಮ್ನಾಬಾದ್).—ಮಾನ್ಯ ಅಧ್ಯಕ್ಷರೆ, ಈ ದಿವಸ ಮಾನ್ಯ ಸಹಕಾರ ಮಂತ್ರಿಯವರು ಈ ಸದನದ ಮುಂದೆ ತಂದಿರತಕ್ಕ ಬೇಡಿಕೆಯನ್ನು ಸ್ವಾಗತ ಮಾಡುತ್ತಾ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಮಾನ್ಯ ಹಿರಿಯ ಶಾಸಕರಾದ ಶ್ರೀ ದೇವೇಗೌಡರು ಹೇಳಿದಂತೆ ಮಾಡಿದರೆ ವಸೂಲಾತಿ ಕ್ರಮ ಕೂಡ ಬಹಳ ತೀವ್ರಗತಿಯಲ್ಲಿ ಆಗುತ್ತದೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗ ಸಹಕಾರ ಸಂಘಗಳಿಂದ ರೈತರಿಗೆ ಏನು ಸಾಲವನ್ನು ಕೊಡುತ್ತೀರಿ ಅದರಲ್ಲಿ ಸುಮಾರು ೬೫ ಪರ್ಸೆಂಟ್ ಕೂಡ ಸಾಲ ವಾಪಸ್ಸು ಬರುತ್ತಿಲ್ಲ. ಈ ಸಾಲ ವಾಪಸ್ಸು ಬರದಿದ್ದರೆ, ಬೇರೆ ರೈತರಿಗೆ ಹೊಸದಾಗಿ ಸಾಲ ಕೊಡುವುದಕ್ಕೆ ಹಣ ಇರುವುದಿಲ್ಲ. ಇದು ಏತಕ್ಕೆ ಹೀಗೆ ಆಗುತ್ತಿದೆ ಎಂದರೆ, ನಾನು ತೆಗೆದುಕೊಂಡಿರುವ ಸಾಲವನ್ನು ಸೊಸೈಟಿಗೆ ವಾಪಸ್ಸು ಕೊಟ್ಟರೆ ಮತ್ತೆ ನನಗೆ ಸಾಲ ಸಿಕ್ಕುತ್ತದೋ, ಇಲ್ಲವೋ ಎಂಬ ಅನುಮಾನ ಬಂದಿದೆ. ಇದರಿಂದಾಗಿ ರೈತರು ತೆಗೆದುಕೊಂಡ ಸಾಲವನ್ನು ವಾಪಸ್ಸು ಕೊಡುವುದಕ್ಕೆ ಹೋಗುತ್ತಿಲ್ಲ. ಇದನ್ನು ಸರ್ಕಾರ ಗಮನಿಸಬೇಕು.

ಇನ್ನೊಂದು ವಿಚಾರ ಹೇಳುವುದಾದರೆ. ಈಗ ರೈತ ಸಕಾಲದಲ್ಲಿ ತಾನು ತೆಗೆದುಕೊಂಡ ಸಾಲವನ್ನು ವಾಪಸ್ಸು ಕೊಡದಿದ್ದರೆ ಅವನ ಜಮೀನನ್ನು ಸಹಕಾರ ಸಂಸ್ಥೆಯವರು ಹರಾಜು ಹಾಕುತ್ತಾರೆ, ಇಲ್ಲವೇ ಸಂಸ್ಥೆಯ ಹೆಸರಿನಲ್ಲಿ ಉಳಿಯುತ್ತದೆ. ಕೆಲವು ದಿನಗಳ ನಂತರ ಆ ರೈತ ಹಣವನ್ನು ಶೇಖರಿಸಿಕೊಂಡು ಹೋಗಿ ಆ ಸಂಸ್ಥೆಗೆ ಕೊಟ್ಟರೆ ಆ ರೈತನ ಜಮೀನನ್ನು ಅವರು ವಾಪಸ್ಸು ಕೊಡುವಂತೆ ಮಾಡಬೇಕು. ಈ ಅಧಿಕಾರವನ್ನು ಜಿಲ್ಲಾಧಿಕಾರಿಯವರಿಗಾಗಲಿ ಅಥವಾ ವಿಶೇಷ ಜಿಲ್ಲಾಧಿಕಾರಿಯವರಿಗಾಗಲಿ ಕೊಡುವುದು ಒಳ್ಳೆಯದೆಂದು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಪಿ. ಎಲ್. ಡಿ. ಬ್ಯಾಂಕ್‌ನಿಂದ ಬಾವಿಗಳನ್ನು ತೋಡಿಸುವ ಸಲುವಾಗಿ ರೈತರಿಗೆ ಸಾಲವನ್ನು ಕೊಡಲಾಗಿದೆ. ಅವರು ಆ ದುಡ್ಡಿನಲ್ಲಿ ಬಾವಿಗಳನ್ನು ತೋಡಿಸಿದ್ದಾರೆ. ಆದರೆ ಎಷ್ಟೋ ಬಾವಿಗಳಲ್ಲಿ ನೀರೇ ಬಂದಿಲ್ಲ. ಆದ್ದರಿಂದ ಅಂಥವರಿಗೆ ಕೊಟ್ಟಿರತಕ್ಕ ಸಾಲವನ್ನು ಮನ್ನಾ ಮಾಡುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ? ಆ ಬಾವಿಗಳನ್ನು ಭೂಗರ್ಭ ಇಲಾಖೆಯು ವರು ಹೋಗಿ ಪರೀಕ್ಷೆ ಮಾಡಲು ಹೇಳಿದ್ದೀರಾ ? ಪ್ರತಿಯೊಂದು ಬಾವಿಯಲ್ಲೂ ನೀರು ಬಂದಿದೆಯೋ, ಇಲ್ಲವೇ ಎಂಬುದನ್ನು ನೋಡಲು ಅಸಿಸ್ಟೆಂಟ್ ಕಮೀಷನರ್‌ರವರಿಗೆ ಸಾಧ್ಯವಿರುವುದಿಲ್ಲ. ಕಾರಣ, ಅವರಿಗೆ ಬಹಳ ಕೆಲಸ ಇರುತ್ತದೆ. ಅವರೇ ಹೋಗಿ ಎಲ್ಲ ಬಾವಿಗಳನ್ನೂ ನೋಡಿಕೊಂಡು ಬರಲಿ ಎಂದರೆ ಅಷ್ಟು ಹೊತ್ತಿಗೆ ಎಲ್ಲ ಕಡೆಯಲ್ಲೂ ಮಳೆ ಬಂದು ಆ ಬಾವಿಗಳಲ್ಲಿ ನೀರು ತುಂಬಿಕೊಂಡು ಮೇಲೇ ನೀರು ಇದ್ದ ಹಾಗೆ ಕಾಣುತ್ತದೆ. ಏಕೆಂದರೆ ಈಗ ಮಳೆಗಾಲ. ಮಳೆಗಾಲದಲ್ಲಿ ಅಧಿಕಾರಿಗಳು ಅಲ್ಲಿಗೆ ಹೋಗಿ ನೋಡಿ, ಆ ಬಾವಿಯಲ್ಲಿ ನೀರು ಬಂದಿರುವುದರಿಂದ ಇವರಿಗೆ ಕೊಟ್ಟಿರುವ ಸಾಲವನ್ನು ಮನ್ನಾ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ತಮ್ಮ ವರದಿಯಲ್ಲಿ ಬರೆದು ಕಳುಹಿಸಿಬಿಡುತ್ತಾರೆ. ಆದ್ದರಿಂದ ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಆದೇಶವನ್ನು ಕೊಟ್ಟು, ಮಳೆ ಬರುವುದಕ್ಕೆ ಮುಂಚಿತವಾಗಿ ಯಾವ ಯಾವ ಬಾವಿಗಳಲ್ಲಿ ನೀರು ಬಂದಿಲ್ಲ ಎಂಬುದನ್ನು ಇನ್‌ಸ್ಪೆಕ್ಷನ್ ಮಾಡಿಕೊಂಡು ಬಂದು ತಮ್ಮ ವರದಿಯನ್ನೊಪ್ಪಿಸಬೇಕೆಂದು ಹೇಳಬೇಕು. ಹರಿಜನ ಗಿರಿಜನರಿಗೆ ಸೊಸೈಟಿ ಮುಖಾಂತರ ಸಾಲ ಕೊಡಬೇಕೆಂದು ಷೇರುಗಳನ್ನು ಕಲೆಕ್ಟ್ ಮಾಡಿದ್ದಾರೆ. ಕೆಲವು ಸೊಸೈಟಿಗಳಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಶಿವಪ್ಪನವರಂಥ ಸದಸ್ಯರುಗಳಿರಬಹುದು. ಅವರಿಗೆ ಹಣದ ಅಭಾವ ಇಲ್ಲ. ಆದರೆ ನಮ್ಮ ಸೊಸೈಟಿಗೆ ಹಣಕಾಸಿನ ಮುಗ್ಗಟ್ಟು ಬಹಳ ಇದೆ. ಷೇರುಗಳನ್ನು ಕೊಡದೇ ಹೋದರೆ ಅವರು ಸಾಲವನ್ನು ಕೊಡುವುದಿಲ್ಲ. ಆದ್ದರಿಂದ ಈ ವರ್ಗದ ಜನರಿಗೆ ಹೆಚ್ಚಿಗೆ ಸಾಲ ಕೊಡಲು ಅನುಕೂಲವಾಗುವಂತೆ ಸೊಸೈಟಿಯವರಿಗೆ ಹೆಚ್ಚಿನ ಹಣವನ್ನು ಒದಗಿಸಿಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

ಈಗ ಇನ್ನೊಂದು ಏನಾಗಿದೆ ಎಂದರೆ ಋಣಪರಿಹಾರದ ಕಾನೂನು ಬಂದನಂತರ ಹಳ್ಳಿಗಳಲ್ಲಿ ಯಾವ ಸಾಹುಕಾರರೂ ಕೂಡ ಬಡವರಿಗೆ, ರೈತರಿಗೆ ಸಾಲವನ್ನು ಕೊಡುತ್ತಿಲ್ಲ, ಬಡವರಿಗೆ ನಿತ್ಯ ಜೀವನದಲ್ಲಿ ಅನೇಕ ರೀತಿಯ ಕಾಯಿಲೆಗಳು ಬರುತ್ತವೆ. ಅವರ ಹೆಂಡತಿ ಮಕ್ಕಳು ಕಾಯಿಲೆ ಬೀಳುತ್ತಾರೆ. ಆಗ ಇವರಿಗೆ ಯಾರು ಕೂಡ ಸಾಲ ಕೊಡುವುದಿಲ್ಲ. ಆದ್ದರಿಂದ ಹಳ್ಳಿಗಳಲ್ಲಿ ಸಣ್ಣ ಸಣ್ಣ ಸೊಸೈಟಿಗಳು ಹಾಗೂ ಬ್ಯಾಂಕ್‌ಗಳ ಮೂಲಕ ೫೦–೧೦೦ ರೂಪಾಯಿಗಳವರೆಗೆ ಅವರಿಗೆ ಸಾಲ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕು.

ಇನ್ನು ಮಾನ್ಯ ಮಾರುಕಟ್ಟೆ ಸಚಿವರಿಗೆ ಕೆಲವು ಸಲಹೆಗಳನ್ನು ಕೊಡ ಬಯಸುತ್ತೇನೆ. ದಕ್ಷಿಣ ಭಾರತದಲ್ಲೇ ಅತ್ಯಂತ ಹೆಚ್ಚು ಹತ್ತಿಯನ್ನು ಬೆಳೆಯತಕ್ಕ ಪ್ರದೇಶ ನಮ್ಮ ರಾಯಚೂರು ಜಿಲ್ಲೆ ಎಂಬುದನ್ನು ಬಹಳ ಹೆಮ್ಮೆಯಿಂದ ಹೇಳಿ ಕೊಳ್ಳಬಹುದು. ಆದರೆ ಅದಕ್ಕೆ ಸರಿಯಾದ ಬೆಲೆ ಮಾತ್ರ ಸಿಕ್ಕುತ್ತಿಲ್ಲ. ಅಲ್ಲಿ ದಳ್ಳಾಳಿಗಳು ಮನಾಪಲಿ ಮಾಡಿಕೊಂಡಿದ್ದಾರೆ. ಅವರು ೨ ಲೈಸೆನ್ಸ್ ಹೊಂದಿರುತ್ತಾರೆ ಅಡತಿದಾರರೂ ಅವರೇ. ಖರೀದಿದಾರರು ಅವರೇ ಆವರು ರೈತರಿಂದ ಹತ್ತಿಯನ್ನು ಖರೀದಿ ಮಾಡಿಕೊಳ್ಳುತ್ತಾರೆ, ಆದರೆ ತಕ್ಷಣ ಅವರಿಗೆ ಹಣವನ್ನು ಕೊಡುವುದಿಲ್ಲ. ಆದ್ದರಿಂದ, ಹತ್ತಿಯನ್ನು ರೈತರು ಮಾರಾಟ ಮಾಡಿದ ಕೂಡಲೇ ಅವರಿಗೆ ತಕ್ಷಣ ಹಣವನ್ನು ಕೊಡಿಸುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ನಮ್ಮ ಜಿಲ್ಲೆಯಲ್ಲಿ ಏನು ಶ್ರೀಮಂತರಿದ್ದಾರೆ ಅವರು ಹತ್ತಿಯನ್ನು ಬಹಳ ಕಡಿಮೆ ದರದಲ್ಲಿ ಖರೀದಿ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ರೈತರಿಗೆ ಏನಾದರೂ ಹಣದ ಸಹಾಯ ಮಾಡದಿದ್ದರೆ ಆ ಶ್ರೀಮಂತರಿಂದ ಅವರು ಹಾಳಾಗುತ್ತಾರೆ. ಅಲ್ಲಿ ಖರೀದಿ ಮಾಡುವಾಗ, ದಳ್ಳಾಳಿಗಳು ಶ್ರೀಮಂತರಿಂದ ಲಂಚ ತೆಗೆದುಕೊಂಡು ಬಡ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ ಅಲ್ಲಿರತಕ್ಕಂಥ ಶ್ರೀಮಂತರು ಮತ್ತು ವ್ಯವಹಾರಿಕರು ಸೇರಿಕೊಂಡು ಕಡಿಮೆ ಬೆಲೆಯಲ್ಲಿ ಟೆಂಡರ್ ಹಾಕಿ ಅಲ್ಲಿನ ಅಧಿಕಾರಿಗಳ ಜೊತೆಯಲ್ಲಿ ಸಾಮೂಲಾಗಿ ಕಡಿಮೆ ದರದಲ್ಲಿ ಹತ್ತಿಯನ್ನು ಕೊಳ್ಳುತ್ತಿದ್ದಾರೆ. ಒಂದೇ ಮಾಲಿಗೆ ಎರಡು ಗ್ರೇಡ್‌ಗಳನ್ನು ಅಂದರೆ ಎ ಗ್ರೇಡ್ ಮತ್ತು ಬಿ ಗ್ರೇಡ್ ಗಳೆಂದು ಕೊಟ್ಟು ಅವರಿಗೆ ಮೋಸ ಮಾಡುತ್ತಿದ್ದಾರೆ. ಒಬ್ಬನೇ ರೈತ ಬೆಳೆದ ಮಾಲಿಗೆ ಎರಡು ಗ್ರೇಡ್‌ಗಳನ್ನು ಮಾಡುವುದು ಸರಿಯೇ ? ಇದನ್ನು ಒಂದು ಉದಾಹರಣೆಗೆ ಆಗಿ ಹೇಳುತ್ತಿದ್ದೇನೆ. ಇನ್ನು ಒಂದು

ಕ್ವಿಂಟಾಲ್‌ಗೆ ೨೦ ರೂಪಾಯಿನಂತೆ ಕಮಿಷನ್ ಮಾತನಾಡಿ ಹೆಚ್ಚಿಗೆ ರೇಟು ಬರುವಂತಾದ್ದನ್ನು ತಪ್ಪಿಸಲಿಕ್ಕೆ ಅಲ್ಲಿ ವ್ಯವಹಾರಿಕರು ಮತ್ತು ದಳ್ಳಾಳಿಗಳು ಸೇರಿಕೊಂಡು ಅಧಿಕಾರಿಗಳಿಗೆ ಲಂಚ ಕೊಟ್ಟು ರೈತರನ್ನು ಹಾಳು ಮಾಡುತ್ತಿದ್ದಾರೆ. ಇವರ ಬಗ್ಗೆ ಸರ್ಕಾರದವರು ಶೀಘ್ರ ಕ್ರಮವನ್ನು ತೆಗೆದುಕೊಳ್ಳುತ್ತಾರೆಂಬ ಆಶೆಯನ್ನು ಹೊಂದಿದ್ದೇನೆ. ಇನ್ನು ಹತ್ತಿ ಮಾರ್ಕೆಟ್‌ನಲ್ಲಿ ಏನಾದರೂ ಬೆಂಕಿ ಅನಾಹುತ ಜರುಗಿದರೆ ಅದನ್ನು ಆರಿಸಲು ತಮ್ಮದೇ ಆದ ಒಂದು ಫೈರ್ ಸ್ಟೇಷನ್ನ್ ಅನ್ನು ಮಾರ್ಕೆಟ್ ಯಾರ್ಡ್‌ನಲ್ಲಿ ಮಾಡಿದರೆ ಒಳ್ಳೆಯದು ಎಂದು ಹೇಳುತ್ತೇನೆ. ಇನ್ನು ನಮ್ಮ ರಾಯಚೂರ್‌ನಲ್ಲಿ ಅರಳೆ ಮಾರ್ಕೆಟ್ ಮಾಡಲಿಕ್ಕೆ ೩೦೦ ಎಕರೆ ಭೂಮಿಯನ್ನು ಅಕ್ವೈರ್ ಮಾಡಿಕೊಂಡು ಬಹಳ ದಿವಸಗಳು ಆದರೂ ಅಲ್ಲಿ ಮಾರ್ಕೆಟ್ ಯಾರ್ಡ್‌ಅನ್ನು ಮಾಡಿಲ್ಲ. ಈಗ ಆ ಭೂಮಿಯನ್ನು ರೈತ ಸಾಗು ಮಾಡಲು ಬರುವಂತಿಲ್ಲ. ಆ ರೀತಿ ಮಾಡಿದ್ದಾರೆ. ಆದ್ದರಿಂದ ಕೂಡಲೇ ಅಲ್ಲಿ ಅರಳೆ ಮಾರ್ಕೆಟ್ ಮಾಡುವ ವ್ಯವಸ್ಥೆಮಾಡಬೇಕೆಂದು ಹೇಳುತ್ತೇನೆ. ಮಸ್ಕಿ ಮತ್ತು ಮುದಗಲ್ ಹತ್ತಿ ಮತ್ತು ಸೆಂಗಾಯಿ ಬೆಳೆಯುವ ಪ್ರದೇಶಗಳಾಗಿದ್ದರೂ ಕೂಡ ಅಲ್ಲಿ ಯಾವುದೇ ಮಾರ್ಕೆಟ್ ಸೌಲಭ್ಯವಿಲ್ಲ, ಆದ್ದರಿಂದ ಅಲ್ಲಿ ಮಾರ್ಕೆಟ್ ಕಟ್ಟಲು ಬೇಕಾದ ಜಮೀನನ್ನು ಕೊಡಬೇಕೆಂದು ಸರ್ಕಾರಕ್ಕೆ ಪತ್ರವ್ಯವಹಾರ ಮಾಡಿದ್ದರೂ ಪ್ರಯೋಜನ ಕಾಣಲಿಲ್ಲ. ಇವತ್ತಿನ ದಿವಸ, ವರ್ಲ್ಡ್ ಬ್ಯಾಂಕಿನ ಸ್ಕೀಮಿನಲ್ಲಿ ಎಲ್ಲಿ ಬೆಳೆ ಬೆಳೆಯುವುದಿಲ್ಲವೋ ಅಲ್ಲಿ ಮಾರ್ಕೆಟ್‌ಗಳನ್ನು ಕಟ್ಟಲು ಪ್ರಯತ್ನಗಳು ನಡೆಯುತ್ತಿವೆ, ಆದರೆ ಎಲ್ಲಿ ಜಾಸ್ತಿ ಅರಳೆ ಮತ್ತು ಸೆಂಗಾಯಿ ಬೆಳೆ ಬೆಳೆಯುತ್ತದೆ ಅಲ್ಲಿ ಮಾರ್ಕೆಟ್ ಇಲ್ಲ. ವ್ಯಾಪಾರವಿಲ್ಲದಕಡೆ ಮಾರ್ಕೆಟ್‌ಗಳಿರುತ್ತವೆ. ನಾನು ಆಗಲೇ ಹೇಳಿದ ಎರಡು ಜಾಗಗಳಲ್ಲಿ ಸುಮಾರು ೩ ಸಾವಿರ ಕ್ವಿಂಟಾಲ್‌ಗಿಂತ ಜಾಸ್ತಿ ಬೆಳೆ ಬೆಳೆಯುತ್ತಿದ್ದಾರೆ ಜೊತೆಗೆ ಅಲ್ಲಿ ಸುತ್ತ ಮುತ್ತ ೪-೫ ಫ್ಯಾಕ್ಟರಿಗಳು ಇವೆ. ಆದ್ದರಿಂದ ಅಲ್ಲಿ ಶೀಘ್ರಗತಿಯಲ್ಲಿ ಮಾರ್ಕೆಟ್ ಯಾರ್ಡ್ ಕಟ್ಟಿಸಿಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಇನ್ನು ಕೆಲವು ಕಡೆ ಮಾರ್ಕೆಟ್ ಇಲ್ಲದೆ ಇರುವುದರಿಂದ ಸೊಸೈಟಿಯವರು ಏನು ಮಾಲನ್ನು ತೆಗೆದುಕೊಳ್ಳುತ್ತಾರೆ ಅವಕ್ಕೆ ಪೇಮೆಂಟ್‌ನ್ನು ಒಂದೂವರೆ ತಿಂಗಳಾದರೂ ಕೊಡುತ್ತಿಲ್ಲ, ಅದೇ ವ್ಯವಹಾರಿಕರು ಮತ್ತು ದಳ್ಳಾಳಿಗಳಿಗೆ ಕಮಿಷನ್ ಕೊಟ್ಟರೆ ಕೂಡಲೇ ಹಣ ಸಿಕ್ಕುತ್ತದೆ. ಆದ್ದರಿಂದ ರೈತ ಬೆಳೆದ ಮಾಲಿಗೆ ಮಾರ್ಕೆಟ್ ಇಲ್ಲದೆ ಇರುವಾಗ ಅವನ ಮಾಲನ್ನು ತೆಗೆದುಕೊಂಡು ಗೋಡೌನ್‌ಗಳಲ್ಲಿಟ್ಟು ಅವಕ್ಕೆ ಬೆಲೆ ಬರುವ ತನಕ ಶೇಕಡಾ ೭೫ ರಷ್ಟು ಹಣವನ್ನು ಕೊಡುವಂತೆ ಮಾಡಬೇಕು ಎಂದು ಹೇಳುತ್ತೇನೆ. ವೇರ್ ಹೌಸಿಂಗ್ ಮುಖಾಂತರ ರೈತನಿಗೆ ಗೋಡೋನ್ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇದೇ ಸಂದರ್ಭದಲ್ಲಿ. ಒಂದು ದುಃಖದ ಸಂಗತಿಯನ್ನು ಈ ಸದನದಲ್ಲಿ ತರುವುದಕ್ಕೆ ಬಯಸುತ್ತೇನೆ. ಅದು ಏನು ಎಂದರೆ ನಮ್ಮ ಭಾಗದಲ್ಲಿ ಇನ್ನೂ ಮಳೆಯಾಗಿಲ್ಲ, ರೈತರ ಕಷ್ಟ ಹೇಳತೀರದು, ಆದ್ದರಿಂದ ರೈತರು ಏನು ಸಾಲ ತೆಗೆದುಕೊಂಡಿದ್ದಾರೆ ಅದನ್ನು ಸಧ್ಯಕ್ಕೆ ರಿಕವರಿ ಮಾಡದಂತೆ ನಿಲ್ಲಿಸಬೇಕೆಂದು ಅಧ್ಯಕ್ಷರ ಮುಖಾಂತರ ಮಾನ್ಯ ಸಹಕಾರ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರೆ. ನನ್ನ ಮಾನ್ಯಮಿತ್ರರು ಮಾತನಾಡುವಾಗ ನನಗೆ ಅವಕಾಶ ಕೊಡಬೇಕೆಂದು ಕೇಳಿದೆ ಕಾರಣವಾದರೂ ಇಷ್ಟೆ, ನಾವು ಯಾವಾಗಲೂ ಮಾತನಾಡುವವರಲ್ಲ. ಜೊತೆಗೆ ನಾವು ಹೊಸದಾಗಿ ಬಂದಿರುವವರು. ನಮಗೆ ಮುಂದೆಯೂ ಇದೇ ರೀತಿ ಸ್ವಲ್ಪ ಜಾಸ್ತಿ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಕೇಳಿ ಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು, ತಿಳಿದುಕೊಳ್ಳಬೇಕು, ನಾನು ತಮಗೆ ಸಮಯ ಕೊಡಲಿಕ್ಕೆ ಅಭ್ಯಂತರವಿಲ್ಲ ಆದರೆ ನಿಮ್ಮ ವಿಪ್ ಏನು ನನಗೆ ಹೆಸರುಗಳನ್ನು ಕೊಡುತ್ತಾರೆ ಅವರ ಪ್ರಕಾರ ಪ್ರತಿಯೊಬ್ಬರಿಗೂ ಅವಕಾಶ ಕೊಡಬೇಕಾಗುತ್ತದೆ. ಯಾರಿಗೂ ಅವಕಾಶ ಕೊಡಬಾರದು ಎನ್ನುವ ಭಾವನೆ ನನಗೆ ಇಲ್ಲ.

Discussion on Demands No. 54 and No. 55 is concluded. The Hon. Ministers will reply tomorrow after the question hour. There will be two sittings tomorrow. Morning sitting will be from 9-00 A. M. to 12-30 P. M. and the second sitting will be from 2-00 P. M. to 6-00 P. M.

ANNOUNCEMENT

I have received the following message from the Chairman, Legislative Council :

As required by rule 106 of the Rules of Procedure and conduct of Business in the Legislative Council, I send herewith THE KARNATAKA TAX ON ENTRY OF GOODS INTO A LOCAL AREA FOR CONSUMPTION, USE OR SALE THEREIN BILL, 1980, which has been agreed to by the Legislative Council on 14th July, 1980 without amendments.

ಶ್ರೀ ಎ. ಬಿ. ಜಕನೂರ್.—ಬೆಳಿಗ್ಗೆ ಪ್ರಸ್ತಾಪವಾದ ವಿಚಾರದ ಬಗ್ಗೆ ಹೇಳುವುದಾದರೆ, ಧಾರವಾಡ ದಲ್ಲಿ ಎಷ್ಟು ಸೊಸೈಟಿಗಳಿಗೆ ಬಿನ್ನಿ ಬಟ್ಟೆಗಳನ್ನು ಕೊಳ್ಳಲಿಕ್ಕೆ ಆದೇಶ ಕೊಟ್ಟಿದ್ದಾರೆಂದು ನಾನು ವಿಚಾರ ಮಾಡಿದಾಗ ಈ ಕೆಳಕಂಡ ಸೊಸೈಟಿಗಳಿಗೆ ಮತ್ತು ಜನತಾ ಬಜಾರ್ ಗದಗ್–ಇವಕ್ಕೆ ಆರ್ಡರ್ ಪ್ಲೇಸ್ ಮಾಡಲಿಕ್ಕೆ ಕೊಟ್ಟಿದ್ದಾರೆ. ಅದರ ವಿವರ ಈ ರೀತಿ ಇದೆ:

Neither the Deputy Registrar of Co-operative Societies, Dharwad nor the Assistant Registrar of Co-op. Societies has issued intructions to purchase Binny cloth to any of the Co-operative institutions in Dharwad District.

However, it is ascertained that the following Co-operative Societies have placed orders for the supply of Binny cloth :

Sl. No.	Name of the Society	Extent to which order was placed	Advance paid
1.	Janatha Bazaar, Gadag	Rs. 27,000	Rs. 3,000
2.	University consumers Stores, Dharwad.	Rs. 24,000	Rs. 2,500
3.	Railway Employees Co-op. Society, Ltd., Hubli.	Rs. 13,000	...
4.	Mundargi T.A.P.C.M.S.	Rs. 30,000	Rs. 2,500
5.	Manthur Doddapramanada Prathamika Pathina Sahakara Sangha. Ltd.,	Rs. 35,000	Rs. 9,000
6.	Siraguppi G. S. S.	Rs. 23,000	Rs. 5,000
7.	Nagasetty Koppa G. S. S.	Rs. 12,000	Rs. 3,000
	Total	1,64,000	Rs 25,000

They are doing textile business.

It is reported that for this purpose, no assistance has been given by/taken from D C.C. Bank.

—reg. brother-in-law...

ಇನ್ನು ನನ್ನ ಬ್ರದರ್-ಇನ್-ಲಾ ಇದ್ದಾರೆ ಎಂದು ಹೇಳಿದಾಗ ಯಾರೂ ನನ್ನ ಬ್ರದರ್-ಇನ್-ಲಾ ಇಲ್ಲ ಎಂದು ಹೇಳಿದೆ. ಆದರೆ ನಮ್ಮ ತಾಯಿಯ ತಮ್ಮ ಬ್ರದರ್-ಇನ್-ಲಾ ಆಗುವುದಾದರೆ ಇದ್ದಾರೆ, ಮತ್ತೆ ನನ್ನ ಹೆಂಡತಿ ತಮ್ಮ ಒಬ್ಬರು ಇದ್ದಾರೆ ಅವರು ಬ್ರದರ್-ಇನ್-ಲಾ ಎಂದು ಹೇಳುವುದಾದರೆ ಅವರು ಯಾರು ಬಿನ್ನಿ ಮಿಲ್ ಹೋಲ್‌ಸೇಲ್ ಏಜೆಂಟ್ ಆಗಿಲ್ಲ, ಮತ್ತು ಅವರು ಯಾರೂ ಈ ಸಂತೆಯಲ್ಲಿ ತೊಡಗಿಲ್ಲ; ಅವರು ವ್ಯವಸಾಯ ಮಾಡುತ್ತಾರೆ. ಇದರಲ್ಲಿ ಯಾವ ರೀತಿಯಿಂದಲೂ ಭಾಗವಹಿಸುವವರು ಇಲ್ಲ. ಇನ್ನು ಮಾನ್ಯ ಸದಸ್ಯರು ಬೇರೆ ಯಾವುದೋ ಸೊಸೈಟಿಗಳ ಬಗ್ಗೆ ಮಾಹಿತಿ ಇದೆ ಎಂದು ಹೇಳುತ್ತಿದ್ದಾರೆ. ಅದನ್ನು ತಿಳಿಸಿದರೆ ಅದನ್ನೂ ಕೂಡ ನಾನು ತಪಾಸಣೆ ಮಾಡಿ ವಿವರಗಳನ್ನು ಒದಗಿಸುವುದಕ್ಕೆ ತಯಾರಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ಕೊಟ್ಟಿರುವ ವಿವರ ಪೂರ್ಣ ಪ್ರಮಾಣದ್ದಲ್ಲ, ಇನ್ನು ಕೆಲವು ಸೊಸೈಟಿಗಳು ನನ್ನ ಜಿಲ್ಲೆಯಲ್ಲಿ ಇವೆ. ಅವುಗಳ ಹೆಸರು ಜ್ಞಾಪಕವಿಲ್ಲ. ಅವನ್ನು ತಿಳಿಸುತ್ತೇನೆ ಮತ್ತು ಅವುಗಳ ಬಗ್ಗೆ ಮಾಹಿತಿ ಒದಗಿಸಬೇಕು ಎಂದು ಕೇಳುತ್ತೇನೆ.

ಶ್ರೀ ಎ. ಬಿ. ಜಕನೂರು.—ಅವರು ಆ ಸೊಸೈಟಿಗಳು ಯಾವುವು ಎಂಬುದನ್ನು ತಿಳಿಸಲಿ. ಅದಕ್ಕೆ ನಾನು ಮಾಹಿತಿ ತಪಾಸಣೆ ಮಾಡಿ ವಿವರಗಳನ್ನು ತರಿಸಿಕೊಡುತ್ತೇನೆ.

೮-೩೦ ಪಿ. ಎಂ.

ಶ್ರೀ ಎಸ್ ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ. ಈಗ ಮಾನ್ಯ ಮಂತ್ರಿಗಳು ಏನು ಹೇಳಿಕೆ ಕೊಟ್ಟಿದ್ದಾರೆ ಅದು ಅಪೂರ್ಣವಾಗಿದೆ. ಆದ್ದರಿಂದ ಅವರು ಪೂರ್ಣವಾದ ವಿವರಗಳನ್ನು ಅಧಿಕಾರಿಗಳಿಂದ ತರಿಸಲಿ. ರಾಜ್ಯದ ಎಲ್ಲಾ ಜಿಲ್ಲೆಗಳ ಯೂ ಬಿನ್ನಿ ಮತ್ತು ಪ್ರೈವೇಟ್ ಮರ್ಚೆಂಟ್‌ಗಳಿಂದ ಮತ್ತು ಬೇರೆ ಮಿಲ್‌ಗಳಿಂದ ಬಟ್ಟೆಯನ್ನು ಖರೀದಿ ಮಾಡಿರತಕ್ಕ ಅಂಕಿ ಅಂಶಗಳನ್ನು ತರಿಸಬೇಕು. ಜಿಲ್ಲಾ ಬ್ಯಾಂಕುಗಳವರು, ಬಟ್ಟೆಯನ್ನು ಖರೀದಿ ಮಾಡುವುದಕ್ಕೆ ಹಣವನ್ನು ಒದಗಿಸಿದ್ದಾರೆ ಬೆಳಗಾಂ ಡಿಸ್ಟ್ರಿಕ್ಟ್ ಬ್ಯಾಂಕ್ ಮತ್ತು ಇನ್ನು ಕೆಲವು ಜಿಲ್ಲೆಗಳ ಬ್ಯಾಂಕುಗಳವರು ಬಟ್ಟೆಯನ್ನು ಖರೀದಿ ಮಾಡುವುದಕ್ಕೆ ಸ್ಪೆಷಲ್ ಆಗಿ ಹಣವನ್ನು ಕೊಟ್ಟಿದ್ದಾರೆ. ಆ ಅಂಕಿ ಅಂಶಗಳನ್ನೆಲ್ಲಾ ತರಿಸಿದ ಮೇಲೆ ಇದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಎ. ಬಿ. ಜಕನೂರ್.—ವಿವರಗಳನ್ನು ತರಿಸೋಣ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಅದಕ್ಕಾಗಿ ನಾನು ಈಗ ಹೇಳಿದ ವಿವರಗಳನ್ನು ತರಿಸಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನನ್ನ ಜಿಲ್ಲೆಯಾದ ಧಾರವಾಡದಿಂದ ಏನು ಅಂಕಿ ಅಂಶಗಳನ್ನು ಮಾನ್ಯ ಮಂತ್ರಿಗಳು ತರಿಸಿದ್ದಾರೆ ಅದು ಅಪೂರ್ಣವಾಗಿದೆ ಮೂರು ಸೊಸೈಟಿಗಳು ಎಂದು ಹೇಳಿದ್ದಾರೆ ಆದರೆ ಅವುಗಳ ಹೆಸರು ಇಲ್ಲ.

ಶ್ರೀ ಎ. ಬಿ. ಜಕನೂರ್.—ಈಗ ನಾನು ತಿಳಿಸಿದ ಅಂಕಿ ಅಂಶಗಳನ್ನು ಫೋನ್ ಮೂಲಕ ತರಿಸಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಕೆಲವು ಮಾಹಿತಿಗಳನ್ನು ತರಿಸಿದ್ದೀರಿ, ಉಳಿದ ಜಿಲ್ಲೆಗಳ ಮಾಹಿತಿಯನ್ನು ತರಿಸಿದ ಆಮೇಲೆ ಚರ್ಚೆ ಮಾಡೋಣ.

MR. SPEAKER.—The House now stands adjourned to meet tomorrow at 9 A. M,

(The House adjourned at Twenty two minutes past Seven of the Clock to meet again on Wednesday the 16th August 1980. at Nine of the Clock).

W D 2816